ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷಣಿಯವರೇ, 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, 1991ನೇ ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು..

ಉಪಾಧ್ಯಕ್ಷರು: ಈಗ ಈ ಮನೆಯ ಕಲಾಪಗಳನ್ನು ಮುಂದೂಡಿ, ಮತ್ತೆ 2.30ಕ್ಕೆ ಸೇರಲಾಗುವುದು.

ಸದನವು ಮಧ್ಯಾಹ್ನ 1.35ಕ್ಕೆ ಮುಕ್ತಾಯವಾಗಿ ಮತ್ತೆ 2-30ಕ್ಕೆ ಸೇರಲು ನಿಶ್ಚಯಿಸಿತು.

ಸದನವು ಪುನಃ 2ಗಂಟೆ 55ನಿಮಿಷಗಳಿಗೆ ಸಮಾವೇಶಗೊಂಡಿತು)

ಉಪಾಧ್ಯಕ್ಷರು: (ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ) ಅಧ್ಯಕ್ಷ ಪೀಠದಲ್ಲಿದ್ದರು.

## ಶಾಸನ ರಚನಾ ಕಾರ್ಯಕಲಾಪಗಳು

### ಪರ್ಯಾಲೋಚನ ಪ್ರಸ್ತಾವ

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) : ಉಪಾಧ್ಯಕ್ಷಣೀಯರೇ, 1991ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾಪವನ್ನು ಮಂಡಿಸಲಾಯಿತು

+ ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಬಿಲ್ಲಿನ ವಿಷಯದಲ್ಲಿ ಅನೇಕ ದಿವಸಗಳ ಹಿಂದೆ ಒಂದು ಕಮಿಟಿಯನ್ನು ಕಾನ್ಸಿಟ್ಯೂಟ್ ಮಾಡಿ ಶ್ರೀ ಅಜ್ಜಿಬಾಳ ಹೆಗಡೆಯವರ ನೇತೃತ್ವದಲ್ಲಿ ಕಮಿಟಿ ಪ್ರಾರಂಭವಾಗಿತ್ತು, ಆಮೇಲೆ ಅನೇಕ ಸಲ ಸದನದ ಸಮಿತಿಯ ಸದಸ್ಯರ ಎದುರಿಗೆ ಸಹ ಚರ್ಚೆಯಾಗಿದೆ. ಚರ್ಚೆಯ ನಂತರ ಈ ಬಿಲ್ಲನ್ನು ಮಂಡಿಸಲಾಗಿದೆ. ಇದರಲ್ಲಿ ಪ್ರಾಮುಖ್ಯವಾಗಿ ರೈತಾಪಿ ಹಿತದ ಸಲುವಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ವಿವರಣೆ ಮಾಡಲಾಗಿದೆ. ಮಾರ್ಕೆಟ್ ಕಮಿಟಿಯ ಹಣವನ್ನು ರೈತರ ಉಪಯುಕ್ತತೆಗೆ ಬೇಕಾದಂತಹ ರಸ್ತೆಯಿರಲಿ, ಮತ್ತಾವ ಸಾಧನೆಗಳೇ ಇರಲಿ ಅವುಗಳನ್ನು ಸರ್ಕಾರದವರು ಪ್ರಿಸ್‌ಕ್ರೈಬ್ ಮಾಡುವ ರೀತಿಯಲ್ಲಿ ಮಾಡಬೇಕೆನ್ನುವ ರೀತಿಯಲ್ಲಿ ಇದರಲ್ಲಿ ಸೇರಿಸಲಾಗಿದೆ. ಆಗ್ರೋಬೇಸ್‌ಡ್ ಇಂಡಸ್ಟ್ರಿಗಳನ್ನು ಎಲ್ಲಿ ಪ್ರಾರಂಭ ಮಾಡುತ್ತಾರೆ ಅಂತಹ ಸೊಸೈಟಿಗಳಿಗೆ ಮಾರ್ಕೆಟ್ ಕಮಿಟಿಗಳ ಹಣವನ್ನು ತೊಡಗಿಸುವುದಕ್ಕೆ ಸೇವಾ ರೂಪದಿಂದ ಸಾಲದ ರೂಪದಲ್ಲಿ ಹಣವನ್ನು ತೊಡಗಿಸುವುದಕ್ಕೆ ಅನುಕೂಲವಾಗುವಂತೆ ಇದರಲ್ಲಿ ಅಳವಡಿಸಲಾಗಿದೆ. ಅದೂ ಅಲ್ಲದೆ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳು ಹಣದ ಅಭಾವದಿಂದ ಬಳಲುತ್ತಿರುವಾಗ ಇಂತಹ ತಾಲ್ಲೂಕು ಮಾರ್ಕೆಟ್ ಸೊಸೈಟಿಗಳಿಂದ ನೇರವಾಗಿ ಮಾರ್ಕೆಟ್ ಕಮಿಟಿಗಳು ತಮ್ಮ ಫಂಡ್ಸ್‌ನಿಂದ ಸಾಲದ ರೂಪದಲ್ಲಿ ಹಣವನ್ನು ತೆಗೆದುಕೊಂಡು ಉಪಯುಕ್ತವಾಗುವ ರೀತಿಯಲ್ಲಿ ಮಾಡಲಾಗಿದೆ. ಅದು ಅಲ್ಲದೆ ಹೊಸದಾಗಿ ಇದರ ವ್ಯಾಪ್ತಿಯಲ್ಲಿ ಬರುವಂತಹ ಮಾರ್ಕೆಟ್ ಕಮಿಟಿಯ ಆಡಳಿತ ಅವಧಿಯನ್ನು ಐದು ವರ್ಷ ಮಾಡಲಾಗಿದೆ. ಆ ಆಡಳಿತ ಸಮಿತಿಯಲ್ಲಿ ವ್ಯವಸಾಯಗಾರರು ಏಳು ಜನರು ಇದ್ದದನ್ನು ಇವತ್ತಿನ ದಿವಸ ಹೆಚ್ಚು ಜನರು

ವ್ಯಾಪಕವಾಗಿರುವಂತೆ ವ್ಯವಸ್ಥೆ ಮಾಡಲಾಗಿದೆ. ಅದರಲ್ಲಿ ಹೆಣ್ಣುಮಕ್ಕಳಿಗೆ ಒಂದು ಸ್ಥಾನವನ್ನು ಮೀಸಲಿಡಲಾಗಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳವರಿಗೆ ಮೀಸಲಾಗಿಡಲಾಗಿದೆ. ಹೊಸ ರೂಪವನ್ನು ಕೊಡುವಂತಹ ರೀತಿಯಲ್ಲಿ ಕಾನೂನು ಮಾಡಲಾಗಿದೆ. ಮೊದಲು ಐದು ವರ್ಷಗಳಾದ ಮೇಲೆ ಏನು ಮಾಡಬೇಕೆಂಬುದು ಕಾನೂನಿನಲ್ಲಿರಲಿಲ್ಲ. ಹೊಸ ತಿದ್ದುಪಡಿಯಲ್ಲಿ ತಹಶೀಲ್ದಾರ್‌ರವರು ಅಡ್ಮಿನಿಸ್ಟ್ರೇಟರ್ ಆಗಿ ತೆಗೆದುಕೊಳ್ಳಬೇಕೆಂದು ಇದರಲ್ಲಿ ಅಳವಡಿಸಲಾಗಿದೆ. ಮಾರ್ಕೆಟ್ ಇಯರನ್ನು ಸಹಕಾರ ಇಯರ್‌ನೊಂದಿಗೆ ಹೊಂದಾಣಿಕೆಯಾಗುವ ವ್ಯವಸ್ಥೆಯನ್ನು ಇದರಲ್ಲಿ ಮಾಡಿದ್ದೇವೆ. ಛೇರ್ಮನ್ ಆದವರು ಯಾವ ರೀತಿ ಕಾರ್ಯಕ್ರಮವನ್ನು ನಿರ್ವಹಿಸಬೇಕು ಈ ಎಲ್ಲಾ ಕಾರ್ಯಕ್ರಮಗಳನ್ನು ಇದರಲ್ಲಿ ಹಾಕಿಕೊಂಡಿದ್ದೇವೆ. ಈ ಮಾರ್ಕೆಟ್ ಆಕ್ಟ್ ರೈತರ ಸಲುವಾಗಿ ಉಪಯುಕ್ತವಾಗಿದೆ. ಹೊಸದಾಗಿ ರೈತರ ಅಭಿವೃದ್ಧಿಗಾಗಿ ಸಲಹೆಗಳನ್ನು ಮಾಡಿದೆ. ಜನರು ಯಾವ ರೀತಿಯಲ್ಲಿ ಮಾರ್ಕೆಟ್ ಹಣವನ್ನು ಉಪಯೋಗ ಮಾಡಿಕೊಳ್ಳಬಹುದು ಎನ್ನುವ ಮರ್ಮವನ್ನು ಅರಿತು ಮಾಡಿದ್ದೇವೆ. ಅಜ್ಜೀಬಾಳ ಹೆಗಡೆಯವರು ಹಿಂದೂಸ್ಥಾನದ ತುಂಬಾ ಅಡ್ಡಾಡಿ ಬಂದು ಒಂದು ರಿಪೋರ್ಟನ್ನು ಮಾಡಿದ್ದಾರೆ. ಅವರ ರಿಪೋರ್ಟ್‌ನಲ್ಲಿ ಕೆಲವೊಂದು ತಿದ್ದುಪಡಿಯೊಂದಿಗೆ ಅದನ್ನು ಸರ್ಕಾರದವರು ಒಪ್ಪಿ ಸ್ವೀಕರಿಸಿದ್ದೇವೆ. ಇದಕ್ಕೆ ದಯವಿಟ್ಟು ಎಲ್ಲರೂ ಒಮ್ಮತದಿಂದ ಸ್ವೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಕಾನ್ಸಿಕ್ವೆಂಟ್ ತಿದ್ದುಪಡಿ ಏನೆಂದರೆ ಛೇರ್ಮನ್ ಆಗಿ ಮಿನಿಸ್ಟರ್ ಆದವರು ಮಾರ್ಕೆಟ್ ಕಮಿಟಿಯಲ್ಲಿರಬೇಕೆಂದು ಇತ್ತು ಅದನ್ನು ಬದಲಾಯಿಸಲಾಗಿತ್ತು. ಆದರೆ ಕ್ಯಾಬಿನೆಟ್‌ನಲ್ಲಿ ಅನೇಕರು ಅದನ್ನು ಒಪ್ಪದಿದ್ದುದಕ್ಕಾಗಿ ಪುನಃ ಇಟ್ಟುಕೊಂಡಿದ್ದೇವೆ. ಕಾನ್ಸಿಕ್ವೆಂಟ್ ತಿದ್ದುಪಡಿಯನ್ನು ತಂದಿದ್ದೇವೆ, ಅದನ್ನು ಮೂವ್ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಕ್ಲಾಸ್ ಬೈ ಕ್ಲಾಸ್ ಬಿಲ್ಲನ್ನು ತೆಗೆದುಕೊಳ್ಳುವಾಗ ಅದನ್ನು ಮೂವ್ ಮಾಡುತ್ತೇನೆ. ಇಷ್ಟು ಹೇಳಿ, ತಾವುಗಳೆಲ್ಲ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಟಿ.ಎಂ. ಮಂಜುನಾಥ್ (ತಿಪಟೂರು) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಸರ್ಕಾರ ಏನು ಈ ತಿದ್ದುಪಡಿಯನ್ನು ತಂದಿದೆ, ಇದಕ್ಕೆ ಕೆಲವಾರು ಸೂಚನೆಗಳನ್ನು ಕೊಡಲು ನಾನು ಇಷ್ಟಪಡುತ್ತಿದ್ದೇನೆ. ಸನ್ಮಾನ್ಯ ಮಂತ್ರಿಗಳು ಮಾತನಾಡುತ್ತಾ, ರೈತರ ಹಿತವನ್ನು ಕಾಪಾಡುವುದಕ್ಕೋಸ್ಕರ ಕೆಲವಾರು ತಿದ್ದುಪಡಿಗಳನ್ನು ತಂದು ಈ ವ್ಯವಸಾಯ ಮಾರುಕಟ್ಟೆ ಸರಿಯಾದ ರೀತಿಯಲ್ಲಿ ಕೆಲಸ ಮಾಡಲೂ ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥ ಮಾತನ್ನು ಆಡಿದ್ದಾರೆ. ಇದು ಸತ್ಯ. ಬಹಳ ಅನುಭವಿಗಳಾಗಿರತಕ್ಕಂಥ ಮಂತ್ರಿಗಳ ಕೈಯಲ್ಲಿ ಈ ಒಂದು ಇಲಾಖೆ ಇದೆ. ಮತ್ತು ಒಳ್ಳೆಯ ನಿರ್ದೇಶಕರೂ ಇದ್ದಾರೆ. ನಾನು ಈ ಮಾರುಕಟ್ಟೆಯ ಸದಸ್ಯನಾಗಿ ಕೆಲವು ಅನುಭವಗಳನ್ನು ಸಹಿತ ಪಡೆದಿದ್ದೇನೆ. ಇಲ್ಲಿ ತಂದಿರತಕ್ಕಂಥ ತಿದ್ದುಪಡಿ ಕೆಲವು ಸಮಯೋಚಿತವಾಗಿ, ಅವಶ್ಯಕವಾಗಿ ಬೇಕಾಗಿದ್ದರೂ ಕೂಡ ಕೇವಲ ಇಷ್ಟರಿಂದಲೇ ರೈತರಿಗೆ ಆಗತಕ್ಕಂಥ ಅನ್ಯಾಯ, ರೈತರಿಗೆ ಆಗತಕ್ಕಂಥ ಶೋಷಣೆ ಖಂಡಿತವಾಗಿಯೂ ಇದರಿಂದ ಪರಿಹಾರ ಆಗತಕ್ಕಂಥಾದ್ದು ಇಲ್ಲ. ಕೇವಲ ಸದಸ್ಯರನ್ನು ಹೆಚ್ಚು ಮಾಡುವುದರಿಂದಲೇ, ಅವರ ಅವಧಿಯನ್ನು ಹೆಚ್ಚು ಮಾಡುವುದರಿಂದಲೇ ರೈತಾಪಿ ಜನರ ಕಷ್ಟ ಪರಿಹಾರ ಆಗುವುದಿಲ್ಲ. ಇಲ್ಲಿ ಆಗಬೇಕಾಗಿರತಕ್ಕಂಥಾದ್ದು ರೈತರು ತಂದ ಮಾಲಿಗೆ, ರೈತನು ತಂದ ವ್ಯವಸಾಯದ ಉತ್ಪನ್ನಗಳಿಗೆ ಕ್ರಮವಾಗಿ ಅವರಿಗೆ ಸರಿಯಾದ ರೀತಿಯಲ್ಲಿ ತೂಕ, ಒಳ್ಳೆಯ ಧಾರಣೆ ಇದನ್ನು ಕೊಡಿಸತಕ್ಕದ್ದು ಈ ಮಾರುಕಟ್ಟೆ ಸಮಿತಿಗಳ ಮತ್ತು ಈ ಇಲಾಖೆಯ ಆದ್ಯ ಕರ್ತವ್ಯ. ಇವತ್ತಿನವರೆಗೂ ಮಾರುಕಟ್ಟೆಗಳೂ ಬಂದರೂ ಕೂಡ ಇಡೀ ಕರ್ನಾಟಕದಲ್ಲಿ ರೈತರ ಶೋಷಣೆ ನಡೆದೇ ಇದೆ, ನಡೆಯುತ್ತಲೇ ಇದೆ. ಇದರ ಅರ್ಥ, ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಮಾರುಕಟ್ಟೆ ಸಮಿತಿಗಳು ಏನಿವೆ, ಇವರು ಸರಿಯಾದ ರೀತಿಯಲ್ಲಿ ಕ್ರಮವಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿರತಕ್ಕಂಥ ಅಧಿಕಾರಿಗಳು

ಪ್ರಾಮಾಣಿಕರಾಗಿ, ದಕ್ಷತೆಯಿಂದ ಕೆಲಸ ಮಾಡದೇ ಇರತಕ್ಕಂಥ ಒಂದು ಕಾರಣದಿಂದ ಇವತ್ತು ರೈತರ ಶೋಷಣೆ ನಿರಂತರವಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ. ಕೆಲವು ಸದಸ್ಯರು ಇದರ ಬಗ್ಗೆ ಮಾತನಾಡಿದ್ದಾರೆ ಮತ್ತು ಅನುಭವದ ಸಲಹೆಗಳನ್ನು ಕೊಟ್ಟಿದ್ದಾರೆ ಎಂದು ಮಂತ್ರಿಗಳು ಹೇಳಿದರು. ಆದರೆ ನ್ಯಾಯವಾಗಿ ಎಲ್ಲಿ ರೈತರಿಗೆ ತೊಂದರೆಯಾಗುತ್ತಿದೆ, ಅದನ್ನು ಯಾವ ರೀತಿ, ಬದಲಾವಣೆ ಮಾಡಬೇಕು ಎನ್ನತಕ್ಕಂಥಾದ್ದನ್ನು ಮಾನ್ಯ ಸಚಿವರು ಇವತ್ತು ಪ್ರಯತ್ನವನ್ನು ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಇದುವರೆಗೂ ಯಾರು ಟ್ಯಾಕ್ಸ್ ಕೊಡುತ್ತಾ ಇದ್ದರು, ಅವರಿಂದ ಶುಲ್ಕ ವಸೂಲು ಮಾಡಿದ್ದೀವಿ. ಆದರೂ ಸಹಿತ ಅವನ ರಕ್ಷಣೆ ಆಗಿಲ್ಲ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಅಲ್ಲಿ ತೂಕವನ್ನು ಮಾಡುವವರೂ ಇದ್ದಾರೆ. ಅವರು ಲೈಸೆನ್ಸ್ ಹೋಲ್ಡರ್ಸ್. ಅವರೂ ವರ್ತಕರ ಹಾಗೆ ಹನ್ನೊಂದು ತಿಂಗಳಿಗೆ, ಒಂದು ವರ್ಷಕ್ಕೆ ಲೈಸೆನ್ಸ್ ತೆಗೆದುಕೊಂಡು ಅದೇ ಪ್ರಕಾರವಾಗಿ ಕೆಲಸ ಮಾಡತಕ್ಕದ್ದು ಇದೆ. ಅವರು ಯಾರ ಅಧೀನದಲ್ಲಿದ್ದಾರೆ? ಅವರು ವರ್ತಕರ ಅಧೀನದಲ್ಲಿದ್ದಾರೆಯೋ? ರೈತರಿಗೆ ಅವನಿಂದ ಯಾವ ಅನುಕೂಲವೂ ಆಗುತ್ತಿಲ್ಲ. ಒಂದು ಕಡೆ ರೈತರ ಹತ್ತಿರಾನೂ ಆತ ತನ್ನ ಪ್ರತಿಫಲಾಂಶವನ್ನು ತೆಗೆದುಕೊಳ್ಳುತ್ತಾನೆ. ಅವರು ವರ್ತಕರ ಜೊತೆ ಶಾಮೀಲಾಗಿ ಇವತ್ತು ರೈತರಿಗೆ ಸರಿಯಾದ ತೂಕವೂ ಸಿಗುತ್ತಿಲ್ಲ. ಆದ್ದರಿಂದ ತನ್ನದೊಂದು ಸಲಹೆ ಏನೆಂದರೆ, ಯಾರು ಮಾರ್ಕೆಟ್‌ನಲ್ಲಿ ತೂಕ ಮಾಡತಕ್ಕಂಥವರು ಇದ್ದಾರೆ, ಅವರನ್ನು ನಿಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕು, ನಿಮ್ಮ ಹಿಡಿತಕ್ಕೆ ತೆಗೆದುಕೊಳ್ಳಬೇಕು. ಆಗ ಅವರಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಮತ್ತು ಅವನಿಗೆ ಸರಿಯಾದ ಹೆದರಿಕೆ, ಬೆದರಿಕೆ ಇರುತ್ತದೆ. ಅವನ ಲೈಸೆನ್ಸ್ ಕ್ಯಾನ್ಸಲ್ ಮಾಡಿದರೆ ಇನ್ನೊಬ್ಬರಿಗೆ ಕೊಡುತ್ತೀರಿ. ಆದರೆ ಯಾರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ತೂಕ ಮಾಡತಕ್ಕಂಥವರು ಇದ್ದಾರೆ, ಅವನು ಸರ್ಕಾರಿ ನೌಕರನಾಗಿ ಇದ್ದಾಗ ಕೆಲವು ನಿಬಂಧನೆಗಳು ಇರುತ್ತದೆ, ನಿಯಮಗಳು ಇರುತ್ತವೆ ಅದರಿಂದ ಅವನು ಹೆದರುತ್ತಾನೆ. ಇದು ಅಜ್ಜೀಬಳ ಹೆಗಡೆಯವರು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಯಾವಾಗ ಅವರ ಜೀವನಕ್ಕೆ ತೊಂದರೆಯಾಗುತ್ತದೆ, ಯಾವಾಗ ತೂಕ ತುಂಡುಗಳಲ್ಲಿ ರೈತನಿಗೆ ವರ್ತಕರಿಗೆ ನ್ಯಾಯ ಸಿಕ್ಕುವುದಿಲ್ಲ, ಆಗ ರೈತರ ಶೋಷಣೆಗೆ ಸಿಕ್ಕೇ ಸಿಕ್ಕುತ್ತಾನೆ. ಎಲ್ಲಾ ವರ್ತಕರೂ ದೇಶದ ಜನತೆ ರೈತನನ್ನು ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ಮಾಡುತ್ತಿದ್ದಾರೆಯೇ ವಿನಹ ಅವನಿಗೆ ಉಪಕಾರ ಮಾಡುತ್ತಾ ಇಲ್ಲ. ಅನ್ನ ಕೊಡುವವನಿಗೆ, ಬೆಳಕು ಕೊಡುವವನಿಗೆ ಸಮಾಜದಲ್ಲಿ ಸರಿಯಾದ ರೀತಿನೀತಿಯ ನ್ಯಾಯ ಸಿಕ್ಕುತ್ತಾ ಇಲ್ಲ. ಅವನು ಮೂಕ ಪಶುವಿನಂತೆ, ತನ್ನ ಕಷ್ಟವನ್ನು ಯಾರ ಕೈಯಲ್ಲೂ ಹೇಳದೆ, ವರ್ತಕರ ಹಿಡಿತಕ್ಕೆ ಸಿಕ್ಕಿ, ಅವರ ಹಿಡಿತಕ್ಕೆ ಸಿಕ್ಕಿ, ಇವರ ಹಿಡಿತಕ್ಕೆ ಸಿಕ್ಕಿ ಶೋಷಣೆಗೆ ಒಳಗಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ತಾವು ಹಿರಿಯರು ಇದ್ದೀರಿ, ತಮಗೆ ಅನುಭವ ಇದೆ. ಆತನನ್ನು ಯಾವರೀತಿ ಈ ಶೋಷಣೆಯಿಂದ ಬಿಡುಗಡೆ ಮಾಡಬೇಕೆಂಬ ಬಗ್ಗೆ ಸಲಹೆ ತೆಗೆದುಕೊಂಡು, ತಿದ್ದುಪಡಿ ತರಬೇಕಾಗಿರುವುದು ಆದ್ಯ ಕರ್ತವ್ಯ ಎಂಬ ಅಂಶವನ್ನು ತಮ್ಮ ಮುಂದೆ ಇಡುತ್ತಾನೆ. ಈ ಕಾನೂನನ್ನು ಬದಲಾವಣೆ ಮಾಡಬೇಕಾಗಿದ್ದರೆ, ಈ ಕಮಿಟಿಗಳೂ, ಪ್ರತಿನಿಧಿಗಳನ್ನೂ ಬದಲಾವಣೆ ಮಾಡುತ್ತಿದ್ದೀರಿ ಸಂತೋಷ. ಮಹಿಳೆಯರಿಗೆ ಅವಕಾಶ ಕೊಟ್ಟಿದ್ದೀರಿ, ಪರಿಶಿಷ್ಟ ಜಾತಿಯವರಿಗೆ ಅವಕಾಶ ಕೊಟ್ಟಿದ್ದೀರಿ, 9 ಜನ ಇದ್ದುದನ್ನು 11 ಜನ ಎಂದು ಮಾಡಿದ್ದೀರಿ, ಬಹಳ ಸಂತೋಷ. ಆದರೆ ಒಂದು ಮಾತು ಹೇಳುತ್ತೇನೆ. ಅಲ್ಲಿರತಕ್ಕ ಕಮೀಷನ್ ಎನ್ನುವ ಮಾತನ್ನು ತೆಗೆದು, ರೀಟೈಲರ್ ಎಂದು ಸೇರಿಸಿದ್ದೀರಿ. ತಾವೂ ಕೂಡ ಬೆಳೆ ಬೆಳೆದಿದ್ದೀರಿ ಅಥವಾ ರೈತರು ಬೆಳೆದಿದ್ದಾರೆ. ಈ ರೀತಿ ಬೆಳದ ಪದಾರ್ಥಗಳನ್ನು, ಮಾಲನ್ನೂ ಮಾರ್ಕೆಟ್‌ಗೆ ತೆಗೆದುಕೊಂಡು ಹೋದಾಗ, ಆ ಮಾಲು ವಿತರಣೆಯಾಗದ ಪಕ್ಷದಲ್ಲಿ, ಆ ಮಾಲು ಯಾರ ವಶದಲ್ಲಿರಬೇಕು? ರೈತ

ಬೆಳೆದಂಥ ಪದಾರ್ಥ ಯಾರ ವಶದಲ್ಲಿರಬೇಕು. ಕಮೀಷನ್ ಏಜೆಂಟ್ಸ್ ರೈತರಿಂದ ಕಮೀಷನ್ ತೆಗೆದುಕೊಳ್ಳುತ್ತಾ ಇಲ್ಲ, ಯಾವ ಪರ್ಚೇಸರ್ ಇದ್ದಾನೆ, ಅವನಿಂದ ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ. ನಮ್ಮ ತಿಪಟೂರಿನಲ್ಲಿ ಯಾರೋ ಒಬ್ಬ ದೊಡ್ಡ ಮೀಡಿಯೇಟರ್, ರೈತರಿಂದ ಕೊಬ್ಬರಿ ತರುವವನು, ಎರಡು ಪರ್ಸೆಂಟ್ ಅಲ್ಲಿ ತೆಗೆದುಕೊಂಡು, ಒಂದು ಪರ್ಸೆಂಟ್ ಕಮೀಷನ್ ಏಜೆಂಟಿಗೆ ಕೊಡುತ್ತಿದ್ದಾನೆ. ಈ ಪರಿಸ್ಥಿತಿ ಬಂದಿದೆ. ಆದ್ದರಿಂದ ಕಮೀಷನ್ ಏಜೆಂಟ್ ಎಂಬ ವರ್ಗ ಏನಿದೆ, ದಯಮಾಡಿ ಇದನ್ನು ತೆಗೆಯಬೇಡಿ. ನಿಮ್ಮ ಅಧಿಕಾರಿಗಳು ಇದ್ದಾರೆ, ಶೋಷಣೆ ಮಾಡುವುದನ್ನು ತಪ್ಪಿಸಿ, ಇನ್ನೊಂದು ಪ್ರಶ್ನೆ ಏನೆಂದರೆ, ಟ್ರೇಡರ್ಸ್ ಒಬ್ಬರಿಗೇ ಕಮಿಟಿಯಲ್ಲಿ ಅವಕಾಶ ಕೊಟ್ಟಿದ್ದೀರಿ, ಕಮೀಷನ್ ಏಜೆಂಟರಿಗೂ ಕೊಡಬೇಕು. ಏಕೆಂದರೆ, ವರ್ತಕ, ರೈತ ಮತ್ತು ಈ ಸಮಿತಿ. ಈ ಮೂರು ವರ್ಗದವರಿಗೆ ಸರಿಯಾದ ಪ್ರಾತಿನಿಧ್ಯ ಇರಬೇಕು. 11 ಜನ ರೈತರಿಗೆ ಕೊಟ್ಟಿದ್ದೀರಿ, ಇಬ್ಬರು ವರ್ತಕರಿಗೆ ಕೊಡದೆ ಹೋದರೆ, ಅವರ ಕುಂದುಕೊರತೆಗಳನ್ನು ಯಾರು ಹೇಳುವುದು, ಅವರ ಕಷ್ಟಗಳನ್ನು ಯಾವರೀತಿ ಹೇಳುತ್ತಾರೆ ಯಾವತ್ತೂ ಸಹಿತ ವ್ಯವಹಾರ ಚೆನ್ನಾಗಿ ಆಗಬೇಕಾದರೆ, ಸರಿಯಾಗಿ ಆಗಬೇಕಾದರೆ, ಕೊಳ್ಳುವವರು, ಮಾರುವವರು ಮತ್ತು ತೆಗೆದುಕೊಳ್ಳುವವರು ಈ ಮೂರು ಜನ ಸರಿಯಾದ ರೀತಿಯಲ್ಲಿರಬೇಕು. ಅದಕ್ಕೋಸ್ಕರ ಟ್ರೇಡರ್ಸ್‌ಗೆ ಅವಕಾಶ ಕೊಟ್ಟಿರುವುದನ್ನು ತೆಗೆದು, ಕಮೀಷನ್ ಏಜೆಂಟರಿಗೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತೇನೆ. ನಮ್ಮ ಹಿರಿಯ ಮಂತ್ರಿಗಳು ಈ ಹಣವನ್ನು ಯಾವರೀತಿ ಖರ್ಚು ಮಾಡಬೇಕೆಂಬುದನ್ನು ಹೇಳಿದರು. ನನ್ನ ದೃಷ್ಟಿಯಲ್ಲಿ, ಒಂದು ಮಾರ್ಕೆಟ್ ಬೆಳೆಯಬೇಕಾಗಿದ್ದರೆ, ಆ ಏರಿಯಾದಲ್ಲಿ ಯಾವ ರೈತ ತಾನು ಬೆಳೆದಂಥ ಪದಾರ್ಥಗಳನ್ನು ತರುತ್ತಾನೆ, ಅವನನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹಣ ಖರ್ಚು ಮಾಡಬೇಕಾಗಿದೆ. ಪರ್ಚೇಸರ್ ನಿಮಗೆ ಹಣ ಕೊಡುತ್ತಾನೆ, ಹಣವನ್ನು ಕೊಡುವವನು ರೈತ ಅಲ್ಲ, ಆದರೂ ಸಹಿತ, ಮಾರ್ಕೆಟ್ ಏರಿಯಾ ಏನಿದೆ, ಆ ತಾಲ್ಲೂಕು ಏನಿದೆ, ಆ ತಾಲ್ಲೂಕಿನ ರೈತರ ಹಿತರಕ್ಷಣೆಯನ್ನು, ಅಲ್ಲಿ ಬೆಳೆದಂಥ ಪದಾರ್ಥಗಳನ್ನು ಮಾರ್ಕೆಟ್‌ಗೆ ತರುವುದು ಅಷ್ಟೇ ಅಲ್ಲ, ಅವನ ಆರೋಗ್ಯವನ್ನೂ ನೋಡಬೇಕು, ಅವನ ದನಕರುಗಳು ಏನಿವೆ, ಅವುಗಳ ರಕ್ಷಣೆ ಮಾಡಬೇಕು. ಈ ದೃಷ್ಟಿಯಿಂದ ರೈತರ ರಕ್ಷಣೆಗೋಸ್ಕರ, ತಾಲ್ಲೂಕು ಮಟ್ಟದಲ್ಲಿರತಕ್ಕ ಆಸ್ಪತ್ರೆಗಳನ್ನು, ಅಭಿವೃದ್ಧಿ ಮಾಡುವುದು ಪಶುಗಳ ಆಸ್ಪತ್ರೆಯನ್ನು ಡೆವಲಪ್ ಮಾಡಬೇಕು. ಬೆಳೆದ ಪದಾರ್ಥಗಳನ್ನು ರೈತ ತರುತ್ತಾನೆ. ಈ ರೀತಿ ತರತಕ್ಕ ಸಮಯದಲ್ಲಿ ಹಳ್ಳಿಗಾಡಿನ ರಸ್ತೆಗಳನ್ನೂ ನಾವು ನೋಡಬೇಕಾಗಿದೆ, ಪ್ರಾಮುಖ್ಯವಾಗಿ ಈ ರಸ್ತೆಗಳನ್ನು ಇಂಪ್ರೂವ್ ಮಾಡಬೇಕಾಗಿದೆ. ಎಲ್ಲಿ ಡೆವಲಪ್ಡ್ ಮಾರ್ಕೆಟ್ ಇದೆ, ಅಲ್ಲಿ ಹೇಳುತ್ತೇನೆ. ಮಾರ್ಕೆಟ್ ಇಲ್ಲದ ಕಡೆ ನಾನು ಹೇಳುತ್ತಾ ಇಲ್ಲ, ವಿಶ್ವಸಂಸ್ಥೆಗಳಿಂದ ಸಾಲಸೋಲಗಳನ್ನು ತಂದಿದ್ದಾರೆ, ಅದನ್ನು ಕಟ್ಟುವುದೂ ಕಷ್ಟವಿದೆ. ಎಲ್ಲಿ ಡೆವಲಪ್ಡ್ ಮಾರ್ಕೆಟ್ ಇದೆ, ಎಲ್ಲಿ ಹಣ ಹೆಚ್ಚಾಗಿದೆ, ಅದನ್ನು ತಾಲ್ಲೂಕು ಮಟ್ಟದಲ್ಲಿ ಖರ್ಚು ಮಾಡಬೇಕು. ದಯಮಾಡಿ, ರೈತರ ಉದ್ಧಾರಕ್ಕೋಸ್ಕರ ಕೋ-ಆಪರೇಟೀವ್ ಸೊಸೈಟಿಗಳಿಗೆ ಹಣವನ್ನು ಸಾಲ ಕೊಡುತ್ತೇವೆಂದು ಹೇಳಬೇಡಿ. ಯಾವುದೇ ಸೊಸೈಟಿಗಳನ್ನು ತೆಗೆದುಕೊಳ್ಳಿ, ಸಾಲ ತೆಗೆದುಕೊಂಡಿರುವವರು ಯಾರಾದರೂ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದ್ದಾರೆಯೇ? ಈ ಹಣದಿಂದ ರೈತರ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕಾಗಲೀ, ಮಾಲನ್ನು ಸ್ಟಾಕ್ ಮಾಡುವುದಕ್ಕಾಗಲೀ ಹಾಕಿ, ರೈತರ ಉದ್ಧಾರ ಮಾಡುವುದಕ್ಕಾಗುವುದಿಲ್ಲ, ಅದಕ್ಕಾಗಿ ವೇರ್ ಹೌಸಿಂಗ್ ಕಾರ್ಪೋರೇಷನ್ ಇದೆ, ಅದು ಮಾಡಲಿ ನಾವು ಬೇಡ ಎಂದು ಹೇಳುವುದಿಲ್ಲ, ಆದರೆ, ಈ ಹಣವನ್ನು ಕೋ-ಆಪರೇಟಿವ್ ಸೆಕ್ಟಾರ್‌ನಿಂದ ತೆಗೆದುಕೊಂಡು ಹೋಗಿ ಕೊಡುತ್ತೇವೆಂದು ಹೇಳಿದರೆ, ಅದು ಅನಾಯಕತ್ವವಾಗುತ್ತದೆ. ಅಲ್ಲಿಂದ ಬಂದ ಹಣ ದುರುಪಯೋಗವಾಗುತ್ತದೆ. ದಯಮಾಡಿ ಇದರ ಬಗ್ಗೆ ತಾವು ಅತ್ಯಂತ ಎಚ್ಚರಿಕೆ

ವಹಿಸಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಮಗೆ ಅನುಭವ ಇದೆ, ಯಾವುದೋ ಒಂದು ಹಣವನ್ನು ತೆಗೆದುಕೊಂಡು, ಯಾವುದೋ ಒಂದು ಸೊಸೈಟಿಯಲ್ಲಿರತಕ್ಕ ಗುಂಪಿಗೆ ಕೊಟ್ಟರೆ, ರೈತನಿಗೆ ಉಪಯೋಗವಾಗುತ್ತದೆಯೇ ಎಂಬ ಸಂಶಯ ಬರುತ್ತದೆ. ಆದ್ದರಿಂದ ಹಣವನ್ನು ಆಯಾ ಏರಿಯಾದಲ್ಲೇ ಇರತಕ್ಕ ರೈತರಿಗೆ ಮತ್ತು ಯಾವ ರೈತ ತರುತ್ತಾನೆ, ಅವನಿಗೆ ಉಪಯೋಗವಾಗಬೇಕು. ಮಾರ್ಕೆಟ್ಟಿಗೆ ಬರತಕ್ಕ ರಸ್ತೆ, ಆರೋಗ್ಯ ರಕ್ಷಣೆಗೋಸ್ಕರ ಆಸ್ಪತ್ರೆ, ಪಶುಸಂಪತ್ತಿನ ಅಭಿವೃದ್ಧಿಗೋಸ್ಕರ, ಪಶುಗಳ ಯೋಗಕ್ಷೇಮಕ್ಕೋಸ್ಕರ ಖರ್ಚು ಮಾಡಬೇಕು ಎನ್ನುವ ಮಾತನ್ನು ಹೇಳಿ ತಾವು ಏನು ಬಿಲ್ ತಂದಿದ್ದೀರಿ ಅದರಲ್ಲಿ ನಾನು ಹೇಳಿರತಕ್ಕ ಕೆಲವಾರು ನ್ಯೂನತೆಗಳನ್ನು ಸರಿಪಡಿಸಿಕೊಂಡು, ಮತ್ತೊಮ್ಮೆ ಯೋಚನೆ ಮಾಡುತ್ತೀರಿ ಎಂದು ಆಶಿಸುತ್ತೇನೆ. ಇವತ್ತಿನ ದಿವಸ ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್ ಕಮಿಟಿ ಇದೆ. ತಾವು ಏನು ಹೇಳಿದ್ದೀರಿ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಸದಸ್ಯತ್ವವನ್ನು ಕೊಡಬೇಕಾದರೆ, ಕೋ-ಆಪರೇಟಿವ್ ಪ್ರೊಸೆಸಿಂಗ್ ಸೊಸೈಟಿ ಆಗಿದ್ದರೆ ಮಾತ್ರ ಸದಸ್ಯತ್ವ ಕೊಡಿ ಎಂದು ಹೇಳಿದ್ದೀರಿ. ಈಗ ನನಗೆ ಅನುಮಾನ ಬಂದಿದೆ. ಟಿ.ಎ.ಪಿ.ಸಿ.ಎಂ.ನಂತೆ, ಕೋ-ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಎಂದು ಹೇಳಿದರೆ ನನ್ನದೇನೂ ಅಡ್ಡಿ ಇಲ್ಲ.

ನಮ್ಮ ತಾಲ್ಲೂಕಿನಲ್ಲಿ ಇರತಕ್ಕಂಥಾದ್ದು ಟಿ.ಎ.ಪಿ.ಸಿ.ಎಂ.ಎಸ್.ಸಿ. ಕೋ-ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿ ನಮ್ಮಲ್ಲಿ ಇಲ್ಲ. ದಯಮಾಡಿ ಅದನ್ನು ಸ್ವಲ್ಪ ವೆರಿಫೈ ಮಾಡಬೇಕೆಂಬ ದೃಷ್ಟಿಯಿಂದ ಹೇಳಿದೆ, ಏನು ತಾವು ತಿದ್ದುಪಡಿಗಳನ್ನು ತಂದಿರುತ್ತೀರಿ, ಅದು ರೈತರ ಉಪಯುಕ್ತತೆಗೋಸ್ಕರ ಬರಲಿ, ಇನ್ನು ನೀವು ಬೇಕಾದರೆ ಮತ್ತೊಮ್ಮೆ ಈ ವೇಯರ್ಸ್ ಏನಿದ್ದಾರೆ, ಈ ತೂಕ ಮಾಡತಕ್ಕಂಥವರನ್ನು ನಿಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಯಾವುದಾದರೂ ಕಾನೂನನ್ನು ಮಾಡಿ, ಅವರಿಗೆ ತಿಂಗಳಿಗೆ 500 ರೂ. ಕೊಡುತ್ತೀರೋ, 400 ರೂ. ಕೊಡುತ್ತೀರೋ, ಅವರನ್ನು ಈ ರೀತಿ ನಿಮ್ಮ ಹಿಡಿತಕ್ಕೆ ತೆಗೆದುಕೊಂಡರೆ ಅವರು ಸರಿಯಾಗಿರುತ್ತಾರೆಯೇ ವಿನಹ, ಇಲ್ಲದಿದ್ದರೆ ಅವರು ಏನಿದ್ದರೂ ಮರ್ಚೆಂಟ್ಸ್ ಕೈವಶಗಳಾಗಿರುತ್ತಾರೆ. ಸರಕಾರದವರ ಕೈವಾಡ ಅಲ್ಲಿರುವುದಿಲ್ಲ. ಮರ್ಚೆಂಟ್ಸ್ ಅಧೀನದಲ್ಲಿರುತ್ತಾರೆ. ಇವತ್ತಿನ ದಿವಸ ಒಂದು ಉದಾಹರಣೆ ಕೊಡಬೇಕಾದರೆ ಒಂದು ಕೆ.ಜಿ. ಕೊಬರಿಗೆ 26 ರೂಪಾಯಿ ಆಗಿದೆ, ಅದು ಗಿಟಕು, ವೇಯರ್ಸ್ ಮತ್ತು ವರ್ತಕ ಏನಾದರೂ ಶಾಮೀಲಾಗಿ ಒಂದು ಕೆ.ಜಿ. ತೂಕ ಹೊಡೆದು ಬಿಟ್ಟರೆ, ಪಾಪ ಆ ರೈತನಿಗೆ ಏನು ಗೊತ್ತು, ಅವನು ಮೇಲಿನಿಂದ ಟಿ.ಎ.ಪಿ.ಸಿ.ಎಂ.ಎಸ್.ನಿಂದ ಬಂದಿರುತ್ತಾನೆ ಅವನೇ ನಮ್ಮ ತಂದೆ ಎನ್ನುವ ದೃಷ್ಟಿಯಿಂದ ಹೋದರೆ, ಅವರು ಒಂದು ಕೆ.ಜಿ. ಕೊಬ್ಬರಿ ಹೊಡೆದು ಬಿಟ್ಟರೆ ಯಾರ ಶೋಷಣೆ ಆಯಿತು? ಏತಕ್ಕೆ ಅವನು ಆ ರೀತಿ ಮಾಡುತ್ತಾನೆ? ಅವನು ವರ್ತಕನ ಕಂಟ್ರೋಲ್‌ನಲ್ಲಿರುತ್ತಾನೆ. ದಯಮಾಡಿ ಇದನ್ನು ತಪ್ಪಿಸುವುದಕ್ಕೋಸ್ಕರ, ಏನು ವೇಮನ್‌ಗಳು ಇದ್ದಾರೆ ಅವರನ್ನು ನೀವು ಸರಕಾರದ ಯಾವುದಾದರೂ ಒಂದು ಕಾನೂನಿನ ಅಡಿಯಲ್ಲಿ ತಂದು ಅವರು ನಿಮ್ಮ ಅಧೀನದಲ್ಲಿ ಕೆಲಸ ಮಾಡತಕ್ಕ ನೌಕರರು ಆಗಿರಲಿ, ಅದನ್ನು ನಿಮ್ಮ ಕಾಲದಲ್ಲಿ ಮಾಡಿ, ರೈತರಿಗೆ ಆಗಿರತಕ್ಕಂಥ ಶೋಷಣೆ ತಪ್ಪಿಸುತ್ತೀರಿ ಎಂಬ ಮಾತನ್ನು ಹೇಳಿ, ನಾನು ಈಗ ಎರಡು ಮೂರು ಕಾರಣಗಳನ್ನು ಏನು ತಮ್ಮ ಮುಂದೆ ಇಟ್ಟಿದ್ದೇನೆ, ಅದನ್ನು ತಾವು ಮತ್ತೊಮ್ಮೆ ಮನಸ್ಸಿಗೆ ತೆಗೆದುಕೊಂಡು, ಈ ಫಂಡ್ಸ್‌ನ್ನು ಉಪಯೋಗಿಸಿಕೊಳ್ಳುವುದರ ಬಗ್ಗೆ, ವೇಮನ್‌ಗಳ ಬಗ್ಗೆ, ಫಾರ್ಮೇಷನ್ ಆಫ್ ಕಮಿಟೀಸ್ ಬಗ್ಗೆ ಪರಿಶೀಲನೆ ಮಾಡಿ. ಒಳ್ಳೆಯದನ್ನು ಮಾಡುತ್ತಿದ್ದೀರಿ, ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲ ವ್ಯಕ್ತಪಡಿಸಿ ಇದರಿಂದ ರೈತರಿಗೆ ಒಳ್ಳೆಯದಾಗಲಿ ಎಂದು ಹಾರೈಸುತ್ತಿದ್ದೇನೆ.

+ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೇ, ಸಹಕಾರ ಕ್ಷೇತ್ರದಲ್ಲಿ ಉನ್ನತ ಮಟ್ಟದ ಎಲ್ಲಾ ರೀತಿಯ ಅನುಭವಗಳನ್ನು ಪಡೆದಂಥ ಸನಾನ್ಯ ಕೆ.ಹೆಚ್. ಪಾಟೀಲರು, ಸಂಪೂರ್ಣ ವಿವರವಾದಂಥ ಮಸೂದೆಯನ್ನು ತಂದು, ಮಾರುಕಟ್ಟೆ ಕಮಿಟಿಯ ನಿಯಂತ್ರಣ ಮತ್ತು ಕಾನೂನುಗಳ ತಿದ್ದುಪಡಿ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಮಾರ್ಕೆಟ್ ಕಮಿಟಿ ಸದಸ್ಯನಾಗಿ, ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಸದಸ್ಯನಾಗಿ ಕೆಲಸ ಮಾಡತಕ್ಕಂಥ ಅವಕಾಶ ಕೆಲವೊಂದು ದಿನ ನನಗೆ ಸಿಕ್ಕಿತ್ತು. ಈ ಒಂದು ತಿದ್ದುಪಡಿ ತಂದಾಗ ಏನು ಇವತ್ತಿನ ದಿವಸ ಹಳ್ಳಿಗಾಡು ಪ್ರದೇಶದಲ್ಲಿ ರೈತ ಜನರು ಏನಿದ್ದಾರೆ ಅವರು ಬೆಳೆಸಿದಂಥ ಫಸಲಿಗೆ ಯೋಗ್ಯವಾದಂಥ ತೂಕ, ಬೆಲೆ, ಆಶ್ರಯ ಕೂಡ ಕೊಡತಕ್ಕ ಜವಾಬ್ದಾರಿ ಮಾರುಕಟ್ಟೆ ಕಮಿಟಿಗೆ ಇರುತ್ತದೆ. ನನ್ನ ಅನುಭವದ ಪ್ರಕಾರ ಗಡಿಪ್ರದೇಶದಲ್ಲಿರತಕ್ಕಂಥ ಕೆಲವು ಮಾರ್ಕೆಟ್ ಕಮಿಟಿಗಳನ್ನು ಹೋಲಿಸಿದಾಗ, ಪಕ್ಕದ ರಾಜ್ಯದಕ್ಕಂಥ ಮಾರ್ಕೆಟ್ ಕಮಿಟಿ ಸೆಸ್ ಆಗಲೀ, ನಮ್ಮ ಮಾರ್ಕೆಟ್ ಕಮಿಟಿ ಸೆಸ್ ಆಗಲೀ, ಬಹಳಷ್ಟು ವ್ಯತ್ಯಾಸ ಇರುವುದರಿಂದ, ಕೆಲವೊಂದು ಸಂದರ್ಭದಲ್ಲಿ ಗಡಿ ಪ್ರದೇಶದಲ್ಲಿ ಬೆಳೆದ ನಮ್ಮ ಮಾಲು, ಬೇರೆ ಮಾರುಕಟ್ಟೆ ಸಮಿತಿಗೆ ಹೋಗುವ ಸಂದರ್ಭ ಕೂಡ ಇರುತ್ತದೆ. ಸಹಕಾರ ಮಂತ್ರಿಗಳ ಗಮನಕ್ಕೆ ಒಂದು ವಿಷಯ ತರುತ್ತಿದ್ದೇನೆ. ಏನು ಗಡಿ ಪ್ರದೇಶದಲ್ಲಿ ಬೆಳಗಾಂ ಇರಬಹುದು, ನಿಪ್ಪಾಣಿ ಇರಬಹುದು, ಕೋಲಾರ ಇರಬಹುದು, ಬೀದರ್ ಇರಬಹುದು, ಇನ್ನುಳಿದ ಗಡಿ ಪ್ರದೇಶದಲ್ಲಿ ಉನ್ನತ ಮಟ್ಟದ ಮಾರ್ಕೆಟ್ ಸಮಿತಿಗಳ ಆವರಣಗಳು ಇವೆ. ರೈತರು ತರತಕ್ಕ ಮಾಲು ನೂರಕ್ಕೆ ನೂರರಷ್ಟು ಬೇರೆ ರಾಜ್ಯಕ್ಕೆ ಹೋಗತಕ್ಕ ಸಂದರ್ಭ ನಾವು ನೋಡುತ್ತಿದ್ದೇವೆ. ಬೇರೆ ರಾಜ್ಯಕ್ಕೆ ಹೋಗಿ ಮಾರಾಟವಾಗತಕ್ಕ ಮಾಲಿನ ಮೇಲೆ ನಿಯಂತ್ರಣ ತರತಕ್ಕ ಕಾರ್ಯಕ್ರಮ ಕೂಡ ಆಗಬೇಕು. ನಿಯಂತ್ರಣ ಎಂದರೆ ರೈತರು ತೆಗೆದುಕೊಂಡು ಹೋಗತಕ್ಕ ಮಾಲನ್ನು ತಡೆಯುವುದಲ್ಲ. ಅದಕ್ಕೆ ಯೋಗ್ಯವಾದ ಬೆಲೆ ಸಿಗಬೇಕು, ಯೋಗ್ಯವಾದ ತೂಕ ಆಗಬೇಕು, ಆ ತೂಕ ಆದಮೇಲೆ ನಿರ್ದಿಷ್ಟ ಸಮಯದಲ್ಲಿ ಆ ರೈತನಿಗೆ ಹಣ ಸಿಗಬೇಕು. ನಾನು ಅವರ ಜೊತೆಗೆ ಈ ಒಂದು ತಿದ್ದುಪಡಿ ತರುವಾಗ ಕೂಡ ಚರ್ಚೆ ಮಾಡಿರುತ್ತೇನೆ. ಮಾರುಕಟ್ಟೆ ಸಮಿತಿಯಲ್ಲಿ ಏನಾಗುತ್ತದೆ? ನನ್ನ ಸಂಕೇಶ್ವರ ಮಾರ್ಕೆಟ್ ಸಮಿತಿಯ ಉದಾಹರಣೆ ನಾನು ಕೊಡುತ್ತೇನೆ. ಮುಂಜಾನೆ ಮಾರ್ಕೆಟಿಗೆ ರೈತ ಮೆಣಸಿನಕಾಯಿ ತರುತ್ತಾನೆ. 10 ಗಂಟೆಗೆ ಮೆಣಸಿನಕಾಯಿಯನ್ನು ಅಂಗಡಿಕಾರನ ಅಂಗಡಿ ಮುಂದೆ ತಂದು ಸುರಿಯುತ್ತಾನೆ. ಆ ಮಾಲಿಗೆ ತೂಕ ಇರುವುದಿಲ್ಲ, ಅಳತೆ ಮಾಡುವುದಿಲ್ಲ, ಆಮೇಲೆ ಲಿಲಾವು ಆಗುತ್ತದೆ ನಂತರ ಮಧ್ಯಾಹ್ನ 4 ಗಂಟೆಗೆ ತೂಕ ಆಗುತ್ತದೆ ಬೆಳಿಗ್ಗೆ 10 ಗಂಟೆಗೆ ತಂದಂತಹ ಮಾಲು ಬಿಸಿಲಿನಲ್ಲಿ ಒಣಗಿ 30-40 ಕೆ.ಜಿ. ಇದ್ದಂತಹ ಮಾಲು 20 ಕೆ.ಜಿ. ಆಗುತ್ತದೆ. ಇಂತಹ ಸಂದರ್ಭಗಳು ಕೂಡ ಇರುತ್ತವೆ. ರೈತ ಮಾಡತಕ್ಕಂಥ ವ್ಯವಸಾಯಕ್ಕೆ ಯೋಗ್ಯ ಬೆಲೆ ಯೋಗ್ಯ ಸಮಯದಲ್ಲಿ ಸಿಗದಿದ್ದರೆ ಯೋಗ್ಯ ಸಮಯದಲ್ಲಿ ವಿಲೇವಾರಿ ಆಗದಿದ್ದರೆ ಯೋಗ್ಯ ವೇಳೆಯಲ್ಲಿ ಟೆಂಡರ್ ಆಗದಿದ್ದರೆ ಅವನು ಸಾಕಷ್ಟು ತೊಂದರೆಪಡಬೇಕಾಗುತ್ತದೆ. ಇವತ್ತಿನದಿವಸ ನಾನು ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸಾಕಷ್ಟು ಹಣ ಮಾರ್ಕೆಟ್ ಸಮಿತಿಗಳಲ್ಲಿ ಕ್ರೋಡೀಕೃತವಾಗಿದೆ. ಶ್ರೀಮಾನ್ ಮಂಜುನಾಥ್‌ರವರು ಯಾವುದೋ ಒಂದು ವಿಷಯವನ್ನು ಎತ್ತಿಕೊಂಡು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ಇವತ್ತು ಮಾನ್ಯ ಮಂತ್ರಿಗಳು ಒಂದು ವಿಶೇಷ ತಿದ್ದುಪಡಿ ತರುತ್ತಿದ್ದೀರಿ. ಹೊಸ ಪ್ರೊಸೆಸಿಂಗ್ ಯೂನಿಟ್‌ಗಳಿಗೆ, ಮಾರ್ಕೆಟ್ ಸಮಿತಿಯಲ್ಲಿರತಕ್ಕಂಥ ಹಣವನ್ನು,

ಕೊಡತಕ್ಕಂಥಾದ್ದು, ಸ್ವಾಗತಾರ್ಹ. ನಮ್ಮಲ್ಲಿ ಕೋ ಆಪರೇಟೀವ್ ಸೆಕ್ಟಾರ್ ಇನ್ನೂ ಬೆಳೆದಿಲ್ಲ. ದಕ್ಷಿಣ ಕರ್ನಾಟಕದಲ್ಲಿ ನಮ್ಮ ಹಳೆಯ ಮೈಸೂರು ಎಂದು ನಾವೇನು ಹೇಳುತ್ತೇವೆ ಅಲ್ಲಿ ಇನ್ನೂ ಬೆಳೆದಿಲ್ಲ. ಉತ್ತರ ಕರ್ನಾಟಕದಲ್ಲಿ ತುಂಗಭದ್ರಾ ನದಿಯ ಭಾಗ ಸ್ವಲ್ಪ ಬೆಳೆದಿದೆ. ಮಾನ್ಯ ಜಿ.ಎಸ್. ಆಚಾರ್‌ರವರು ಈ ಕಡೆ ನೋಡುತ್ತಿದ್ದಾರೆ. ಕೆಲವು ಸಂದರ್ಭದಲ್ಲಿ ಕೆಲವು ಏರಿಯಾಗಳಲ್ಲಿ ಬೆಳೆಯಬಹುದು. ಆದರೆ ಎಲ್ಲಾ ಸಮರ್ಪಕವಾಗಿ ಯೋಗ್ಯ ತರಹದಲ್ಲಿ ಕೋ-ಆಪರೇಟೀವ್ ಸೆಕ್ಟಾರ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೆಳೆದಿಲ್ಲ. ಮಹಾರಾಷ್ಟ್ರಕ್ಕೆ ಹೋಲಿಕೆ ಮಾಡಿ ನೋಡಿದರೆ ನನಗನಿಸುತ್ತದೆ ನೂರಕ್ಕೆ ಹತ್ತು ಪರ್ಸೆಂಟ್ ಸಹ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಬೆಳೆದಿಲ್ಲ. ಅಲ್ಲಿ ಪ್ರತಿಯೊಂದು ಹಂತದಲ್ಲಿ ಕೂಡ ಒಂದು ಪಾನ್ ಪಟ್ಟಿ ಅಂಗಡಿ ಇಟ್ಟುಕೊಂಡು ದೊಡ್ಡ ಶುಗರ್ ಫ್ಯಾಕ್ಟರಿವರೆವಿಗೂ ಬೆಳೆದಿದೆ. ಅಲ್ಲಿ 80-85 ಶುಗರ್ ಫ್ಯಾಕ್ಟರಿಗಳು ಮಹಾರಾಷ್ಟ್ರದಲ್ಲಿವೆ. ಇವತ್ತಿನ ದಿವಸ ಮಹಾರಾಷ್ಟ್ರ ಸರ್ಕಾರ ಮಹಾರಾಷ್ಟ್ರ ಜನತೆಗೆ ಅನುಕೂಲ ಮಾಡಿಕೊಟ್ಟಿದೆ. ಮಾನ್ಯ ಅಧ್ಯಕ್ಷರೇ ಇಲ್ಲಿ ಏನಾಗಿದೆ ನಮ್ಮ ಟಿ.ಎ.ಪಿ.ಎಂ.ಸಿ.ಗಳಿಗೆ ಹಣ ಕೊಡತಕ್ಕಂಥ ಪ್ರಶ್ನೆ ಅಲ್ಲ. ಈಗ ಯೋಗ್ಯ ಪ್ರೊಸೆಸಿಂಗ್‌ನಿಟ್ಸ್ ಇದ್ದು ಅವು ವಕ್ಕಲುತನದಲ್ಲಿ ಮಾಲನ್ನು ತಂದು ರೀ ಪ್ರೊಸಸ್‌ಮಾಡಿದರೆ ಯೋಗ್ಯ ಸಮಯದಲ್ಲಿ ಯೋಗ್ಯ ಬೆಲೆ ಕೊಡತಕ್ಕಂಥ ಸಂದರ್ಭದಲ್ಲಿ ಮಾರ್ಕೆಟಿಂಗ್ ಸಮಿತಿ ಹಣವನ್ನು ಪ್ರೊಸೆಸಿಂಗ್ ಯುನಿಟ್ಸ್‌ಗೆ ಕೊಡತಕ್ಕಂಥ ತಿದ್ದುಪಡಿ ಕಾನೂನಿನಲ್ಲಿ ತಂದಿದ್ದಾರೆ ಅದು ಸ್ವಾಗತಾರ್ಹವಾದ ಕಾನೂನು. ಈ ಸಂದರ್ಭದಲ್ಲಿ ನಾನು ನಮ್ಮ ಮಾರ್ಕೆಟಿಂಗ್ ಕಮಿಟಿಯಲ್ಲಿ ಆಗತಕ್ಕಂಥ ಅವ್ಯವಹಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರಿನಲ್ಲಿ ತುಮಕೂರಿನಲ್ಲಿ, ಬೆಳಗಾಂನಲ್ಲಿ, ರಾಯಚೂರಿನಲ್ಲಿ, ಮಂಗಳೂರಿನಲ್ಲಿ, ಒಬ್ಬರೇ ಲೈಸೆನ್ಸ್‌ದಾರರು ಇದ್ದು, ಅವರು ಅಲ್ಲಿ ಪ್ಲಾಟ್ಸ್ ತೆಗೆದುಕೊಂಡು ಅಲ್ಲಿ ಪ್ಲಾಟ್ಸ್ ತೆಗೆದುಕೊಳ್ಳುವುದು ಇಲ್ಲೂ ಪ್ಲಾಟ್ಸ್ ತೆಗೆದುಕೊಳ್ಳುವುದು ಆ ಭೂಮಿ ಮೇಲೆ ಯಾವುದೇ ಕಟ್ಟಡ ಕಟ್ಟುವುದಿಲ್ಲ ಈ ತರಹ ಮಾಡಿದರೆ ಸಾಕಷ್ಟು ತೊಂದರೆಯಾಗುತ್ತದೆ. ಮಾರ್ಕೆಟಿಂಗ್ ಕಮಿಟಿಯಲ್ಲಿ ಬರತಕ್ಕಂಥ ಬೇರೆ ವ್ಯಾಪಾರಸ್ಥರಿಗೆ ಅನುಕೂಲವಾಗುವುದಿಲ್ಲ. ಯಾರು ವ್ಯಾಪಾರ ಮಾಡುತ್ತಾರೋ ಅಂತಹವರ ಪ್ಲಾಟ್ಸ್ ಆ ಸಮಿತಿಯಲ್ಲಿ ಇರಬೇಕು, ಬೇರೆ ಸಮಿತಿಗಳಲ್ಲಿ ಪ್ಲಾಟ್ಸ್ ಇದ್ದರೆ ಅವುಗಳನ್ನು ಸರ್ಕಾರ ತೆಗೆದುಕೊಳ್ಳಬೇಕು. ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ಮಂಜುನಾಥ್‌ರವರು ಹೇಳುತ್ತಿದ್ದರು ಕಮೀಷನ್ ಏಜೆಂಟ್ಸ್‌ಗಳಿಗೆ ಅಲ್ಲಿ ಸ್ಥಾನ ಇರಬೇಕೆಂದು. ನನ್ನ ಪ್ರಕಾರ ಅಲ್ಲಿ ವ್ಯಾಪಾರಸ್ಥರಿಗೆ ಸ್ಥಾನ ಇರಬಾರದು. ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ. ವ್ಯಾಪಾರಸ್ಥರು ಇದ್ದರೆ ಬರೀ ರಾಜಕೀಯ ಮಾಡುತ್ತಾರೆ. ಅದೇ ಅವರಿಗೆ ಒಂದು ವ್ಯಾಪಾರ. ಬೇರೆ ವ್ಯಾಪಾರ ಮಾಡುವುದಿಲ್ಲ. ಯಾರಾದರೂ ಒಬ್ಬರು ಛೇರ್ಮನ್‌ರು ಇದ್ದರೆ ಅವರು ಹೇಳಿದ ಕೆಲಸ ಮಾಡದಿದ್ದರೆ ಅವರಿಗೆ ಸಮಾಧಾನ ಇರುವುದಿಲ್ಲ, ಅವರು ಹೇಳಿದ ರೀತಿ ಕೇಳದಿದ್ದರೆ ಅವರ ಮೇಲೆ ಅವಿಶ್ವಾಸ ತರುವುದು ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಹಾಕುವುದು ನಡೆಯುತ್ತದೆ. ಆದ್ದರಿಂದ ಮಾರ್ಕೆಟ್ ಸಮಿತಿಯಲ್ಲಿ ದಿನನಿತ್ಯ ವ್ಯವಹಾರದಲ್ಲಿ ರೈತರಿಗೆ ಬೇಕಾಗಿರತಕ್ಕಂಥ ಸೌಲಭ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಮುಂಜಾನೆ ಹತ್ತಿ ಬಂದ ಮೇಲೆ ರೈತರಿಗೆ ವೆಯಿಮೆಂಟ್ ಅಳತೆ ಸರಿಯಾಗಿ ಆಗಬೇಕು. ಇನ್ನು ಕೆಲವೊಂದು ಸಂದರ್ಭದಲ್ಲಿ ಮಾರ್ಕೆಟ್‌ಗೆ ಮಾಲು ಬಂದ ತಕ್ಷಣ ಗೇಟ್ ಪಾಸ್ ಕೊಡುವುದಿಲ್ಲ. ಮಾಲು ಬಂದ ಕೂಡಲೇ ಗೇಟ್‌ಪಾಸ್‌ಕಡ್ಡಾಯವಾಗಿ ಕೊಡತಕ್ಕಂಥ ಕಾರ್ಯಕ್ರಮವನ್ನು ಈ ಕಾನೂನಿನಲ್ಲಿ ತರಬೇಕಾಗಿತ್ತು. ಅದು ಏಕೆ ತಮ್ಮ ಕೈ ತಪ್ಪಿ ಹೋಯಿತೇ? ಮಾಲು

ಬಂದ ಕೂಡಲೇ ಗೇಟ್‌ಪಾಸ್ ಕೊಡುವುದು, ಮಾಲನ್ನು ಕಾಲಕ್ಕೆ ಸರಿಯಾಗಿ ಟೆಂಡರ್ ಮಾಡುವುದು ಮಾಡಿದರೆ ಮಾಲು ಯಾರಿಂದ ಬಂತು ಎಷ್ಟು ಬಂತು ಪೇಮೆಂಟ್ ಸರಿಯಾಗಿ ಆಯಿತೆ ತೂಕ ಸರಿಯಾಗಿ ಆಗಿದೆಯೇ ಎನ್ನುವುದು ಗೊತ್ತಾಗುತ್ತಿತ್ತು. ಕೆಲವು ಸಾರಿ ವಿಚಲಿತ ಸಂದರ್ಭಗಳು ಬಂದರೂ ಬರಬಹುದು. ಮಾನ್ಯ ಸಹಕಾರ ಮಂತ್ರಿಗಳು ಅದನ್ನು ತಂದಿದ್ದರೆ ಒಳ್ಳೆಯದಿತ್ತು. ಅವರು ಏಕೋ ಧೈರ್ಯ ಮಾಡಲಿಲ್ಲ. ನಾನು ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದೆ. ರಾಜ್ಯ ಮಟ್ಟದಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಬ್ಯಾಂಕ್ ಒಂದನ್ನು ಮಾಡಬೇಕು. ಇದು ದೊಡ್ಡ ಗಾತ್ರದ ಬ್ಯಾಂಕ್ ಆಗುತ್ತದೆ. ವ್ಯಾಪಾರ ಅದರಿಂದ ನಡೆಯುತ್ತದೆ. ರೈತರಿಗೆ ಚೆಕ್ ಈ ಬ್ಯಾಂಕ್ ಮುಖಾಂತರ ಹೋಗಬೇಕು ಅದೇ ತರಹ ಮಾರ್ಕೆಟಿಂಗ್ ಬೋರ್ಡ್ ಮತ್ತು ಕಮಿಟಿಗಳಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ವರ್ಗಕ್ಕೆ ಪೇಮೆಂಟ್ ಇದರಿಂದ ಆಗಬೇಕು. ಅವರು ಇದನ್ನು ಏನಾದರೂ ಮಾಡಿದ್ದರೆ ಒಳ್ಳೆಯದಿತ್ತು. ಅವರು ಏನಾದರೂ ರೆಗ್ಯುಲೇಟೆಡ್ ಮಾರ್ಕೆಟಿಂಗ್ ಬ್ಯಾಂಕ್ ಮಾಡದಿದ್ದರೆ ಮುಂದೆ ದೊಡ್ಡ ಅನಾಹುತವನ್ನು ಅನುಭವಿಸಬೇಕಾಗುತ್ತದೆ.

ಅದರ ಜೊತೆಗೆ ಇವತ್ತಿನ ದಿನ ತಾವು ಒಂದು ಹೊಸ ತಿದ್ದುಪಡಿಯನ್ನು ತರುತ್ತಿದ್ದೀರಿ. ಈ ತಿದ್ದುಪಡಿ ತರತಕ್ಕಂಥ ಕಾಲದಲ್ಲಿ ಶ್ರೀಮಾನ್ ಮಂಜುನಾಥ್‌ರವರು ಹೇಳಿದ ಪ್ರಕಾರ ಯಾರು ವೇ-ಮೆನ್ ಇದ್ದಾರೆ, ಅವರನ್ನು ಮಾರ್ಕೆಟಿಂಗ್ ಕಮಿಟಿ ಸ್ಟ್ಯಾಫ್ ಆಗಿ ನೀವು ಪರಿಗಣಿಸಬೇಕಾಗುತ್ತದೆ. ಇಲ್ಲವೆಂದರೆ ಯಾರೋ ಒಬ್ಬರು ತೂಕ ಮಾಡುತ್ತಾರೆ, ಅವರಿಗೆ ಲೈಸೆನ್ಸ್ ಇರುತ್ತದೆ. ಮನಸ್ಸಿಗೆ ಬಂಡಂತೆ ತೂಕ ಮಾಡುವುದು, ಮನಸ್ಸಿಗೆ. ಬಂದಂತೆ ತೂಕ ಬರೆಯುವುದು, ಮನಸ್ಸಿಗೆ ಬಂದಂತೆ ಬಿಲ್ ಮಾಡುವುದಾಗುತ್ತದೆ. ಅದಕ್ಕೆ ತಾವು ಏನಾದರೂ ಮಾಡಿ ಈ ವೇಮನ್‌ಗಳನ್ನು ಮಾರ್ಕೆಟಿಂಗ್ ಕಮಿಟಿಯ ಸಿಬ್ಬಂದಿ ಎಂದು ತಾವು ಪರಿಗಣಿಸಬೇಕಾಗುತ್ತದೆ. ಇದರ ಜೊತೆಗೆ ತಾವು ಮಾರುಕಟ್ಟೆ ಸಮಿತಿಯ ದೊಡ್ಡ ಗಾತ್ರದ ಪ್ರೊಸೆಸಿಂಗ್ ಯೂನಿಟ್‌ಗಳನ್ನು, ಸ್ಥಾಪನೆ ಮಾಡತಕ್ಕಂಥ ಕಾರ್ಯಕ್ರಮ ಇದರಲ್ಲಿ ತರಬೇಕಾಗಿತ್ತು. ಅದು ಕೂಡ ತಂದಿಲ್ಲ.

ಇನ್ನು ಸಿಬ್ಬಂದಿ ವರ್ಗದವರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಸ್ಟೇಟ್ ಮಾರ್ಕೆಟಿಂಗ್ ಕಮಿಟಿ ಬೋರ್ಡ್ ಎಂಪ್ಲಾಯೀಸ್ ಮತ್ತು ಮಾರ್ಕೆಟ್ ಸಮಿತಿಯ ಸರ್ಕಾರಿ ಎಂಪ್ಲಾಯೀಸ್ ಏನು ಮಾಡಿದ್ದೀರಿ, ಈ ಎರಡು ಕೂಡ ಯಾವ ತರಹ ಕೆ.ಇ.ಬಿ. ಇದೆ, ಯಾವ ತರಹ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಇದೆ, ಯಾವ ತರಹ ಮಂಡಳಿಗಳು ಇವೆಯೋ ಅದೇ ತರಹ ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಸರ್ವೀಸ್ ಎಂದು ಮಾಡಿ ಇಡೀ ಸಮಗ್ರವಾಗಿ ಮಾರ್ಕೆಟ್ ಸಮಿತಿಯ ಸಮಸ್ತ ಸಿಬ್ಬಂದಿ ಹಾಗೂ ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಸಿಬ್ಬಂದಿಯನ್ನು ಒಂದೇ ಛತ್ರಿ ಕೆಳಗೆ ತಂದಿದ್ದರೆ ಅದು ಚೆನ್ನಾಗಿ ಆಗುತ್ತಿತ್ತೆಂದು ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತಿದ್ದೇನೆ. ಅದರ ಜೊತೆಗೆ ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಮೆಂಬರ್ ಏನು ಆಗುತ್ತಾರೋ ಅವರಿಗೆ ಅಲ್ಲಿ ವೈಸ್ ಛೇರ್ಮನ್ ಶಿಪ್ ಮಾತ್ರ ಇದೆ. ಛೇರ್ಮನ್ ಶಿಪ್ ಸ್ಥಾನ ಇಲ್ಲ. ಅಧಿಕಾರದಲ್ಲಿರತಕ್ಕ ಮಂತ್ರಿ ಮಂಡಲದ ಸದಸ್ಯರೊಬ್ಬರು ಅಲ್ಲಿ ಛೇರ್ಮನ್ ಇರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಅದರೂ ಕೂಡ ಸಾರ್ವಜನಿಕ ಹಿತ ದೃಷ್ಟಿಯಿಂದ ಹಾಗೂ ಪ್ರಜಾಪ್ರಭುತ್ವದ ನಿಯಮಾವಳಿ ಪ್ರಕಾರ, ಜಿಲ್ಲಾ ಮಟ್ಟದಿಂದ ಎಲೆಕ್ಟೆಡ್ ಮೆಂಬರ್ಸ್ ಬಂದಿರುತ್ತಾರೆ. ಅವರಲ್ಲಿ ಯಾರಾದರೊಬ್ಬರನ್ನು ಛೇರ್ಮನ್ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಯವನ್ನು ವ್ಯಕ್ತ ಮಾಡುತ್ತಿದ್ದೇನೆ. ಆಮೇಲೆ ಇದರ ಜೊತೆಗೆ ಶ್ರೀಮಾನ್ ಮಂಜುನಾಥ್‌ರವರು ಕೆಲವೊಂದು ವಿಷಯಗಳನ್ನು ಏನು ಗಮನಕ್ಕೆ ತಂದಿದ್ದಾರೆ

ಅವುಗಳ ಬಹಳ ಒಳ್ಳೆಯವು ಇವೆ. ಆಮೇಲೆ ಇಲ್ಲಿ ಕುರಿಗಳ ಮೇಲೆ ಹಾಗೂ ಸಣ್ಣ ಪ್ರಾಣಿಗಳ ಮೇಲೆ 1 ರೂಪಾಯಿ ಶುಲ್ಕ ಮಾಡಿದ್ದೀರಿ. ಅದನ್ನು 25 ಪೈಸೆಯಿಂದ 8 ಆಣೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದೇನೆ. ಸಮಗ್ರವಾದಂಥ ತಿದ್ದುಪಡಿ ತಂದರೆ, ಬಹು ದಿನದ ಕನಸು ನನಸಾಗುತ್ತಿದೆ. ಇದಕ್ಕೆ ನನ್ನ ಸಂಪೂರ್ಣವಾಗಿ ಬೆಂಬಲ ವ್ಯಕ್ತ ಮಾಡುತ್ತಾ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜ ರಾಯರೆಡ್ಡಿ: (ಯಲ್ಬುರ್ಗಾ): ಸನ್ಮಾನ್ಯ ಉಪಾಧ್ಯಕ್ಷಣೀಯವರೆ, ನಮ್ಮ ಹಿರಿಯ ಸಹಕಾರಿ ಬಂಧು ಮತ್ತು ನಮ್ಮ ರಾಜ್ಯದ ಸಹಕಾರಿ ಮಂತ್ರಿಗಳು, ಈ ದಿನ ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ಬಗ್ಗೆ ಒಂದು ಸಮಗ್ರವಾದ ತಿದ್ದುಪಡಿಯನ್ನು ಇಲ್ಲಿ ತಂದು ಹಲವಾರು ಒಳ್ಳೆಯ ಸಲಹೆಗಳನ್ನು ಹೇಳಿದ್ದಾರೆ. ಆದರೆ, ಈ ತಿದ್ದುಪಡಿಯಲ್ಲಿ ಇನ್ನೂ ಒಂದೆರಡು ಸಲಹೆಗಳನ್ನು ಸೇರಿಸಿಕೊಂಡರೆ, ಬಹುಶಃ ರೈತರಿಗೆ ಮತ್ತು ಇನ್ನಿತರ ವರ್ಗಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ನಾನು ಇಚ್ಚಿಪಡುತ್ತೇನೆ. ಈ ಒಂದು ವಿಧೇಯಕದಲ್ಲಿ ಮಾರುಕಟ್ಟೆ ಪ್ರದೇಶಗಳ ಬಗ್ಗೆ ಹೇಳುವುದಾದರೆ, ಪ್ರತಿ ತಾಲ್ಲೂಕಿಗೆ ಎ.ಪಿ.ಎಂ.ಸಿ.ಯನ್ನು ಕಡ್ಡಾಯವಾಗಿ ಏನು ಮಾಡಿದ್ದೀರಿ ಇದು ಬಹಳ ಸಂತೋಷದ ವಿಷಯ. ಅದರ ಜೊತೆಗೆ ಇನ್ನೊಂದು ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ. ರೈತರು ಏನಿದ್ದಾರೆ, ಈ 9 ಜನ ನಿರ್ದೇಶಕರಿದ್ದಾರೆ. 9 ರಿಂದ 11ಕ್ಕೆ ಏರಿಸಿದ್ದೀರಿ ಇದು ತುಂಬಾ ಸಂತೋಷದ ವಿಚಾರ. ಇದರ ಜೊತೆಗೆ ಪರಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾಡಿದ್ದಾರೆ. ಆದರೆ ಮೈನಾರಟೀಸ್‌ಗಳನ್ನು ಎಲ್ಲಾ ಕಡೆ ಮರೆತು ಬಿಡುತ್ತಾರೆ. ಈಗ ಏನಾಗಿದೆ, ಹಳ್ಳಿಕಡೆ ಮುಸ್ಲೀಮ ರೈತರೂ ಇದ್ದಾರೆ. ನಮ್ಮ ಕಡೆ ತಮಗೆ ಗೊತ್ತಿದ್ದ ಹಾಗೆ ಇದ್ದಾರೆ.

ಹರಿಜನ ಗಿರಿಜನರಿಗೆ ಹೇಗೆ ಜಮಿನು ಇದೆಯೋ, ಹಾಗೆಯೇ ಮೈನಾರಿಟಿಯವರಿಗೂ ಹಳ್ಳಿಗಳಲ್ಲಿ ಜಮಿನು ಇದೆ. ಆದಕಾರಣ ಅವರಿಗೂ ಒಂದು ಪ್ರತಿನಿಧಿತ್ವವನ್ನು ಕೊಡಬೇಕಾಗುತ್ತದೆ. ಅಂತೆಯೇ ಮಹಿಳೆಯರಿಗೆ ಪ್ರಾತಿನಿಧಿತ್ವವನ್ನು ಕೊಟ್ಟಿದ್ದನ್ನು ನಾನು ಸ್ವಾಗತಿಸುತ್ತೇನೆ. ಈ ದಿಸೆಯಲ್ಲಿ ತಾವುಗಳು ಒಂದು ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟಿದ್ದೀರಿ, ಕಮಿಶನ್ ಏಜಂಟ್ ಎಂದು ಇಬ್ಬರು ಇದ್ದರು. ಒಬ್ಬ ಖರೀದಿಕಾರ ಮತ್ತೊಬ್ಬ ಕಮಿಶನ್ ಏಜಂಟ್ ಅಂದರೆ ದಲ್ಲಾಲರಿಗೆ ಒಂದು ಸೀಟು ಇರುತ್ತಿತ್ತು. ಅವರಿಬ್ಬರನ್ನೂ ಈಗ ಹೊರಗೆ ಹಾಕಿ ಬಹಳ ಒಳ್ಳೆಯ ಕೆಲಸವನ್ನು ಮಾನ್ಯ ಸಚಿವರು ಮಾಡಿದ್ದಾರೆ. ತಮಗೆ ಎರಡು ಸಲಹೆಗಳನ್ನು ಅಂದರೆ ಇದಕ್ಕೆ ಸಬ್‌ಸ್ಟಿಟ್ಯೂಟ್ ಆಗಿ ಹೇಳುತ್ತೇನೆ. ಅಂದರೆ ಒಬ್ಬ ಹಮಾಲರನ್ನು ತೆಗೆದುಕೊಳ್ಳ ಬೇಕು, ಮತ್ತು ಒಬ್ಬ ವೇಮನ್‌ರ ಪ್ರತಿನಿಧಿಯನ್ನು ಕೂಡ ತೆಗೆದುಕೊಂಡರೆ ಅದರಿಂದ ಒಳ್ಳೆಯದಾಗುತ್ತದೆ. ಏಕೆಂದರೆ ಖರೀದಿದಾರರ ಪರವಾಗಿ ಮತ್ತು ದಲ್ಲಾಲರ ಪರವಾಗಿ, ಈ ಇಬ್ಬರನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಟಿ.ಎಂ ಮಂಜುನಾಥ್: ಇದು ರೈತರಿಗೋಸ್ಕರ ಇರುವುದು,ಆದರೆ ರೈತರನ್ನು ಶೋಷಣೆ ಮಾಡತಕ್ಕಂಥ ಹಮಾಲರು.

ಶ್ರೀ ಬಸವರಾಜ್ ರಾಯರೆಡ್ಡಿ: ಹಾಗೆಂದಮೇಲೆ ಕಮಿಶನ್ ಏಜಂಟರು ಏಕೆ ಬೇಕು?

ಶ್ರೀ ಬಿ.ಎಚ್. ಬನ್ನಿಕೋಡ್: ಹಮಾಲರು ರೈತರ ಕಾರ್ಮಿಕರು, ಅವರು ಶೋಷಣೆ ಮಾಡುವ ಪ್ರಶ್ನೆ ಇಲ್ಲ, ಶೋಷಣೆ ಮಾಡುವವರಿಗೆ ಬೆಂಬಲಕೊಡಿ ಎಂದು ತಾವುಗಳು ಹೇಳುತ್ತೀರಾ?

ಶ್ರೀ ಬಸವರಾಜ್ ರಾಯರೆಡ್ಡಿ: ಇನ್ನೊಂದು ಒಳ್ಳೆಯ ವಿಚಾರವನ್ನು ಸಹಕಾರ ಮಂತ್ರಿಗಳು ಇಲ್ಲಿ ಹೇಳಿದ್ದಾರೆ. ರೈತ ಪ್ರತಿನಿಧಿಗಳನ್ನು ಐದು ವರ್ಷಗಳ ಕಾಲ ಕಮಿಶನ್ ಏಜಂಟ್‌ರ ಜೊತೆಗೆ ದಲಾಲರ ಜೊತೆಗೆ ನೇರವಾಗಿ ವ್ಯಾಪಾರ ಮಾಡಿದ್ದರೋ ಅಂಥಾದ್ದನ್ನು ನಿಲ್ಲಿಸುವುದುಕ್ಕೆ ಇದು ಬಹಳ ಒಳ್ಳೆಯದು ಏಕೆಂದರೆ ಈಗ ಅದು ಆಟೋಮೆಟಿಕ್ ಆಗಿ ಕಂಟ್ರೋಲ್ ಆಗುತ್ತದೆ. ಈ ಮುತ್ಸುರಿ ನಡೆದಾಗ ಮಾರುಕಟ್ಟೆಯಲ್ಲಿ ಈ ಸಮಿತಿಯನ್ನು ನಡೆಸುವುದಕ್ಕೆ ಅಧಿಕಾರ ಕೊಡುತ್ತೀರಿ ಎಂದು ಹೇಳುತ್ತೀರಿ? ಅದು ಹೇಗೆ ಸಾಧ್ಯ? ಅದರ ಬಗ್ಗೆ ತಾವು ಮರುಚಿಂತನೆಯನ್ನು ತಾವುಗಳು ಮಾಡುತ್ತೀರಿ ಎಂದು ನಾನು ಇಚ್ಛಿಪಡುತ್ತೇನೆ. ಇನ್ನು ಜಾನುವಾರುಗಳಿಗೆ 4 ಆಣೆ, ಎಂಟಾಣೆ ಇದ್ದುದನ್ನು ಹೆಚ್ಚಿಗೆ ಏಕೆ ಮಾಡುತ್ತೀರಿ ಅದನ್ನು ಫ್ರೀ ಮಾಡುವುದು ಒಳ್ಳೆಯದು. ನಾನು ಹೇಳಿದ ಕೆಲವು ಸಲಹೆಗಳನ್ನು ಅದರಲ್ಲೂ ಹಮಾಲರು ಛೇರ್ಮನ್ ಪ್ರತಿನಿಧಿಗಳನ್ನು ತೆಗೆದುಕೊಳ್ಳುವ ಮತ್ತು ಮೈನಾರಿಟಿ ಪ್ರತಿನಿಧಿಗಳನ್ನು ತೆಗೆದುಕೊಳ್ಳುವ ಬಗ್ಗೆ ತಾವುಗಳು ವಿಚಾರ ಮಾಡಬೇಕೆಂದು ಕೇಳಿಕೊಳುತ್ತೇನೆ. ಇವುಗಳನ್ನು ತಾವುಗಳು ಮಾಡಿದಲ್ಲಿ ಇದೊಂದು ಪ್ರಗತಿದಾಯಕ ವಿಧೇಯಕವಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು) : ಅಧ್ಯಕ್ಷಿಣಿಯವರೆ, ಈ ಒಂದು ತಿದ್ದುಪಡಿಯ ಬಗ್ಗೆ ನಾನು ಕೆಲವೊಂದು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇವೆ. ಕೆಲವೊಂದು ವಿಷಯಗಳು ರೈತರಿಗೆ ಬಹಳ ದಿನಗಳಿಂದ ಏನು ತೊಂದರೆಯಾಗುತ್ತಿತ್ತು ಅದನ್ನು ತಪ್ಪಿಸುವ ದೃಷ್ಟಿಯಿಂದ, ಮಾರ್ಕೆಟಿಂಗ್ ಕಮಿಟಿಯಲ್ಲಿ ಯಾರು ರೈತರು ತಾವುಗಳು ಬೆಳದ ಉತ್ಪಾದನೆಯನ್ನು ಮಾರಾಟ ಮಾಡತಕ್ಕಂಥಾದ್ದರಲ್ಲಿ ದಲ್ಲಾಲರು ಕೂಡ ಕಮಿಟಿಯಲ್ಲಿ ಪ್ರತಿನಿಧಿಗಳಾಗಿರುತ್ತಿದ್ದರು. ಅವರು ಇಬ್ಬರೂ ಇದ್ದರು ಸಹಿತ ಅವರು ಇಡೀ ಕಮಿಟಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳತಕ್ಕಂಥ ರೀತಿಯಲ್ಲಿ ಇದ್ದರು. ಅದು ಬಹುತೇಕ ಎಲ್ಲಾ ಸಮಿತಿಗಳಲ್ಲಿ ನಡೆಯುತ್ತಾ ಇತ್ತು. ಇದನ್ನು ಅರಿತು ಈ ಕಮೀಷನ್ ಏಜೆಂಟರು ದಲ್ಲಾಳಿಗಳು ರೈತವರ್ಗವನ್ನು ಶೋಷಣೆ ಮಾಡುವುದನ್ನು ತಪ್ಪಿಸಲ್ಲಿಕ್ಕೆ ಈ ಒಂದು ಮಾರುಕಟ್ಟೆ ಕಮಿಟಿ ಸದಸ್ಯತ್ವದಿಂದ ಅವರನ್ನು ದೂರ ಇಡಬೇಕು ಅವರು ಕೇವಲ ವ್ಯವಹಾರಕ್ಕಾಗಿ ಮಾತ್ರ ಇರಬೇಕು ಎಂಬುದು ಸೂಕ್ತವಾಗಿದೆ. ಅದರ ಜೊತೆಗೆ 9ರಿಂದ 11ಕ್ಕೆ ಹೆಚ್ಚಿಸಿದ್ದು ಅಲ್ಲಿ ಪರಿಶಿಷ್ಟ ಜಾತಿಯವರಿಗೆ, ಮಹಿಳೆಯರಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದು ಸೂಕ್ತವಾಗಿರುವುದು ಮಾತ್ರವಲ್ಲದೆ ಅದನ್ನು ಚುನಾವಣೆಯ ಮೂಲಕ ಕೊಟ್ಟಿದ್ದುದು ಬಹಳ ಸ್ವಾಗತಾರ್ಹವಾದುದು. ಈ ನಾಮಿನೇಶನ್ ಮಾಡುವ ಪದ್ಧತಿ ಸಾಧ್ಯವಾದಷ್ಟು ಮಟ್ಟಿಗೆ ಪೂರ್ಣವಾಗಿ ಹೋಗಬೇಕು ಬೇಕಾದರೆ ಹರಿಜನಗಿರಿಜನರಿಗೂ ಒಂದು ಮಿಸಲಾತಿ ಕ್ಷೇತ್ರವನ್ನು ಕೊಡಬಹುದು. ಯಾರು ಆಯ್ಕೆ ಆಗುತ್ತಾರೆ ಅವರು ಪ್ರತಿನಿಧಿಗಳಾಗುತ್ತಾರೆ. ಈ ನಾಮಿನೇಶನ್ ಮಾಡತಕ್ಕಂಥ ಪದ್ದತಿಯು ಇನ್ನುಳಿದ ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಕಡಿಮೆಯಾಗಬೇಕು ಎಂದು ಹೇಳುತ್ತೇನೆ. ಇನ್ನು ಮೈನಾರಿಟಿಯವರು ಕೂಡ ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯವನ್ನು ಮಾಡಿಕೊಂಡಿದ್ದಾರೆ ಅವರಿಗೂ ಒಂದು ಸ್ಥಾನವನ್ನು ಮೀಸಲಾಗಿಡುವುದು ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ. ಬಹುಶಃ ಅವರು ನಜರ್‌ಚೂಕ್‌ನಿಂದ ಉಳಿದಿರಬಹುದು, ಅಥವಾ ಅವರು ಜನರಲ್ ಆಗಿ ಬರುತ್ತಾರೆ ಎಂಬ ದೃಷ್ಟಿಯಿಂದ ಬಿಟ್ಟಿರಬಹುದು. ಏನಿದ್ದರೂ ಅವರಿಗೂ ಒಂದು ಸ್ಥಾನವನ್ನು ಕಲ್ಪಿಸುವುದು ಒಳ್ಳೆಯದು ಎಂಬ ಭಾವನೆ ನನ್ನದ್ದಾಗಿದೆ. ಹಿಂದಿನ ವರ್ಷ ಅನೇಕ ಸಾರಿ ಸ್ಟ್ರೈಕ್ ನಡೆಯಿತು, ದಲಾಲರು ಇವೊತ್ತು ಏನಾದರೂ ರೈತರು ಶೇಂಗಾವನ್ನು ಮಾರಲಿಕ್ಕೆ ತಂದರೆ ಮಳೆ ಬಂತು ಅಂದರೆ, ಅದನ್ನು ಬಿಟ್ಟು ಟೆಂಡರ್ ಹಾಕಿರುತ್ತಾರೆ, ರೇಟ್ ಫಿಕ್ಸ್ ಆಗಿರುತ್ತದೆ, ತೂಕ ಮಾಡಿಕೊಳ್ಳುವುದು ಬಿಟ್ಟು ನಾಲ್ಕು ಕೆ.ಜಿ. ಹೆಚ್ಚಿಗೆ ಕೊಡಿ, ಬಾರದಾನ ಕೊಡಿ ಎಂದು ಹೇಳುವುದು ಮುಂತಾಗಿ

ನೆಡೆಯುತ್ತಾ ಇತ್ತು. ಟೆಂಡರ್ ಹಾಕಿ ರೇಟ್ ಮಾಡಿ ತಾವುಗಳು ತೆಗೆದುಕೊಳ್ಳುವ ಕಾಲಕ್ಕೆ ತೂಕ ಮಾಡಿಕೊಳ್ಳಲಾಗದೆ ಸುಮ್ಮನೆ ರೈತರಿಗೆ ಸುಲಿಗೆ ಮಾಡುವುದಕ್ಕಾಗಿ ಒಂದು ಚೀಲಕ್ಕೆ ಇಂತಿಷ್ಟು ಕೆಜಿ ಹೆಚ್ಚಿಗೆ ಕೊಡಿ ಎಂದು ವಸೂಲು ಮಾಡುತ್ತಿದ್ದರು. ಹಾಗೆ ಕೊಡದಿದ್ದರೆ ಅವರು ತೂಕವನ್ನೆ ಮಾಡಿಕೊಳ್ಳುತ್ತಾ ಇರುತ್ತಿರಲಿಲ್ಲ. ಅದನ್ನು ತಪ್ಪಿಸಲಿಕ್ಕೆ ಮತ್ತು ಅಂಥ ಪರಿಸ್ಥಿತಿಯಲ್ಲಿ ಅವರ ಮೇಲೆ ಕಾನೂನಿನ ಕ್ರಮಕ್ಕೊಳಪಡಿಸುವುದಕ್ಕೆ ಅವರ ಲೈಸೆನ್ಸ್ ರದ್ದು ಪಡಿಸಲಿಕ್ಕೆ, ಅವರು ಖರೀದಿ ಮಾಡಲಿಕ್ಕೆ ಮುಂದೆ ಬರಲಾರದ ಸ್ಥಿತಿಯಲ್ಲಿಯೂ ಸಹ ಮಾರ್ಕೆಟಿಂಗ್ ಸಮಿತಿಯವರೇ ಈ ಖರೀದಿಯನ್ನೇ ಮಾಡುವಂಥ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಿಕೊಟ್ಟಿದ್ದು ತುಂಬಾ ಒಳ್ಳೆಯ ವಿಚಾರವಾಗಿದೆ. ಇದು ಎಲ್ಲಾ ಸಮಿತಿಯವರಿಗೂ ಸಾಧ್ಯವಾಗಲಿಕ್ಕಿಲ್ಲ. ಆರ್ಥಿಕವಾಗಿ ಸಬಲವಾಗಿರತಕ್ಕಂಥ ಕಮಿಟಿಗಳಿಗೆ ಮಾತ್ರ ಸಾಧ್ಯವಾಗುತ್ತದೆ.

ಇಷ್ಟು ತಡವಾಗಿಯಾದರೂ ಈ ಒಂದು ವ್ಯವಸ್ಥೆಯನ್ನು ತಂದಿದ್ದು ಆ ದಿಸೆಯಲ್ಲಿ ಮೊದಲನೆಯ ಹೆಜ್ಜೆ ಎಂದು ಪ್ರಶಂಶಿಸಬೇಕಾಗುತ್ತದೆ. ಇನ್ನು ಮುಂದೆ ಪ್ರಗತಿಪಥದಲ್ಲಿ ಹೋಗಲು ಇದೊಂದು ಸಾಧನ ಎಂದು ಹೇಳುತ್ತೇನೆ. ಆಗ್ರಿಕಲ್ಚರಲ್ ಕಮಿಟಿಗಳು ಅಥವಾ ಯಾವುದೇ ಮಾರ್ಕೆಟಿಂಗ್ ಕಮಿಟಿಗಳಲ್ಲಿ ಕೋಟ್ಯಾಂತರ ಹಣವಿದ್ದರೂ ಅದರಿಂದ ರೈತರಿಗೆ ಉಪಯೋಗವಾಗುತ್ತಾ ಇರಲಿಲ್ಲ. ಅವರ ಉಪಯೋಗಕ್ಕೆ ಬಳಸುತ್ತಾ ಇರಲಿಲ್ಲ. ಪ್ರೋಸೆಸಿಂಗ್ ಯುನಿಟ್‌ಗಳು ಇರಬಹುದು ಅಥವಾ ರೈತರ ಉತ್ಪಾದನೆಗಳನ್ನು ಪ್ರೋಸೆಸ್ ಮಾಡತಕ್ಕಂಥ, ಅಥವಾ ಅಲ್ಲಿ ಖರೀದಿ ಮಾಡಲಿಕ್ಕೆ ಈ ಸಂಸ್ಥೆಗಳಿಗೆ ಹಣ ಕಡಿಮೆಯಾಗುತ್ತಿತ್ತು, ಸರಕಾರ ಅಥವಾ ಬ್ಯಾಂಕ್‌ಗಳ ಮೂಲಕ ಹಣ ಸಿಗದಿದ್ದ ಕಾಲದಲ್ಲಿ ಅಲ್ಲಿ ರೈತರದೇ ಆದಂಥ ಹಣವನ್ನು ಶೇರ್ ಮೂಲಕ ಕೊಡಲಿಕ್ಕೆ ಏನು ತಿದ್ದುಪಡಿ ತಂದಿದ್ದಾರೆ. ಇದು ಬಹಳ ಸೂಕ್ತವಾದಂಥಾದ್ದು. ಇವೊತ್ತಿನ 'ಪರಿಸ್ಥಿತಿಯಲ್ಲಿ ಇದೊಂದು ಪ್ರಾರಂಭಿಕ ಎಂದು ಹೇಳುತ್ತಾ, ರೈತರಿಗೆ ಒಂದು ಯೋಗ್ಯ ಬೆಲೆಯನ್ನು ಕೊಡಬೇಕಾದರೆ ರಾಜ್ಯಮಟ್ಟದಲ್ಲಿ ಇದಕ್ಕೊಂದು ಪ್ರತ್ಯೇಕವಾದ ವ್ಯವಸ್ಥೆಯು ಆಗಬೇಕು, ಅದಕ್ಕೆ ನನ್ನ ವಿಚಾರದಲ್ಲಿ ಇನ್ನೂ ತನಕ ಈ ಬಗ್ಗೆ ಯಾರೂ ಸಹ ವಿಚಾರವನ್ನೆ ಮಾಡಿಲ್ಲ. ವಿಚಾರ ಮಾಡುವವರಿದ್ದರೆ ಅವರನ್ನು ಆಕಾಂಕ್ಷಿಗಳು ಎಂದು ಹೇಳುವ ಜನರು ಬಹಳವಾಗಿದ್ದರಿಂದ ಆ ಒಂದು ವಿಚಾರಣಾ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ. ರೈತರು ಬೆಳೆದಂಥ ಮಾಲನ್ನು ಸರಕಾರ ಅಥವಾ ಸಹಕಾರಿ ಸಂಘಗಳ ಮೂಲಕ ಖರೀದಿ ಮಾಡಿ. ಎಣ್ಣೆ ಮಿಲ್‌ಗಳೇ ಇರಬಹುದು, ಸಕ್ಕರೆ ಫ್ಯಾಕ್ಟರಿ ಇರಬಹುದು, ಅಲ್ಲೆಲ್ಲಾ ರೈತರು ಒದಗಿಸುವ ಕಚ್ಚಾ ಪದಾರ್ಥಗಳನ್ನು ಅವರಿಗೆ ಲಾಭದಾಯಕವಾಗುವಂಥ ಬೆಲೆಯಲ್ಲಿ ಕೊಂಡುಕೊಳ್ಳುವಂಥ ಒಂದು ವ್ಯವಸ್ಥೆಯಾಗಬೇಕು. ಅದು ಮಾಡದ ತನಕ ರೈತರ ಶೋಷಣೆಯು ತಪ್ಪುವುದಿಲ್ಲ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಸರಕಾರ ಹಾಗೂ ಸಚಿವರು ಇದನ್ನು ಯೋಚನೆ ಮಾಡಿ ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಈ ಒಂದು ಪ್ರಯತ್ನ ಮಾಡಬೇಕೆಂದು ಹೇಳುತ್ತಾ ಈ ಒಂದು ತಿದ್ದುಪಡಿಯು ರೈತರ ಪರವಾಗಿ ಇಟ್ಟ ಮೊದಲನೇ ಹೆಜ್ಜೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರು): ಮಾನ್ಯ ಸಭಾಧ್ಯಕ್ಷಿಣಿಯವರೆ, ಕರ್ನಾಟಕ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟಿಂಗ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಬಿಲ್‌ನ್ನು ಸ್ವಾಗತಿಸುತ್ತಾ ಎರಡು ಮಾತನ್ನಾಡಲು ಇಚ್ಚಿಸುತ್ತೇನೆ. 1987ರಷ್ಟು ಹಿಂದೆಯೇ ಈ ಒಂದು ತಿದ್ದುಪಡಿಯನ್ನು ತರಬೇಕೆಂದು ಸರಕಾರ ಆಲೋಚನೆ ಮಾಡಿದ್ದರೂ ಕೂಡ ಪದೇ ಪದೇ ಸಮಿತಿಗಳು ಸೇರುವಂಥದ್ದು ವಿಮರ್ಶೆ ಮಾಡುವಂಥಾದ್ದು ನಡೆಯಿತೇ ಹೊರತು, ಯಾವ ಒಂದು ಕೆಲಸವೂ ಆ ಬಗ್ಗೆ ಆಗಲಿಲ್ಲ. ನಮ್ಮ ಹಿರಿಯರಾದ ಸನ್ಮಾನ್ಯ ಕೆ.ಹೆಚ್. ಪಾಟೀಲ್‌ರವರು ತಾನು ಅಧಿಕಾರವನ್ನು ವಹಿಸಿಕೊಂಡ ನಂತರ

ಅತ್ಯಂತ ತ್ವರಿತವಾಗಿ ಇದರ ಕುರಿತು ಕಾಳಜಿಯನ್ನು ವಹಿಸಿ, ಬಹಳ ಅತ್ಯುತ್ತಮವಾದ ಸಲಹೆಗಳುಳ್ಳ ಈ ತಿದ್ದುಪಡಿ ಮಸೂದೆಯನ್ನು ಇಲ್ಲಿ ತಂದಿದ್ದಾರೆ. ಅದೇ ರೀತಿಯಲ್ಲಿ ಅವರು ಕೋ-ಅಪರೇಟಿವ್ ಅಮೆಂಡ್‌ಮೆಂಟ್ ಬಿಲ್‌ನ್ನು ಕೂಡ ತಂದಿದ್ದಾರೆ. ಸದನದ ಎಲ್ಲಾ ಪಕ್ಷದವರೊಂದಿಗೆ ಸಮಾಲೋಚಿಸಿ, ಅದನ್ನು ತಯಾರು ಮಾಡಿದ್ದಾರೆ. ಅದೂ ಕೂಡ ಇದರ ಜೊತೆಯಲ್ಲಿ ಬಂದಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ. ಮುಂದಿನ ಅಧಿವೇಶನದಲ್ಲಾದರೂ ಅದಷ್ಟು ಬೇಗ ಬರಲಿ, ಲೆಂಡಿಂಗ್, ಮಾರ್ಕೆಟಿಂಗ್, ಪ್ರೋಸೆಸಿಂಗ್ ಎಲ್ಲಾ ವಿಧಾನಗಳಲ್ಲಿಯೂ ಹೊಸ ಆಯಾಮಗಳನ್ನು ಹಾಕತಕ್ಕಂಥ ಈ ಎರಡು ತಿದ್ದುಪಡಿಗಳಿಂದ ರಾಜ್ಯಕ್ಕೆ ಒಳಿತಾಗಲಿ ಎಂದು ನಾನು ಹಾರೈಸುತ್ತೇನೆ. ಇದರಲ್ಲಿ ಮುಖ್ಯವಾಗಿ ಮಾರ್ಕೆಟ್ ಕಮಿಟಿ, ಕೋ-ಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಗಳಿಗೆ, ಅಗ್ರಿಕಲ್ಚರ್ ಕೊ-ಆಪರೇಟಿವ್ ಸೊಸೈಟಿಗಳಿಗೆ ಆ ಮಾರ್ಕೆಟ್ ಏರಿಯಾದಲ್ಲಿ ಸಾಲ ಕೊಡುವಂಥ ಒಂದು ವ್ಯವಸ್ಥೆಯನ್ನು ಅವರು ಮಾಡುತ್ತಾ ಇದ್ದಾರೆ ಇದು ಅತ್ಯಂತ ಉತ್ತಮವಾದುದು ಮತ್ತು ಅದ್ಭುತವಾದುದು. ಅದೇ ರೀತಿಯಲ್ಲಿ ಅನೇಕ ಹೊಸ ವಿಚಾರಗಳನ್ನು ಇಲ್ಲಿ ಹೊಸದಾಗಿ ಸೇರಿಸಿದ್ದಾರೆ, ಮುಖ್ಯವಾಗಿ ಮಾರ್ಕೆಟ್ ಏರಿಯ ಒಂದು ತಾಲ್ಲೂಕು ಪ್ರದೇಶಕ್ಕಿಂತ ಕಡಿಮೆ ಇರದೇ ಮತ್ತು ಜಿಲ್ಲೆಗಿಂತ ಹೆಚ್ಚಾಗಿರದೇ ಇರಬೇಕೆಂದು ಇದೆ. ನಾನು ದಕ್ಷಿಣ ಕನ್ನಡ ಜಿಲ್ಲೆಯ ಪರವಾಗಿ ಹೇಳುವುದಿದ್ದರೆ ಈಗ ಇಡೀ ಜಿಲ್ಲೆಗೆ ಒಂದು ಮಾರ್ಕೆಟ್ ಕಮಿಟಿ ಇದೆ, ಬಹಳ ಬೃಹತ್ ಆದ ಕಮಿಟಿ, ಬೇರೆ ಕಡೆಗಳಲ್ಲಿ ತಾಲ್ಲೂಕಿಗೆ ಒಂದೊಂದು ಸಮಿತಿ ಇದೆ, ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಮಾರ್ಕೆಟ್ ಕಮಿಟಿಯನ್ನು ವಿಭಜಿಸಿ, ಹಿಂದೆ ಮೂರು ಅಥವಾ ನಾಲ್ಕು ಕಮಿಟಿಗಳನ್ನು ಮಾಡಬೇಕೆಂದು ಸರ್ಕಾರಕ್ಕೆ ಸೂಚನೆ ಇತ್ತು.

ಸರಕಾರ ಅದನ್ನು ಆಲೋಚನೆ ಮಾಡಿ ಮೀನಮೇಷ ಮಾಡುವುದು ಎಂದಿತ್ತು ಈ ಸಲ ಅದನ್ನು ಮುಂದಿನ ಚುನಾವಣೆಯೊಳಗೆ ಕಾರ್ಯಗತಗೊಳಿಸಬೇಕು ಎಂದು ಹೇಳುತ್ತೇನೆ. ಹಾಗೆಯೇ ಭೂಮಿಯನ್ನು ಪಡೆಯುವುದು ಅಥವಾ ಕಟ್ಟಡ ಪಡೆಯುವುದು ಈ ಎಲ್ಲಾ ಅಧಿಕಾರ ಕೊಡುವ ತಿದ್ದುಪಡಿ ಏನಿದೆ ಇದು ಬಹಳ ಸೂಕ್ತವಾದದ್ದು. ದಕ್ಷಿಣ ಕನ್ನಡ ಜಿಲ್ಲೆಯ ಅನುಭವದ ಪ್ರಕಾರ ಅನೇಕ ಕಡೆ ಭೂಮಿ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. ಅಲ್ಲದೆ ಮಹಿಳೆಯರಿಗೆ ಪರಿಸಿಷ್ಟ ಜಾತಿ ಪಂಗಡಗಳವರಿಗೂ ಸ್ಥಾನವನ್ನು ಮೀಸಲಾಗಿಡುವ ಸವಲತ್ತನ್ನು ಏನು ಮಾಡಿದ್ದಾರೆ. ಅದು ಮೆಚ್ಚುವಂಥಾದ್ದು ಹಾಗೇ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟಿಯನ್ನು ಒದಗಿಸುವಂಥಾದ್ದು ಇದೆಲ್ಲಾ ಉತ್ತಮ. ಟ್ರೇಡರ್ಸ್ ಮತ್ತು ಕಮೀಷನ್ ಏಜೆಂಟ್‌ಗಳ ಸೆಕ್ಯುರಿಟಿ ಅಮೌಂಟ್‌ನ್ನು ಹೆಚ್ಚಿಗೆ ಮಾಡಿದ್ದಾರೆ. ಅದರ ಜೊತೆಗೆ ಟ್ರೇಡರ್ಸ್ ಮತ್ತು ಕಮೀಷನ್ ಏಜೆಂಟ್ಸ್ ಸಮರ್ಪಕವಾಗಿ ಕೆಲಸ ಮಾಡ್ತಿದಾರೆಯೇ ಎಂದು ನೋಡುವ ಕೆಲಸ ಕೂಡ ಆಗಬೇಕಾಗಿದೆ. ಮಂಗಳೂರು ಮಾರ್ಕೆಟ್ ಕಮಿಟಿ ಉದಾಹರಣೆ ಹೇಳಿದರೆ ಅನೇಕ ಕಡೆ ಅಡಿಕೆ ವ್ಯಾಪ್ಯಾರದಲ್ಲಿ ಹೈಯಸ್ಟ್ ರೇಟಿಗೆ ಒಂದು ಕಡೆ ಸೇರಿಸಲಾಗುತ್ತದೆ. ಒಂದು ತಿಂಗಳ ಕಾಲ ಅದನ್ನು ತೆಗೆದುಕೊಂಡು ಹೋಗುವುದಿಲ್ಲ. ಅನಂತರ ಅದನ್ನು ಪರ್ಚೇಸ್ ಮಾಡಿರುವವರು ಅದನ್ನು ಬಿಟ್ಟು ನಾಟ್‌ಸೇಲ್ ಎಂದು ಮಾಡಿ ಅತ್ಯಂತ ಕಡಿಮೆ ಬೆಲೆಗೆ ರಿಆಕ್ಷನ್ ಆದ ಅನೇಕ ಉದಾಹರಣೆಗಳಿವೆ. ಇದನ್ನು ಸಂಬಂಧಪಟ್ಟ ಮಾರ್ಕೆಟ್ ಕಮಿಟಿ ಗಮನಕ್ಕೆ ತಂದರೂ ಕೂಡ ಸರಿಯಾದ ಕ್ರಮ ತೆಗೆದುಕೊಂಡಿಲ್ಲ, ಹೀಗಾಗಬಾರದು. ಇದರಿಂದ ರೈತರಿಗೆ ನಷ್ಟವಾಗುತ್ತದೆ.. ಟ್ರೇಡರ್ಸ್ ಕಮೀಷನ್ ಏಜೆಂಟ್ ಸೇರಿ ಮಾಡುವ ಈ ವ್ಯವಹಾರದಿಂದ ರೈತನಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಅತಿ ಅಗತ್ಯ. ಹಾಗೆಯೇ ಮಾರ್ಕೆಟ್ ಫಂಡ್‌ನಿಂದ ನಮಗೆ ಬೇಕಾದ ರಸ್ತೆ ಸೇತುವೆಗಳನ್ನು ಮಾಡುವ ಅಗತ್ಯ ಇದೆ ಅದರ ಕಡೆ ಸಚಿವರು ಗಮನ ಹರಿಸಬೇಕು ಮತ್ತು ಸಂಶೋಧನೆಗೆ ಹೆಚ್ಚಿನ ಒತ್ತುಕೊಡುವ ಅಗತ್ಯ ಇದೆ. ಅಡಿಕೆ ತೆಂಗು ಭತ್ತ

ಯಾವುದೇ ಇರಲಿ, ಅದರಲ್ಲಿ ಪ್ರೋಸೆಸಿಂಗ್ ವಿಧಾನ ಅಥವಾ ಅಡಿಕೆಯನ್ನು ತಿನ್ನಲಿಕ್ಕೆ ಬದಲು ಅಡಿಕೆಯನ್ನು ಬೇರೆ ಯಾವುದಕ್ಕೂ ಬಳಸಲು ಸಾಧ್ಯವಾಗುವುದೇ ಎಂಬ ಸಂಶೋಧನೆ ತೆಂಗಿನಕಾಯಿ ಎಲ್ಲಾ ಭಾಗಗಳಿಗೂ ಉಪಯುಕ್ತವಾಗುವ ವಿಚಾರ, ಅದರ ಕುರಿತು ಸಮರ್ಪಕ ಸಂಶೋಧನೆ. ಸಂಶೋಧನೆಯ ದೊಡ್ಡ ವಿಭಾಗವೇ ಮಾರ್ಕೆಟಿಂಗ್ ವಿಭಾಗದಲ್ಲಿ ತೆರೆಯಲ್ಪಡಬೇಕು. ಅಲ್ಲದೆ ಮಲ್ಲಾರಿಗೌಡ ಪಾಟೀಲರು ಹೇಳಿದಂಥ ಅಗ್ರಿಕಲ್ಚರ್ ಮಾರ್ಕೆಟಿಂಗ್ ಬ್ಯಾಂಕ್ ಯಾವುದಿದೆ ಅದು ಅಮೂಲ್ಯವಾದ ಸಲಹೆ ಅದು. ಮಾರ್ಕೆಟ್ ಕಮಿಟಿ ಹಣವನ್ನು ಒಂದು ಕಡೆ ಸೇರಿಸಿ ರೈತರಿಗೆ ಉಪಯುಕ್ತವಾದ ಸಂಶೋಧನೆಗೆ ಸಾಲ ಕೊಡುವುದಕ್ಕೆ ಕೊಡುವ ಕೆಲಸ ಆಗಬೇಕು. ಒಂದು ನಿದರ್ಶನ ಕೊಡಬೇಕಾದರೆ ಹಿಂದಿನ ಸರ್ಕಾರದಲ್ಲಿ ದಕ್ಷಿಣ ಕನ್ನಡ ಮಾರ್ಕೆಟಿಂಗ್ ಕಮಿಟಿಯಲ್ಲಿ ಕೋಟ್ಯಾಂತರ ಹಣ ಇತ್ತು ಅವರದ್ದೇ ಆದ ಹಣ, ಆಮೇಲೆ ವಿಶ್ವಬ್ಯಾಂಕಿನಿಂದ ಮಾರ್ಕೆಟ್ ಯಾರ್ಡ್ ಕಟ್ಟಲಿಕ್ಕಾಗಿ ಪಡೆದ ಹಣ, ಮಾರ್ಕೆಟ್ ಯಾರ್ಡ್‌ನ ಜಾಗ ಅಕ್ವಿಜಿಷನ್ ಆಗದೆ ಹಾಗೆಯೇ ಇತ್ತು ಆದರೆ ಅದ್ದರಿಂದ ಮಾರ್ಕೆಟ್ ಕಮಿಟಿ ಹಣವನ್ನು ಎರಡು ವರ್ಷ ಎಫ್‌ಡಿಯಾಗಿ ಇಟ್ಟಿದ್ದರ ಮೇಲೆ ಅಂದಿನ ಸರ್ಕಾರ ತನ್ನ ಹಣಕಾಸಿನ ಸ್ಥಿತಿಯಿಂದ ಲೋನ್ ತೆಗೆದುಕೊಂಡಿತು. ಇದರಿಂದ ಮಾರ್ಕೆಟ್ ಕಮಿಟಿ ಒಂದು ಪರ್ಸೆಂಟ್ ಎರಡು ಪರ್ಸೆಂಟ್ ನಷ್ಟಕ್ಕೀಡಾಗ ಬೇಕಾಯಿತು. ಅವತ್ತು ನಾನು ಅಸೆಂಬ್ಲಿಯಲ್ಲಿ ಪ್ರಶ್ನೆ ಎತ್ತಿದಾಗ ಅದಕ್ಕೆ ಹಾರಿಕೆ ಉತ್ತರ ಬಂತು. ಈ ರೀತಿಯಾಗಬಾರದು. ಸರ್ಕಾರದ ಪರಿಸ್ಥಿತಿಗಾಗಿ ಮಾರ್ಕೆಟ್ ಕಮಿಟಿಯನ್ನು ಈಡು ಮಾಡಬಾರದು. ಆದ್ದರಿಂದ ಮಾರ್ಕೆಟಿಂಗ್ ಬ್ಯಾಂಕ್ ಎಂದು ಮಾಡುವುದು ಅತಿ ಸ್ತುತ್ಯಾರ್ಹ ಸಲಹೆ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ): ಸಭಾಧ್ಯಕ್ಷಿಣಿಯವರೇ, ಮಾನ್ಯ ಸಹಕಾರ ಸಚಿವರು ಏನು ತಿದ್ದುಪಡಿ ವಿಧೇಯಕ ತಂದಿದ್ದಾರೆ ಅದರ ಬಹುತೇಕ ಅಂಶಗಳು ಈಗಾಗಲೇ ಅಜ್ಜೀಬಾಳ್ ಹೆಗಡೆ ವರದಿಯಾಧಾರಿತ ಎಂದು ನಾನು ಭಾವಿಸುತ್ತೇನೆ. ಅದರಲ್ಲಿ ಇನ್ನೂ ಕೆಲವು ಶಿಫಾರಸ್ಸುಗಳನ್ನು ತರಬಹುದಿತ್ತು ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಸಚಿವರು ಹೇಳಿದ ಹಾಗೆ ಅಜ್ಜೀಬಾಳ್ ಹೆಗಡೆಯವರ ವರದಿ ಮೇಲೆ ತಂದಿದ್ದೇವೆಂದು ಹೇಳಿದರೂ ಸಹ ಆ ವರದಿ ಏಕಾಗಬೇಕು ಎಂದು ಸರ್ಕಾರ ಕೇಳಿತು ಎಂಬ ಬಗ್ಗೆ ವಿಚಾರ ಮಾಡಿದರೆ ಒಳ್ಳೆಯದು. ಮೊದಲನೆಯದಾಗಿ ನಾವೆಲ್ಲಾ ಹೇಳುತ್ತೇವೆ, ಮಂಜುನಾಥ್‌ರಿಂದ ಹಿಡಿದು ರಾಯರೆಡ್ಡಿವರೆಗೂ ಒಂದು ಕಡೆ ಕಮಿಷನ್ ಏಜೆಂಟ್ ಪ್ರತಿನಿಧಿಸಿದರೆ ಮತ್ತೊಬ್ಬರು ಇನ್ನೊಬ್ಬರನ್ನು ಪ್ರತಿನಿಧಿಸಬಹುದು. ಆದರೆ ಮುಖ್ಯವಾಗಿ ರೈತರನ್ನು, ಅವನ ಹಿತವನ್ನು ಕಾಪಾಡುವ ವ್ಯವಸ್ಥೆಗೆ ಪೂರಕವಾದ ತಿದ್ದುಪಡಿಯನ್ನು ನಾವು ತರಬೇಕು. ನಾವು ಹೇಳುತ್ತೇವೆ, ಕೇವಲ ರೈತನ ಮಾಲನ್ನು ಬೆಳೆದ ಮೇಲೆ ಅವನು ಮಾರುಕಟ್ಟೆಗೆ ತರುವವರೆಗೂ ಅವನ ಹಿತವನ್ನು ಕಾಪಾಡಬೇಕು, ಮಾರುಕಟ್ಟೆಗೆ ಬಂದಮೇಲೆ ಅವನ ಶೋಷಣೆಯನ್ನು ತಪ್ಪಿಸಬೇಕು ಎನ್ನುವ ಮಾತನ್ನು ಮೊದಲಿನಿಂದಲೂ ಎಲ್ಲರೂ ಹೇಳುತ್ತೇವೆ. ಆದರೆ ನಿಜವಾಗಿ ಆಗುವುದು ಏನು? ಇವತ್ತಿನ ದಿವಸ ಅವನು ಮಾರುಕಟ್ಟೆಗೆ ತರುವಷ್ಟರಲ್ಲಿ ಅವನು ಶೋಷಣೆಯಾಗುತ್ತಾನೆ. ಅನೇಕ ಸಂದರ್ಭಗಳಲ್ಲಿ ಅವನು ಮಾರುಕಟ್ಟೆಗೆ ಮಾಲನ್ನು ತರದೇ ಇರುವಂಥ ಸಂದರ್ಭಗಳು ಜಾಸ್ತಿಯಾಗಿವೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 2,500 ಕೋಟಿ ರೂಪಾಯಿಗಿಂತಲೂ ಹೆಚ್ಚು ಈ ನೋಟಿಫೈಡ್ ಕಮಾಡಿಟೀಸ್ ಎಂದು ಏನು ಹೇಳುತ್ತೇವೆಯೋ, ಆ ಬೆಳೆಗಳಿಗೆ ಸಂಬಂಧಪಟ್ಟ ಉತ್ಪಾದನೆ ಇನ್ನೂ ಜಾಸ್ತಿ ಇದೆ. ಇವತ್ತಿನ ಬೆಲೆಯಲ್ಲಿ ಇನ್ನೂ ಜಾಸ್ತಿ ಇದೆ. ಇದು ಹಿಂದಿನ ಅಂದಾಜು. ನಾನು ಇವತ್ತು ಕೇಳುವುದಕ್ಕೆ ಇಷ್ಟಪಡುತ್ತೇನೆ, ಎಷ್ಟು ಪ್ರಮಾಣದಲ್ಲಿ ನೋಟೀಫೈಡ್ ಕಮಾಡಿಟಿ ಎಂದು ಏನು ನಾವು ಹೇಳುತ್ತೇವೆ. ಅದು ರಾಜ್ಯದ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತಿದೆ? ಅದನ್ನು ತಾವು ಪರಿಶೀಲಿಸಿದರೆ

ಸಾಕು. ನೀವು ನಾವು ಎಣಿಸಿದಂತೆ ಈ ರೈತನು ಮಾಲನ್ನು ಮಾರುಕಟ್ಟೆಯಲ್ಲಿ ಪೂರ್ತಿಯಾಗಿ ತಂದು ಮಾರುತ್ತಿಲ್ಲ. ಅದನ್ನು ಹೊರಗಡೆಯೇ ಮಾರುತ್ತಿದ್ದಾರೆ. ಇದನ್ನು ತಪ್ಪಿಸುವಂಥ ಒಂದು ವ್ಯವಸ್ಥೆಯಾಗಬೇಕು. ಅನೇಕ ಸಂದರ್ಭಗಳಲ್ಲಿ ಯಾವುದನ್ನು ತಾವು ನೋಟಿಫೈಡ್ ಕಮಾಡಿಟಿ ಎಂದು ಹೇಳುತ್ತೀರಿ. ಆ ಕಮಾಡಿಟಿಯಲ್ಲಿ ಬಹಳ ಭಾಗ ಇವತ್ತಿನ ದಿವಸ ಮಾರುಕಟ್ಟೆ ಒಳಗೇ ಬರುತ್ತಿಲ್ಲ. ಮಾರುಕಟ್ಟೆಯ ಹೊರಗಡೆ ಖರೀದಿದಾರ ತನಗೆ ಇಷ್ಟಬಂದಂಥ ರೀತಿಯಲ್ಲಿ ದಳ್ಳಾಳಿಗಳ ನೆರವಿನಿಂದ ಮಾಲನ್ನು ಪಡೆಯುತ್ತಾನೆ. ಇದರಿಂದ ರೈತನ ಶೋಷಣೆಯಾಗುತ್ತಿದೆ. ಏತಕ್ಕೋಸ್ಕರ ಈ ರೀತಿಯಾಗುತ್ತಿದೆ.

ಶ್ರೀ ಟಿ.ಎಂ. ಮಂಜುನಾಥ್: ದಳ್ಳಾಳಿಗಳು ಅಲ್ಲ. ಅನ್-ಅಥರೈಸ್ಡ್ ಟ್ರೇಡರ್ಸ್ ಅವರು. ಅವರು ಹಳ್ಳಿಗಳಲ್ಲಿ ಹುಟ್ಟಿಕೊಂಡುಬಿಟ್ಟಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಮಂಜುನಾಥ್‌ರವರು ಹೇಳಿದಂತೆ ಅವರೂ ದಳ್ಳಾಳಿಗಳೇ. ನೀವು ದಳ್ಳಾಳಿಗಳನ್ನು ಎರಡು ಭಾಗ ಎಂದು ಮಾಡಿದ್ದೀರಿ. ಆಥರೈಸ್ಡ್ ದಳ್ಳಾಳಿಗಳು ಅನ್-ಆಥರೈಸ್ಡ್ ದಳ್ಳಾಳಿಗಳು ಎಂದು, ಇಬ್ಬರ ಕೆಲಸವು ಅದೇ, ನಾನು ಯಾವ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಎಂದರೆ ರೈತ ಈ ದೇಶದಲ್ಲಿ ಏನು ಬೆಳೆಯನ್ನು ಬೆಳೆದಿದ್ದಾನೆ ಆ ಬೆಳೆದಂಥ ಬೆಳೆಯ ಬಹುಭಾಗ ಪೂರ್ಣವಾಗಿ ಅಲ್ಲದಿದ್ದರೂ ಸಹಾ ಬಹುಭಾಗವನ್ನು ಇವತ್ತಿನ ದಿವಸ ರೆಗ್ಯುಲೇಟೆಡ್ ಮಾರುಕಟ್ಟೆ ಕಮಿಟಿಯ ಮುಖಾಂತರ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣವೇನು? ಅದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಅವನು ಬೆಳೆದಂಥ ಕಾಲದಲ್ಲಿ ಸಾಲ ಮಾಡಿರುತ್ತಾನೆ. ಅಲ್ಲಿ ರೈತನಿಗೆ ನಮ್ಮ ಮಂಜುನಾಥ್‌ರವರ ತರಹದವರ ನಾಮಕಾರರ ಕಾಟ ಜಾಸ್ತಿ ಇರುತ್ತದೆ. ಕೊಬ್ಬರಿಯನ್ನು ನಮ್ಮ ಅಂಗಡಿಗೆ ಕೊಡುತ್ತೀರಾ ಎಂದು ಕೇಳಿದರೆ ಅವರು ಕೊಡಲೇ ಬೇಕಾಗುತ್ತದೆ. ಇರಲಿ ನಾನು ಹೆಸರು ಹೇಳಿದೆ ಅಷ್ಟೆ. ನಿಮ್ಮಂಥವರು ಎಂದು ಹೇಳಿದೆ, ನೀವು ಎಂದು ಹೇಳಲಿಲ್ಲ.

ಶ್ರೀ ಟಿ.ಎಂ. ಮಂಜುನಾಥ್: ನಮಗೆ ಅವಮರ್ಯಾದೆ ಮಾಡಬೇಕು ಎಂದು ಹೇಳಿದರೆ ಅದು ರೆಕಾರ್ಡ್‌ಗೆ ಹೋಗಲಿ. ಅದರ ಬಗ್ಗೆ ಯೋಚನೆ ಮಾಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್: ದಳ್ಳಾಳಿಗಳ ಪರವಾಗಿ ಮಾತನಾಡಬೇಕು ಎಂದು ಹೇಳಿದರು ಅಷ್ಟೆ.

ಶ್ರೀ ಹೆಚ್. ಏಕಾಂತಯ್ಯ: ಉದ್ದೇಶವಿಷ್ಟೆ. ಅಧಿಕೃತ ಖರೀದಿಗಳ ನೆರವಿನಿಂದ ಅವರು ಮಾಲನ್ನು ಮಾರುಕಟ್ಟೆಗೆ ಬರುವುದರ ಒಳಗೆ ಅದನ್ನು ಬರದಂತೆ ಮಾಡಿ ಅಥವಾ ವಿಶೇಷ ಕಾರಣಗಳಿಂದಾಗಿ ಅವನು ಅಲ್ಲಿಯೇ ಕೊಡುತ್ತಾನೆ. ಪಾವಗಡ ಮತ್ತು ಹಿರಿಯೂರಿನಲ್ಲಿ ಕಡಲೆಕಾಯಿ ಹೋಗುತ್ತಿದೆ. ನಾನು ತಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಚಿತ್ರದುರ್ಗ, ಚಳ್ಳಕೆರೆ ಮತ್ತು ಹಿರಿಯೂರಿನಲ್ಲಿ - ಏನು ಇವತ್ತಿನ ದಿವಸ ನೆಲಗಡಲೆಯನ್ನು ಬೆಳೆಯುತ್ತೇವೆ ಎಂದು ನಿಮ್ಮ ವ್ಯವಸಾಯ ಇಲಾಖೆಯವರು ಹೇಳುತ್ತಾರೋ ಅಥವಾ ಅದಕ್ಕೆ ಒಂದು ಅಂದಾಜು ಇರುತ್ತದೆ. ಆ ಅಂದಾಜಿನಲ್ಲಿ ಎಷ್ಟು ಭಾಗ ಚಿತ್ರದುರ್ಗ ಮತ್ತು ಚಳ್ಳಕೆರೆ, ಉಳಿದೆಲ್ಲಾ ಬೇಡ, ಆಮೇಲೆ ಬರೋಣ. ಆ ಪರಿಸ್ಥಿತಿ ಬೇರೆ ಕಡೆಗೆ ಬೇರೆ ರೀತಿ ಇರುತ್ತದೆ. ನೆಲಗಡಲೆ ಅಥವಾ ಶೇಂಗಾ ಎಂದು ನಾವು ಏನು ಹೇಳುತ್ತೇವೆ ಅದು ಎಷ್ಟು ಬರುತ್ತದೆ ಮಾರುಕಟ್ಟೆಗೆ?

ಒಬ್ಬ ಮಾನ್ಯ ಸದ್ಯರು : ಒನ್ ಟನ್.

ಶ್ರೀ ಹೆಚ್. ಏಕಾಂತಯ್ಯ : ಅಷ್ಟೊ ಇಲ್ಲ ಅದನ್ನು ನಾನು ಉತ್ಪ್ರೇಕ್ಷೆ ಮಾಡುತ್ತಿಲ್ಲ, ಇದು ವಸ್ತುಸ್ಥಿತಿ. ನಮ್ಮ ಸರ್ಕಾರ ಇದ್ದಾಗಲೂ ಇತ್ತು. ನಿಮ್ಮ ಸರ್ಕಾರ

ಇದ್ದಾಗಲೂ ಇದೆ. ಮುಂದೆ ಸಹಾ ಇದು ಉಳಿದರೆ ಏನೂ ಆಶ್ಚರ್ಯವಿಲ್ಲ. ಎಲ್ಲೆಲ್ಲಿ ನೀವು ಬಿಗಿಯಾದಂಥ ಕ್ರಮವನ್ನು, ದೃಢವಾದಂಥ, ಕಠಿಣವಾದಂಥ ಕ್ರಮಗಳನ್ನು ಸಂಬಂಧಪಟ್ಟವರ ಮೇಲೆ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಸಹಾ ಇಂಥ ಒಂದು ಶೋಷಣೆ ಮುಂದುವರೆಯುತ್ತದೆ.

ಯಾವುದನ್ನು ತಾವು ನೋಟಿಫೈ ಕಮಾಡಿಟೀಸ್ ಎಂದು ಹೇಳುತ್ತೀರಿ ಅದು ಶೇಂಗಾ ಇರಬಹುದು ತೆಂಗಿನಕಾಯಿ ಇರಬಹುದು ಅಥವಾ ಬೇರೆ ಯಾವುದೇ ಇರಬಹುದು. ನಮ್ಮ ಊರಿನಲ್ಲಿರುವ ಮಾರುಕಟ್ಟೆಯಲ್ಲಿ ತೆಂಗಿನಕಾಯಿಯನ್ನು ನೋಟಿಫೈಡ್ ಕಮಾಡಿಟೀಸ್ ಎಂದು ಬರೆದಿದ್ದೀರಿ. ಹಿರಿಯೂರಿನಲ್ಲಿ ಸಾವಿರಾರು ಎಕರೆ ತೆಂಗಿನ ತೋಟ ಇದೆ. ಎಷ್ಟೋ ತೆಂಗಿನಕಾಯಿ ಆ ಮಾರುಕಟ್ಟೆಗೆ ಬರುತ್ತದೆ. ಮಾರುಕಟ್ಟೆಯ ಹೊರಗೆ ಆದರೂ ತಾವು ಎಷ್ಟನ್ನು ಕಲೆಕ್ಟ್ ಮಾಡಿದ್ದೀರಿ, ನಾನು ಹಿರಿಯ ಸಚಿವರಾದಂತಹ ಸಹಕಾರ ಸಚಿವರಿಗೆ ಹೇಳುವುದು ಇಷ್ಟೆ. ಇದೊಂದು ಫಲವತ್ತಾದ ಜಾಗ, ಭ್ರಷ್ಟಾಚಾರದ ರಾಜಕಾರಣಿ ಮತ್ತು ಅಧಿಕಾರಿ ಸೇರಿ ಏನು ಬೇಕಾದರೂ ಮಾಡಬಹುದು ಎಂದರೆ ಇದಕ್ಕಿಂತ ಉತ್ತಮವಾದಂತಹ ಅವಕಾಶ ಇರುವಂತಹ ಜಾಗ ಬೇರೆ ಯಾವುದೂ ಇಲ್ಲ. ಒಂದು ವರ್ಷಕ್ಕೆ ಉದಾರಹಣೆಗೆ ಹೇಳುತ್ತೇನೆ ಚಿತ್ರದುರ್ಗ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಬರುತ್ತದೆ. ನಿಮ್ಮ ಇಲಾಖೆಗೂ ಬರೆದಿದ್ದಾರೆ ಅದರ ಕಾಪಿಯನ್ನು ನನಗೆ ಒಂದನ್ನು ಕೊಟ್ಟಿದ್ದಾರೆ. ಸಮಯ ಬರಲಿ ಎಂದು ಹಾಗೆ ಇಟ್ಟಿದ್ದೆ. ಇವತ್ತು ಸಮಯ ಬಂದಿದೆ. ಯಾರ ಅಂಗಡಿಗಾದರೂ ಹೋಗಿ ತಿಮ್ಮಪ್ಪ ಒಂದು ಚೀಲ, ಒಂದು ಚೀಲದ ಮೇಲೆ ಸೂರ್ಯಕಾಂತಿ ಅವನ ಅಂಗಡಿಗೆ ಬರುವುದೇ ಇಲ್ಲ. 50 ಮಾಲುದಾರರ ಹೆಸರು ಬಂದರೆ, ರಂಗಪ್ಪ ಒಂದು ಚೀಲ, ಸಿದ್ದಪ್ಪ ಒಂದು ಚೀಲ ಯಾರ ಹೆಸರನ್ನು ನೋಡಿದರೂ ಒಂದೇ ಚೀಲ. ಖರೀದಿದಾರರು ಇಂತಹ ಟ್ರೇಡರ್ಸ್ ಅಂಗಡಿಗೆ ಹೋದರೇ ಅವರು ಎಲ್ಲರ ಹೆಸರನ್ನು ಬರೆದುಕೊಂಡು ಅವರ ಮುಂದೆ ಒಂದು ಚೀಲ ಬರೆದುಕೊಳ್ಳುತ್ತಾರೆ. ಗ್ರಹಚಾರಕ್ಕೆ ನೀವು ಕರ್ನಾಟಕ ಆಯಿಲ್ ಫೆಡರೇಷನ್ ಇಟ್ಟಿದ್ದೀರಿ, ಅವರು ಬಂದಾಗ ಅವರಿಗೆ ಕಷ್ಟವಾಗುತ್ತದೆ. ಕರ್ನಾಟಕ ಆಯಿಲ್ ಫೆಡರೇಷನ್‌ನವರು ಅಲ್ಲಿ ಇದ್ದಿದ್ದನ್ನು ಬರೆಯಲು ಪ್ರಯತ್ನ ಮಾಡುತ್ತಾರೆ. ರಂಗಪ್ಪ 28 ಚೀಲ ಅಂತ ಬರೆಯುತ್ತಾನೆ. ಅಥವಾ ಸಿದ್ದಪ್ಪ 36 ಚೀಲ ಎಂದು ಬರೆಯುತ್ತಾನೆ. ಕರ್ನಾಟಕ ಆಯಿಲ್ ಫೆಡರೇಷನ್‌ರವರು ಟೆಂಡರ್ ಹಾಕುವಾಗ ಜಾಸ್ತಿ ಬರೆಯುತ್ತಾನೆ. ಆ ಮಾಲುದಾರರ ಹೆಸರನ್ನು ಒಂದು ಇದ್ದಿದ್ದನ್ನು, 28 ಅಂತ ತಿದ್ದಿದ್ದಾರೆ. ಬೇರೆ ಖರೀದಿದಾರ ಅದೇ ಮಾಲಿಗೆ ಒಂದು ಚೀಲ ಅಂತ ಬರೆದುಕೊಂಡಿದ್ದು ಅವನು ಟೆಂಡರ್ ಹಾಕುತ್ತಾನೆ.

ಕರ್ನಾಟಕ ಆಯಿಲ್ ಫೆಡೆರೇಷನ್‌ವರು ಟೆಂಡರ್ ಹಾಕುತ್ತಾರೆ. ಅವರು ಹಾಕಿದಾಗ ಎಷ್ಟು ಇರುತ್ತದೆ ಅಷ್ಟನ್ನು ಬರೆದುಕೊಳ್ಳುತ್ತಾರೆ. ಆಮೇಲೆ ಇವನು 28 ಚೀಲ ಅಂತ ತಿದ್ದಿಕೊಳ್ಳುತ್ತಾನೆ. ಕರ್ನಾಟಕ ಆಯಿಲ್ ಫೆಡೆರೇಷನ್ ಅಥವಾ ತಮಿಳುನಾಡಿನಿಂದ ಬಂದಂಥಹ ಪಬ್ಲಿಕ್ ಅಂಡರ್ ಟೇಕಿಂಗ್ಸ್, ಇದು ವ್ಯವಸ್ಥಿತವಾಗಿ ನಡೆಯುತ್ತಿದೆ. ನಾನು ಯಾರ ಬಗ್ಗೆಯೂ ದೂರೂ ಮಾಡುತ್ತಿಲ್ಲ, ಏಕೆಂದರೆ ಇದರಲ್ಲಿ ಎಲ್ಲರೂ ಶಾಮೀಲಾಗಿದ್ದಾರೆ. ಯಾರಮೇಲೆ ದೂರು ಮಾಡಬೇಕು ಹೇಳಿ, ನಿಮ್ಮಲ್ಲಿರುವಂತಹ ಸೆಕ್ರೆಟರಿಯವರು, ನಿಮ್ಮಲ್ಲಿರುವಂತಹ ಹಿರಿಯ ಅಧಿಕಾರಿಗಳಾಗಲಿ, ಪ್ರತಿಯೊಬ್ಬರು ಇದರಲ್ಲಿ ಶಾಮೀಲಾಗಿದ್ದಾರೆ ದೂರು ಯಾರ ಮೇಲೆ ಮಾಡಬೇಕು? ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇವೆ ಅಂದರೆ ಈಗಾಗಲೇ ಸಂಬಂಧಪಟ್ಟವರ ಗಮನಕ್ಕೆ ಇದು ಬಂದಿದೆ, ಅಥವಾ ಬಂದಿಲ್ಲವೆಂದರೆ ಅಲ್ಲಿ ಮೇಲೆ ಕುಳಿತು ಏನು ಮಾಡುತ್ತಿದ್ದಾರೆ. ನಮ್ಮ ಚಿತ್ರದುರ್ಗ ಮಾರುಕಟ್ಟೆ ಒಂದರಲ್ಲೇ ಸೂರ್ಯಕಾಂತಿ. ಒಂದರಲ್ಲೆ ಕಳೆದ ವರ್ಷ 40 ಲಕ್ಷ ರೂಪಾಯಿ ಟ್ಯಾಕ್ಸ್ ಸೋರಿಹೋಗುವುದಾದರೆ ಆ ಟ್ಯಾಕ್ಸ್‌ನಿಂದ

5-6.8ರಷ್ಟು ರಾಜ್ಯ ಸರ್ಕಾರದ ಆದಾಯಕ್ಕೆ ಇವತ್ತಿನ ದಿವಸ ಧಕ್ಕೆ ಬರುತ್ತದೆ. ಅದರ ಮೇಲೆ ಸೇಲ್ಸ್ ಟ್ಯಾಕ್ಸ್ ಬರುತ್ತಿದೆ. ಟರ್ನ್‌ಓವರ್ ಟ್ಯಾಕ್ಸ್ ಬರುತ್ತಿದೆ. ಬೇರೆ ಬೇರೆ ಟ್ಯಾಕ್ಸ್‌ಗಳು ಏನಿದೆ ಅದರೆಲ್ಲಿ ಒಂದಕ್ಕೆ 8ರಷ್ಟು ಸರ್ಕಾರಕ್ಕೆ ನಷ್ಟವಾಗುತ್ತದೆ ಕೇಕ್ ಮೇಲೆ ಟ್ಯಾಕ್ಸ್ ಇದೆ, ಆಯಿಲ್ ಮೇಲೆ ಟ್ಯಾಕ್ಸ್ ಇದೆ. ಇವೆಲ್ಲವನ್ನು ಲೆಕ್ಕಹಾಕಿದರೆ ಗೊತ್ತಾಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಒಂದು ನಿರ್ಧಿಷ್ಟವಾದಂತಹ ಉದಾಹರಣೆಯನ್ನು ಕೊಟ್ಟು ಈ ಮಾತನ್ನು ಹೇಳುತ್ತಿದ್ದೇನೆ. ಸುಮಾರು 40-50 ಲಕ್ಷ ಒಂದು ಮಾರುಕಟ್ಟೆಯಿಂದ ಸೇಲ್ಸ್‌ಟ್ಯಾಕ್ಸ್ ನಿಮಗೆ ನಷ್ಟವಾಗು ವುದಾದರೆ ಅದರ ಮೇಲೆ ಇಂಟರೆಸ್ಟ್ ಸೇರಿಸಿದರೆ ಎಷ್ಟು ಕೋಟಿ ರೂಪಾಯಿ ಆಯಿತು. ಒಂದು ಮಾರುಕಟ್ಟೆಯಿಂದ ಸರ್ಕಾರದ ಬೊಕ್ಕಸಕ್ಕೆ ಇಷ್ಟು ನಷ್ಟವಾಗುವುದಾದರೆ ಇದರ ಶೋಷಣೆ ಯಾರಿಗೆ ಸ್ವಾಮಿ? ಈ ಕಡೆ ರೈತನಿಗೆ ಸರಿಯಾದಂತಹ ಬೆಲೆ ಕೊಡುವುದಿಲ್ಲ, ಮತ್ತೊಂದು ಕಡೆ ಬಂಡವಾಳದಾರರು ಏನಿದ್ದಾರೆ ಶೋಷಣೆ ಮಾಡುವಂತಹ ಜನ ಯಾರಿದ್ದಾರೆ, ಅವರ ಜೊತೆ ಶಾಮೀಲಾಗಿ ನಿಮ್ಮ ಭ್ರಷ್ಟ ಅಧಿಕಾರಿಗಳು ಇವತ್ತಿನ ದಿವಸ ಈ ಪರಿಸ್ಥಿತಿಯನ್ನು ಸ್ವಷ್ಟನೆ ಮಾಡಿದ್ದಾರೆ. ಇದನ್ನು ನಿವಾರಿಸಬೇಕೆ ಬೇಡವೆ? ಮಾನ್ಯ ಸಹಕಾರ ಮಂತ್ರಿಗಳಾದಮೇಲೆ ಏನಿಲ್ಲ, ಇದು ಮೊದಲಿನಿಂದಲೂ ಇದೆ. ಇವತ್ತು ಇದೆ, ಅದಕ್ಕೆ ನಾನು ಹೇಳುತ್ತಿದ್ದೇನೆ. ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿರಲಿಲ್ಲ. ಏತಕ್ಕೆ ಆಗುತ್ತಿರಲಿಲ್ಲ ಎನ್ನುವುದನ್ನು ಹೇಳುತ್ತೇನೆ. ಲೆಕ್ಕ ಪತ್ರಗಳನ್ನು ತರಿಸಿಕೊಂಡು ನೋಡಿ. ಇವತ್ತು ತಾವು ಆಡಳಿತ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ. ಅಲ್ಲಿರುವಂತಹ ತಹಶೀಲ್ದಾರರು ಅಥವಾ ಅಸಿಸ್ಟೆಂಟ್ ಕಮೀಷನರ್‌ರವರನ್ನು ನೇಮಕ ಮಾಡಿದ್ದೀರಿ, ದೇವರೆ ಕಾಪಾಡಬೇಕು. ಅವರಿಗೆ ಯಾರ ಭಯವೂ ಇಲ್ಲ.

ನಾನು ಹೇಳುತ್ತೇನೆ, ಯಾವುದಾದರೂ ಒಂದು ಇಂತಹ ಮಾರ್ಕೆಟ್ ಸಮಿತಿಯಲ್ಲಿ ಯಾವರೀತಿ ಲೆಕ್ಕಪತ್ರ ಇಟ್ಟಿದ್ದಾರೆಂದು ತಾವು ನೋಡಿದ್ದೀರಾ? ನಿಮ್ಮ ಸಂಬಂಧಪಟ್ಟ ಅಧಿಕಾರಿಗಳು ನೋಡಿದ್ದೀರಾ? ನಿಮ್ಮ ಜಿಲ್ಲೆಯಲ್ಲಿ, ತಾಲ್ಲೂಕು ಮಟ್ಟದಲ್ಲಿರುವಂಥ ಅಧಿಕಾರಿಗಳು ನೇರವಾಗಿ ಶಾಮೀಲಾಗಿದ್ದಾರೆ. ನಾನು ಈ ಒಂದು ಅಲಿಗೇಷನ್ ಪ್ರೂವ್ ಮಾಡುತ್ತೇನೆ. ಅವರ ಹತ್ತಿರ ಪುಸ್ತಕ, ರಿಜಿಸ್ಟರ್‌ಗಳು ಎಲ್ಲಾ ಇರುತ್ತವೆ, ಆದರೆ ಅವರು ಬರೆದುಕೊಳ್ಳಬೇಕಲ್ಲವೆ? ಮಲ್ಲಾರಿಗೌಡರು ಎಷ್ಟು ಮಾಲು ತಂದರೂ ಎನ್ನುವುದನ್ನು ಬರೆದುಕೊಳ್ಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ತಾವು ಹೇಳುವುದನ್ನೆಲ್ಲಾ ನಾನು ಒಪ್ಪುತ್ತೇನೆ. ತಾವೂ ಕೂಡ ಆ ಸ್ಥಾನದಲ್ಲಿದ್ದಾಗ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಎಂಬ ಬಗ್ಗೆ ನಾನು ಕೇಳುತ್ತಿದ್ದೇನೆ. ಅದರ ಬಗ್ಗೆ ನಿಮ್ಮ ಅನುಭವವೇನಾದರೂ ಇದ್ದರೆ ತಾವು ಹೇಳುವುದು ಒಳ್ಳೆಯದು. ಅದೇನಾದರೂ ಕಾರ್ಯಕ್ರಮಗಳನ್ನು ನೀವು ತೆಗೆದುಕೊಂಡ ಹಾಗೆ ಇವರು ತೆಗೆದುಕೊಳ್ಳುವುದಕ್ಕೆ ಹೋದರೆ ನಮ್ಮ ಪರಿಸ್ಥಿತಿ ಅಲ್ಲಿಗೆ ಬರಬೇಕಾಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಏಕಾಂತಯ್ಯನವರು ಮಂತ್ರಿಗಳಾಗಿದ್ದಾಗ ಏನು ಕ್ರಮವನ್ನು ತೆಗೆದುಕೊಂಡರು ಎನ್ನತಕ್ಕಂತಹದ್ದು ದೃಷ್ಟಿಯಲ್ಲಿ, ಅವರೂ ಸಹ ಮಾಡಿದ್ದಾರೆ. ಆದರೆ ಒಂದು ಸಂತೋಷದ ಸಂಗತಿ ಏನೆಂದರೆ ಸನ್ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಅಂದರೆ ನಮ್ಮ ಸರ್ಕಾರ ಬಂದ ಮೇಲೆ ನಾವೆಲ್ಲರೂ ಅದರ ಬಗ್ಗೆ ಮಾಹಿತಿಗಳನ್ನು ಕೊಟ್ಟಮೇಲೆ ಸಾಕಷ್ಟು ಮಟ್ಟಿಗೆ ತೆರಿಗೆಯನ್ನು ವಸೂಲಿ ಮಾಡಿದ್ದಾರೆ, ಟರ್ನ್‌ಓವರ್ ಹಚ್ಚಾಗಿದೆ, ಸೇಲ್ಸ್ ಟ್ಯಾಕ್ಸ್ ಹೆಚ್ಚಾಗಿದೆ, ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ಸರ್ಕಾರ ಬಂದ ಮೇಲೆ ಏನು ಆಗಿದೆ ಎಂಬ ಬಗ್ಗೆ ತಾವು ಅಂಕಿಅಂಶಗಳನ್ನು ನೋಡಿದರೆ

ಗೊತ್ತಾಗುತ್ತದೆ. ಉದಾಹರಣೆಗೆ ನಮ್ಮ ತಿಪಟೂರಿನಲ್ಲಿರತಕ್ಕಂತಹ ಕೊಬ್ಬರಿ ಮಾರುಕಟ್ಟೆಯಲ್ಲಿ ಸುಮಾರು ಮೂರು ತಿಂಗಳಲ್ಲಿ 40 ಲಕ್ಷ ರೂಪಾಯಿ ಟ್ಯಾಕ್ಸ್‌ನ್ನು ಹೆಚ್ಚಿಗೆ ವಸೂಲಿ ಮಾಡಿದರು, ಬಿಗಿಯಾದಂತಹ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ, ನಿಮ್ಮ ಸರ್ಕಾರ ಕೂಡ ಕ್ರಮ ತೆಗೆದುಕೊಂಡಿಲ್ಲ ಎಂದು ಅಲ್ಲಾ, ನೀವು ಯೋಚನೆ ಮಾಡುವುದರೊಳಗೆ ನಿಮ್ಮ ಅಧಿಕಾರ ಹೊರಟುಹೋಯಿತು, ಅದು ಬೇರೆ ಪ್ರಶ್ನೆ ನಾವು ತಮ್ಮನ್ನು ದೋಷಣೆ ಮಾಡುವುದಿಲ್ಲ, ನಮ್ಮ ಸರ್ಕಾರ ಕೂಡ ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಇದು ಒಂದು ಉದಾಹರಣೆಯನ್ನು ಕೊಟ್ಟೆ.

ಶ್ರೀ ಹೆಚ್. ಏಕಾಂತಯ್ಯ : ಈಗ ತಾವು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ ಮಾನ್ಯ ಸದಸ್ಯರಾದ ಮಲ್ಲಾರಿಗೌಡರು ನೀವು ಮಂತ್ರಿಯಾಗಿದ್ದಾಗ ಏನು ಮಾಡಿದಿರಿ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ? ನಾನು ಮಂತ್ರಿಯಾದಾಗ ಏನು ಮಾಡಿದ್ದೇನೆ ಎಂದು ಕಡತವನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಸಂಬಂಧಪಟ್ಟ ಇಲಾಖೆಯ ಕಡತವನ್ನು ತೆಗೆದು ಓದಿ ಅರ್ಥ ಮಾಡಿಕೊಂಡರೆ ಅಷ್ಟೇ ಸಾಕು ಅದೇ ಉತ್ತರ. ನಮ್ಮ ಸರ್ಕಾರ ಏನು ಮಾಡಿತು ಎಂದು ಕೇಳಿದ್ದಕ್ಕೋಸ್ಕರ ಈ ವಿಷಯವನ್ನು ಹೇಳಬೇಕಾಯಿತು. ನಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಏನು ಮಾಡಿತು ಎಂಬ ಬಗ್ಗೆ ಬಹಳ ನಿರ್ದಿಷ್ಟವಾದಂತಹ ಕ್ರಮ ತೆಗೆದುಕೊಂಡಿತು ಎನ್ನುವ ಮಾತನ್ನು ನಾನು ಹೇಳಲಿಲ್ಲ, ಅದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವಾಗಿರಬಹುದು. ಇವತ್ತು ಪ್ರಾಮಾಣಿಕವಾದಂತಹ ಪ್ರಯತ್ನವನ್ನು ನಿಮ್ಮ ಸಹಕಾರಿ ಮಂತ್ರಿಗಳು ಮಾಡಬಹುದು ಆದರೆ ಕೇವಲ ಒಂದು ಪ್ರಯತ್ನದಿಂದ ಅದು ಆಗಲಿಕ್ಕೆ ಸಾಧ್ಯವಿಲ್ಲ, ಏಕೆಂದರೆ ಇಲ್ಲಿರುವವರು ನಮಗಿಂತಲೂ, ನಿಮಗಿಂತಲೂ ಬಹಳ ಬುದ್ಧಿವಂತರು, ಅವರಿಗೆ ಇರುವಂತಹ ಶಿಫಾರಸ್ಸು ಮಲ್ಲಾರಿಗೌಡ ಪಾಟೀಲರಿಗಾಗಲಿ, ಮಂಜುನಾಥ್ ರವರಿಗಾಗಲಿ ನಮಗಾಗಲಿ ಇಲ್ಲ, ಆದುದರಿಂದ ಇವತ್ತಿನ ದಿವಸ ಏನು ಭ್ರಷ್ಟಾಚಾರವಾಗುತ್ತಿದೆ ಅಥವಾ ಶೋಷಣೆಯಾಗುತ್ತಿದೆ ಇನ್ನು ತಾವು ಎರಡು ದೃಷ್ಟಿಯಿಂದ ನೋಡಬೇಕು. ಈವತ್ತು ರೈತ ತನ್ನ ಮಾಲನ್ನು ತರದಿರುವಂತಹ ಒಂದು ಪರಿಸ್ಥಿತಿ ಏನು ನಿರ್ಮಾಣವಾಗಿದೆ ಆ ಒಂದು ಪರಿಸ್ಥಿತಿಯನ್ನು ನಿವಾರಣೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ರೈತನ ಮಾಲು ಮಾರುಕಟ್ಟೆಗೆ ಬಂದ ಮೇಲೆ ಅವನಿಗೆ ಸರಿಯಾದಂತಹ ಬೆಲೆಯನ್ನು ಕೊಡಿಸುವಂತಹ ವ್ಯವಸ್ಥೆಯಾಗಬೇಕು. ಇವತ್ತು ಹಮಾಲರಿಂದ ಹಿಡಿದು ದಲ್ಲಾಳಿಗಳು ಮತ್ತು ಕಮೀಷನ್ ಏಜೆಂಟ್ಸ್ ಏನೂ ಇದ್ದಾರೆ ಇವರಿಂದ ರೈತರ ಶೋಷಣೆಯಾಗುತ್ತಿದೆ. ಅದರ ಬಗ್ಗೆ ನಾವು ಕಂಡುಹಿಡಿಯಬೇಕಾಗಿದೆ ಈವತ್ತು ನೆಲಗಾಳು ಎಂದು ಬಿಡುತ್ತಾರೆ ಆ ಅನುಭವ ನಮಗೆ ಇದೆ, ಅದೇ ನೂರಾರು ಚೀಲ ಆಗುತ್ತದೆ, ಹೆಸರು ಮಾತ್ರ ಹಮಾಲಿಗಳದು ಬರುತ್ತದೆ. ಅದರಲ್ಲಿ ದಲ್ಲಾಳಿಗಳಿಗೆ ಲಾಭವಿಲ್ಲದೆ, ಅಲ್ಲಿಂದ ಅಧಿಕಾರಿಗಳಿಗೆ ಪಾಲಿಲ್ಲವೆ, ಎಲ್ಲರಿಗೂ ಪಾಲು ಉಂಟು, ನಾವು ಒಂದು ವಸ್ತುನಿಷ್ಟವಾಗಿ ನೋಡುವುದಾದರೆ, ಈ ಶೋಷಣೆಯಲ್ಲಿ ಅನೇಕ ಜನ ಪಾಲುದಾರರಿದ್ದಾರೆ, ಅದನ್ನು ತಪ್ಪಿಸುವಂತಹ ವ್ಯವಸ್ಥೆಯಾಗಬೇಕು ಅದರ ಬಗ್ಗೆ ತಾವು ಒಂದು ದೃಢವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅದು ಆದ ನಂತರ ಮಾರುಕಟ್ಟೆಗೆ ಬಂದ ಮೇಲೆ ತೂಕದ ಬಗ್ಗೆ ಹೇಳಬೇಕೆಂದರೆ ದೇವರೆ ಕಾಪಾಡಬೇಕು. ಇದರಲ್ಲಿಯೂ ಸಹ ತಾವು ತೂಕ ಮಾಡಿದ ಮೇಲೆ, ಹರಾಜು ಬಿಡಬೇಕು ಎಂದು ಹೇಳಿದರೂ ಸಹ ಅನೇಕ ಸಂದರ್ಭಗಳಲ್ಲಿ ಇವತ್ತಿನ ದಿವಸ ಇದು ಜಾರಿಗೆ ಬರುತ್ತಿಲ್ಲ. ಇನ್ನು ಜಾಲಪ್ಪನವರಿಗೆ ಏನು ಹೇಳಬೇಕೆಂದು ಗೊತ್ತಿಲ್ಲ. ಕಮೀಷನ್ ಏಜೆಂಟ್ ರೈತರಿಂದ ತೆಗೆದುಕೊಳ್ಳಬಾರದೆಂದು ನಾವು ಕಾನೂನನ್ನು ಮಾಡಿದೆವು ಅದಕ್ಕೆ ನೀವು ಸಹ ಒಪ್ಪಿದಿರಿ, ಈಗ ಏನಾಗುತ್ತಿದೆ ಇದನ್ನು ಮುಚ್ಚಿಡುವಂತಹ ಅವಶ್ಯಕತೆ ಇಲ್ಲ, ಅವರು ಜಾಲಪ್ಪನವರು ಫೋಟೋವನ್ನು ಹಾಕಿದ್ದಾರೆ.

ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೇವಲ ನಾವು ಕಾನೂನನ್ನು ಮಾಡುವುದರಿಂದ ಈ ಶೋಷಣೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲಿಯವರೆಗೆ ತಾವು ಮಾಡಿದಂಥ ಪ್ರಗತಿಪರವಾದ ಕಾನೂನನ್ನು ನೀವು ನಿಜವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನಮಾಡುವುದಿಲ್ಲವೋ ಅಲ್ಲಿಯವರೆಗೂ ಕೇವಲ ಕಾನೂನಿನಿಂದ ಶೋಷಣೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು 8-10 ಪರ್ಸೆಂಟ್ ಕಮೀಷನ್‌ನನ್ನು ಕೊಡಬೇಕಾಗುತ್ತದೆ. ಇದು ನಡೆಯುತ್ತಿದೆ. ಏತಕ್ಕೆ ನಡೆಯುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ನಾವೇನಾದರೂ ಚಿತ್ರದುರ್ಗ ಮಾರ್ಕೆಟ್‌ಗೆ ಒಂದು ಬಂಡಿ ಅಕ್ಕಿಯನ್ನು ತೆಗೆದುಕೊಂಡು ಹೋದರೆ ಅವರು 10 ರೂಪಾಯಿ ತೆಗೆದುಕೊಳ್ಳುತ್ತಾರೆ. ನಾನು ಅವರನ್ನು ದೂಷಣೆ ಮಾಡುವುದಿಲ್ಲ. ಖರೀದಿದಾರರು ಏನಿದ್ದಾರೆ, ನೀವು ಏನು ಮಾಲನ್ನು ತೆಗೆದುಕೊಳ್ಳುತ್ತೀರಿ, ಎಷ್ಟು ದಿವಸದಲ್ಲಿ ನೀವು ಹಣವನ್ನು ಕೊಡುತ್ತೀರಿ? 7 ದಿವಸದಲ್ಲಿ ಕೊಡುತ್ತೀರಾ? ಇಂತಿಷ್ಟು ದಿವಸದಲ್ಲಿ ಕೊಡುತ್ತೇವೆಂದು ನೀವು ಕಾನೂನು ಮಾಡಿ. ನೀವು ಮಾಡಿದಂಥ ಕಾನೂನನ್ನು ಜಾರಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಖರೀದಿದಾರರ ಹತ್ತಿರ ದುಡ್ಡು ಇಲ್ಲ ಎಂದು ಇಟ್ಟುಕೊಳ್ಳೋಣ. ಸಾಮಾನ್ಯವಾಗಿ ಇವತ್ತು ಖರೀದಿದಾರರಲ್ಲಿ ಬಹಳಷ್ಟು ಜನರು ದುಡ್ಡು ಇಲ್ಲದಿರುವವರೇ ಜಾಸ್ತಿ. ಅವರೆಲ್ಲಾ ದಳ್ಳಾಳಿ ದುಡ್ಡಿನಲ್ಲಿ ಖರೀದಿದಾರರಾಗಿದ್ದಾರೆ. ಇವತ್ತಿನ ದಿವಸ ಅವರು 2-3-4 ತಿಂಗಳಾದರೂ ಕೂಡ ದಳ್ಳಾಳಿಗಳಿಗೆ ಹಣವನ್ನು ಕೊಡುತ್ತಿಲ್ಲ. ಹಾಗಾದರೆ ಅವನು 1 ರೂಪಾಯಿ ಕಮೀಷನ್ ತೆಗೆದುಕೊಳ್ಳುತ್ತಾನೆಯೇ? ಖರೀದಿದಾರರು ದಲ್ಲಾಳಿಗಳಿಗೆ ಕೊಡಬೇಕಾದ ಹಣವನ್ನು ನಿರ್ದಿಷ್ಟವಾದ ಅವಧಿಯಲ್ಲಿ ಕೊಡತಕ್ಕ ವ್ಯವಸ್ಥೆಯನ್ನು, ಎಲ್ಲಿಯವರೆಗೆ ಮಾಡುವುದಿಲ್ಲ ಅಲ್ಲಿಯವರೆಗೂ ಕಮೀಷನ್‌ದಾರರನ್ನು ಅಂದರೆ ದಲ್ಲಾಳಿಗಳನ್ನು ದೂಷಣೆ ಮಾಡುವುದರಲ್ಲಿ ಏನೂ ಅರ್ಥವಿಲ್ಲ. ನಾನು ತಮ್ಮನ್ನು ಕೇಳುತ್ತೇನೆ. ಇವತ್ತಿನ ದಿವಸ ತಾವು 7 ದಿವಸದೊಳಗೆ, ಖರೀದಿದಾರರು ಹಣವನ್ನು ಕೊಡಬೇಕೆಂದು ಏನು ಹೇಳುತ್ತಿದ್ದೀರಿ, ಇದನ್ನು ಆಚರಣೆಯಲ್ಲಿ ತರುವುದಕ್ಕೆ ಸಾಧ್ಯವೆ? ಕೋಟ್ಯಾಂತರ ರೂಪಾಯಿಗಳ ಹಣವನ್ನು ಇಟ್ಟುಕೊಂಡಿದ್ದು ಅವನು ಏನಾದರೂ ವ್ಯವಹಾರವನ್ನು ಮಾಡಿದರೆ ಆಗ ನೀವು ಮಾತನಾಡುವುದಕ್ಕೆ ಸಾಧ್ಯವಿದೆ. ಅದಕ್ಕೆ ಬೇಕಾದಂಥ ಸಾಲದ ವ್ಯವಸ್ಥೆಯನ್ನು ಅಥವಾ ಬೇರೆ ವಿಧವಾದ ಸಹಾಯವನ್ನು ನೀವು ಅಂದರೆ ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆಯೇ? ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಈಗ ತಾವು ರೈತರಿಗೆ ಏನು ಹಣವನ್ನು ಕೊಡುತ್ತೀರಿ ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳ ಮುಖಾಂತರ ನೇರವಾಗಿ ಚೆಕ್ ಮೂಲಕ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಈ ವ್ಯವಸ್ಥೆಯನ್ನು ಮಾಡಿದರೆ ನೀವು ರೈತನ ಶೋಷಣೆಯನ್ನು ಅರ್ಧ ತಪ್ಪಿಸಿದಂತಾಗುತ್ತದೆ. ಆಗ ಎಲ್ಲಾ ಲೆಕ್ಕಗಳೂ ಸಿಕ್ಕುತ್ತವೆ.

ಇನ್ನೊಂದು ವಿಚಾರ ನಿಮ್ಮ ಕಾನೂನಿನಲ್ಲಿದೆ. ಮಾಲುದಾರರ ಹೆಸರು ಇರಬೇಕು ಎಂದು ಇದೆ. ಆದರೆ ಅದರಲ್ಲಿ ನಂಜುಂಡಸ್ವಾಮಿ ಎಂದು ಇರಬಹುದು. ಏಕಾಂತಯ್ಯ ಎಂದು ಇರಬಹುದು. ಅದರಲ್ಲಿ ಪೂರ್ಣ ವಿಳಾಸ ಇರುವುದಿಲ್ಲ. ಇನ್ನೊಬ್ಬ ಹೋಗಿ ಅವನನ್ನು ನೀವು ಎಷ್ಟು ಕಮಿಷನ್ ಕೊಟ್ಟಿರಿ ಎಂದು ಕೇಳೋಣ ಎಂದರೆ ಅಥವಾ ಮಾಲಿನವರು ಎಷ್ಟು ಬಿಟ್ಟಿದ್ದಾನೆಂಬುದನ್ನು ಕೇಳೋಣ ಎಂದರೆ ನಿಮ್ಮ ಕಾನೂನಿನಲ್ಲಿ ಅವನ ಹೆಸರು ಮಾತ್ರ ಇರಬೇಕು. ವಿಳಾಸ ಬೇಕಾಗಿಲ್ಲವೆಂದು ಮಾಡಿದಿರಿ. ಅವನನ್ನು ಐಡೆಂಟಿಫೈ ಮಾಡುವುದು ಬೇಕಾಗಿಲ್ಲ. ಇವತ್ತು ನಿಮ್ಮ ನಿಬಂಧನೆಗಳೇನಿವೆ ಅವುಗಳನ್ನು ನಾನು ರುಜುವಾತು ಮಾಡಲಾರದಂಥ ಪರಿಸ್ಥಿತಿಯಲ್ಲಿ ನಿಮ್ಮ ಕಾನೂನು ಇದೆ. ತಾವು ಹೇಳಿದ್ದೀರಿ, ಒಂದೇ ಒಂದು ಚೀಲ ಸೀಗೇಕಾಯಿ ಎಂದು ಬರೆದುಕೊಂಡಿದ್ದೀಯ, ಇದನ್ನು ಹೇಗೆ ಹೇಳುತ್ತೀಯ ಎಂದು ನೀವು ಕೇಳಬಹುದು. ತಿಮ್ಮಪ್ಪ ಎಂದು ಹೇಳಿದರೆ, ಯಾರು ತಿಮ್ಮಪ್ಪ ಎಂದು ಗೊತ್ತಾಗುವುದಿಲ್ಲ. ತಂದೆಯ ಹೆಸರು ಇಲ್ಲ.

ಊರಿನ ಹೆಸರು ಇಲ್ಲ. ಈ ರೀತಿ ಇರುವುದರಿಂದ ಅದನ್ನು ನಾವು ರುಜುವಾತು ಮಾಡುವುದಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ಇದೆ.

ಮಾನ್ಯ ಉಪ ಸಭಾಧ್ಯಕ್ಷಿಣಿಯವರೆ, ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶವಿಲ್ಲ. ಆದರೆ ಒಟ್ಟಿನಲ್ಲಿ ಹೇಳುವುದಾದರೆ ಅಜ್ಜಿಬಾಳ ಹೆಗ್ಡೆಯವರ ಶಿಫಾರಸಿನಮೇಲೆ ಕೆಲವು ತಿದ್ದುಪಡಿಗಳನ್ನು ಏನು ತಂದಿದ್ದೀರಿ ಇದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ನಂಜುಂಡ ಸ್ವಾಮಿಯವರು ಪ್ರತಿಸಾರಿಯೂ ಹೇಳುತ್ತಿರುತ್ತಾರೆ. ಇದು ಮಾರುವವರ ಮಾರ್ಕೆಟ್ ಅಲ್ಲ, ಕೊಂಡುಕೊಳ್ಳುವವರ ಮಾರ್ಕೆಟ್ ಎಂದು. ಕೊಂಡುಕೊಳ್ಳುವವರ ಈ ಮಾರ್ಕೆಟ್‌ನ್ನು ಮಾರುವವರ ಮಾರ್ಕೆಟ್ ಆಗಿ ಪರಿವರ್ತನೆ ಮಾಡತಕ್ಕ ದಿಸೆಯಲ್ಲಿ ತಾವು ಕ್ರಮ ತೆಗೆದುಕೊಂಡು ಈ ದೋಷವನ್ನು ತಪ್ಪಿಸುವುದರ ಮುಖಾಂತರ ತಾವು ರೈತರಿಗೆ ಲಾಭದಾಯಕವಾದ ರೀತಿಯಲ್ಲಿ ಮಾಡಬೇಕು. ಇದರ ಜೊತೆಯಲ್ಲಿ ರಾಜ್ಯದ ಆದಾಯವನ್ನು ಹೆಚ್ಚಿಸಬೇಕಾದರೆ ಸೋರಿ ಹೋಗುತ್ತಿರುವ ತೆರಿಗೆಯನ್ನು ತಡೆಗಟ್ಟಬೇಕು ಮತ್ತು ಆ ಆದಾಯ ಆಯಾಯ ಪ್ರದೇಶದ ಅಭಿವೃದ್ಧಿಗೆ ಉಪಯೋಗ ಮಾಡತಕ್ಕ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರೆಂಬುದನ್ನು ಹೇಳಿ ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ದಿವಸ ಮಾನ್ಯ ಸಹಕಾರ ಮಂತ್ರಿಗಳು ತಂದಿರತಕ್ಕ ಅಗ್ರಿಕಲ್ಚರ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಯ ಬಿಲ್ಲಿಗೆ ನಾನು ಕೆಲವು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ. ಎ.ಪಿ.ಎಂ.ಸಿ.ಗೆ 9 ಮಂದಿ ರೈತರು, ಒಬ್ಬರು ದಲ್ಲಾಳಿ ವತಿಯಿಂದ, ಒಬ್ಬರು ಖರೀದಿದಾರರ ವತಿಯಿಂದ ಇದ್ದುದು ನಿಜವಾಗಿ ಯೋಗ್ಯವಾಗಿತ್ತು ಎಂದು ನನಗನಿಸುತ್ತಿದೆ. ಏಕೆಂದರೆ ಇವತ್ತಿನ ದಿವಸ ಈ ದಳ್ಳಾಳಿಗಳ ತೆರಪಿನಿಂದ ಇದ್ದಂಥಹ ಒಬ್ಬ ಎ.ಪಿ.ಎಂ.ಸಿ. ಮೆಂಬರ್‌ನ್ನು ನಾವು ತೆಗೆಯುವುದರಿಂದ ಎ.ಪಿ.ಎಂ.ಸಿ. ಯಲ್ಲಿ ಮನಾಪಲಿಯಾಗುತ್ತದೆ. ಹಳ್ಳಾಳಿ ತೆರಪಿನಿಂದ ತಮ್ಮ ಸಂಕಷ್ಟಗಳನ್ನು ಹೇಳುವುದಕ್ಕೆ ಅಥವಾ ತಮ್ಮ ವಿಚಾರಗಳನ್ನು ಸಹ ತಿಳಿಸಲಿಕ್ಕೆ ಯಾವುದೇ ಒಂದು ಅವಕಾಶ ಅವರಿಗೆ ಇರುವುದಿಲ್ಲವೆಂದು ಹೇಳಬಹುದು. ಇವತ್ತಿನ ದಿವಸ ಯಾವುದೇ ಒಂದು ಮಾರ್ಕೆಟ್‌ನಲ್ಲಿ ರೈತರು ಖರೀದಿದಾರರು ಹಾಗೂ ದಳ್ಳಾಳಿಗಳು ಮತ್ತು ಮಾರ್ಕೆಟ್ ಸೊಸೈಟಿ ಈ ನಾಲ್ಕು ಜನರು ಇದ್ದಲ್ಲಿ ಎ.ಪಿ.ಎಂ.ಸಿ. ಒಳ್ಳೆಯ ರೀತಿಯಿಂದ ನೆಡೆಯಲಿಕ್ಕೆ ಅನುಕೂಲವಾಗುತ್ತದೆಂದು ನಾನು ಸಲಹೆ ಕೊಡುತ್ತಿದ್ದೇನೆ. ಅವರನ್ನು ತೆಗೆದಿದೆ ಆದರೆ ರೈತರಿಗೆ ಪೂರ್ಣ ಮನಾಪಲಿ ಕೊಟ್ಟ ಹಾಗೆ ಆಗುತ್ತದೆಂದು ಹೇಳಬಹುದು. ಅದುಅಲ್ಲದೆ ಅವರಿಗೆ ಹೆಚ್ಚಿನ ಅನುಕೂಲ ಕೊಟ್ಟಿರುತ್ತೀವಲ್ಲ ಹೀಗಾಗಲೇ ಎ.ಪಿ.ಎಂ.ಸಿ. ಚೇರ್ಮನ್ ಇದ್ದವರು ರೈತರಿಗೆ ಅವರು ತೆರಪಿನಿಂದ ಯಾರು ಆಗುತ್ತಾರೋ ಅವರನ್ನು ತಂದಿಟ್ಟುಕೊಳ್ಳಲು ಅನ್ವಯಿಸುತ್ತದೆ. ಈವತ್ತಿನ ದಿವಸ ದಳ್ಳಾಳಿಗಳು ಅಥವಾ ಖರೀದಿ ದಾರರು ಇವರಿಬ್ಬರು ಛೇರ್ಮನ್ ಆಗಲಿಕ್ಕೆ ಬರುವುದಿಲ್ಲ. ಆದರೆ ರೈತರು ಇರುತ್ತಾರೆ. ರೈತರ ತೆರಪಿನಂಥವನೇ ಛೇರ್ಮನ್ ಇದ್ದಾಗ ಆತನ ಒಂದು ವಾಯ್ಸ್ ಇಲ್ಲದೇ ಇದ್ದರು ಸಹಿತ ಒಂದುಸಲಹೆ ಅತಿ ಅವಶ್ಯಕ ಇರುತ್ತದೆನ್ನುವ ವಿಚಾರ ತಿಳಿಸಬಹುದು. ಇನ್ನು ಮುಂದೆ ತಾವು ತಂದಂಥ ಅಮೆಂಡ್‌ಮೆಂಟ್‌ನಲ್ಲಿ ಈ ಮಾರ್ಕೆಟ್ ಕಮಿಟಿ ಸೆಸ್ 7 ದಿವಸಗಳಲ್ಲಿ ತುಂಬಬೇಕೆಂಬ ವಿಚಾರ ಇದೆ. 7 ದಿವಸಕ್ಕಿಂತ ಹೆಚ್ಚಿಗೆ ಶೇಖರಿಸುತ್ತಾ ಸೆಸ್ ತುಂಬಿದಲ್ಲಿ ಈ ವತ್ತಿನ ದಿವಸ 13 ಪರ್‌ಸೆಂಟ್‌ರಿಂದ 30 ಪರ್‌ಸೆಂಟ್‌ತನಕ ಫೈನಲ್ ಇಂಟರೆಸ್ಟ್ ರೇಟ್ ಕೊಡುವಂಥ ಬಡ್ಡಿ ಕೊಡುವಂಥಾದ್ದು ತಮಗೆ ಗೊತ್ತಿದೆ. ಸೇಲ್ಸ್‌ಟ್ಯಾಕ್ಸ್ ತೆಗೆದುಕೊಂಡರೆ ಸೇಲ್ಸ್‌ಟ್ಯಾಕ್ಸ್‌ನವರು ಸಹಿತ ಒಂದು ತಿಂಗಳ ಟೈಂ ಕೊಡುತ್ತಾರೆ. ಇನ್‌ಕಂ ಟ್ಯಾಕ್ಸ್‌ಗೆ

ಟೈಂ ಕೊಡುತ್ತಾರೆ. ಆದರೆ ಎ.ಪಿ.ಎಂ.ಸಿ. ಕಾಯಿದಯಲ್ಲಿ ಕೇವಲ 7 ದಿವಸದಲ್ಲಿ ಸೆಸ್ ತುಂಬುವಂತೆ ಇರುವುದು ನಿಜವಾಗಿಯು ಬಹಳ ಕಡಿಮೆ ಅವಧಿ ಅದನ್ನು ಕನಿಷ್ಟ ಒಂದು ತಿಂಗಳಾದರೂ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ. ಏತಕ್ಕೆಂದರೆ ಈವತ್ತಿನ ದಿವಸ ನಾನು ಹೇಳಬಹುದು. ಯಾವುದೇ ವ್ಯಾಪಾರ ಆಗುವಾಗ ಕೆಲವು ವ್ಯಾಪಾರದಲ್ಲಿ ಅವರು ಡೆ ಟು ಡೇ ಕಾಂಟ್ರಾಕ್ಟ್‌ನಿಂದ 7 ಡೇಸ್ ತೆಗೆದುಕೊಂಡಿರುತ್ತಾರೆ. ಕೆಲವು ಮಾರ್ಕೆಟ್‌ನಲ್ಲಿ ಪ್ರಂ ದಿ ಡೇ ಆಫ್ ಡೆಲಿವರಿ 7 ಡೇಸ್ ಇಡುತ್ತಾರೆ. ಹೀಗಾಗಿ ವ್ಯಾಪಾರಸ್ಥರಲ್ಲಿಯು ಸಹಿತ ಒಂದು ತಪ್ಪು ಆಗಿ ಕೆಲವು ಮಾರ್ಕೆಟ್ ಕಮಿಟಿಯಲ್ಲಿ ವ್ಯಾಪಾರಸ್ಥರ ಮೇಲೆ ದಂಡ ಬಿದ್ದು ನಿಜವಾಗಿಯೂ ವಿನಾಕಾರಣ ತೊಂದರೆಗೊಳಗಾಗಿದ್ದಾರೆ. ಆದಕಾರಣ ಯಾವ ಪ್ರಕಾರವಾಗಿ ಒಂದು ಸೇಲ್ಸ್ ಟ್ಯಾಕ್ಸ್ ತುಂಬಲಿಕ್ಕೆ ಒಂದು ಮಂತು ಇದೆ. ಹಾಗೆ ಇಲ್ಲಿಯೂ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

ಮಾನ್ಯ ಜಾಲಪ್ಪನವರು ಇದ್ದಾಗ ಕಮೀಷನ್ 2 ಪರ್‌ಸೆಂಟನ್ನು ಖರೀದಿದಾರರಿಂದ ವಸೂಲು ಮಾಡುತ್ತಿದ್ದಾಗ ಅದನ್ನು ಖರೀದಿದಾರರು ಮಾಡಬೇಕೆಂದು ವಿಚಾರ ಹಿಂದೆ ನಮ್ಮ ಸರ್ಕಾರ ಇದ್ದಾಗ ಆಯಿತು.

ಶ್ರೀ ಬಿ.ಹೆಚ್. ಬನ್ನಿಕೋಡ್ : ರೈತರಿಗೆ ಶೋಷಣೆ ಆಗಬಾರದು. ತೊಂದರೆಯಾಗಬಾರದೆಂದು ಅನ್ಯಾಯ ಆಗಬಾರದೆಂದು ಕಮೀಷನ್ ಆದುದು ತದ್ವಿರುದ್ಧವಾಗಿದೆ.

ಶ್ರೀ ಶಿವಾನಂದ ಹೆಚ್ ಕೌಜಲಗಿ : ಆದಕಾರಣ ಇವತ್ತಿನ ದಿವಸ 2 ಪರ್‌ಸೆಂಟ್ ಕಮೀಷನ್ ಏನಿದೆ ಅದು 20 ವರ್ಷದ ಹಿಂದೆ ಫಿಕ್ಸ್ ಆದದ್ದು ಈವತ್ತಿನ ದಿವಸ ಪ್ರತಿಯೊಬ್ಬ ವ್ಯಾಪರಸ್ತರಿಗೆ ಸಹಿತ ಎಕ್ಸಪೆಂಡಿಚರ್ ಎಚ್ಚು ಬೀಳುತ್ತದೆ ಆದ ಕಾರಣ ಕಮಿಷನ್‌ನನ್ನು 2 ಪರ್‌ಸೆಂಟ್ ಇದ್ದುದ್ದನ್ನು 3 ಪರ್‌ಸೆಂಟಿಗೆ ಮಾಡಬೇಕೆಂದು ಹೇಳಿ ನಾನು ಮತ್ತೊಂದು ಸಲಹೆಯನ್ನು ಕೊಡುತ್ತೇನೆ. ನಾನು ಕೇಳುವುದು ವರ್ಕಿಂಗ್ ಕ್ಯಾಪಿಟಲ್ ಶೇರ್ ಯಾವುದೇ ಒಂದು ಸೊಸೈಟಿಯಲ್ಲಿ ಇದ್ದರೆ ವ್ಯಾಪಾರ ಮಾಡುವುದಕ್ಕೆ ಅನುಕೂಲವಾಗುತ್ತದೆ. ಯಾವುದೇ ಟಿ.ಎ.ಪಿ.ಎಂ.ಸಿ. ಸೊಸೈಟಿ ಸುವ್ಯವಸ್ಥೆಯಲ್ಲಿ ಇಲ್ಲ. ಎಲ್ಲಾ ವ್ಯವಹಾರಗಳನ್ನು ಟಿ.ಎ.ಪಿ.ಎಂ.ಸಿ. ಸೊಸೈಟಿ ಮಾಡಬೇಕೆಂದು ವಿಚಾರ ಇದೆಯೆಂದು ತಾವು ಹೇಳುತ್ತಿದ್ದೀರಿ. ಅದನ್ನು ತಗೆದು ಪ್ರೈವೇಟಿನವರಿಗೆ ಈವತ್ತಿನ ದಿವಸ ಫುಡ್ ಗ್ರೈನ್ ಡಿಸ್ಟ್ರಿಬ್ಯೂಷನ್ ಕೊಡಲಿಕ್ಕೆ ಹತ್ತಿದ್ದಾರೆ. ಮೊನ್ನೆ ಸಂಕೇಶ್ವರದಲ್ಲಿ ಫುಡ್ ಗ್ರೈನ್ ಡಿಸ್ಟ್ರಿಬ್ಯೂಷನ್ ಇದ್ದಿದನ್ನು ಪ್ರೈವೇಟಿನವರಿಗೆ ಕೊಟ್ಟಿದ್ದಾರೆ. ಈ ಸಹಕಾರ ಸಂಘದವರನ್ನು ಬೆಳೆಸಬೇಕೆಂದು ನಾವು ಹೇಳುವುದು. ಆದರೆ ಆ ಪ್ರೈವೇಟ್ ಬಿಸಿನಸ್‌ನವರಿಗೆ ಎನ್‌ಕರೇಜ್ ಮಾಡಬೇಕೆಂದು ಹೇಳುತ್ತಾರೆ. ಇಂಥ ಸ್ಥಿತಿ ಆಗಬಾರದು ಆದ ಕಾರಣ ತಾವು ಅವರಿಗೆ ಒಂದು ಸವಲತ್ತು ಕಲ್ಪಿಸಲಿಕ್ಕೆ ಎಷ್ಟು ಎಕ್ಸ್‌ಪೆಂಡಿಚರ್ ಬರುತ್ತದೆ. ಈ ಇಪ್ಪತ್ತು ವರ್ಷಗಳ ಹಿಂದೆ ಕಮಿಷನ್ 2 ಪರ್ಸೆಂಟ್ ಇದ್ದುದನ್ನು 3 ಪರ್ಸೆಂಟ್ ಮಾಡಬೇಕು. ಆ 3 ಪರ್ಸೆಂಟ್ ಮಾಡುವುದರಿಂದ ಈಗ ಏನು ಕೆಲವು ಕಡೆ ತಪ್ಪು ವಸೂಲಿ ಮಾಡುತ್ತಾರೆ. ಅದು ಹೋಗುತ್ತದೆಂದು ಹೇಳಬಹುದು. ತಮಗೆ ಗೊತ್ತಿರುವ ಹಾಗೇ ಮಾರ್ಕೆಟಿಂಗ್ ಸೊಸೈಟಿಗಳು ಧಾರವಾಡದಲ್ಲಾಗಲಿ ಬೆಳಗಾಂನಲ್ಲಾಗಲಿ ಚೆನ್ನಾಗಿ ನಡೆಯುತ್ತಿದೆ. ಕಾರಣ ಅವುಗಳಿಗೆ ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಹೀಗಾಗಿ ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆ ಸಂಸ್ಥೆಗಳು ಇಲ್ಲದಿರುವ ಕಾರಣ ರೈತರು ದಳ್ಳಾಳಿಗಳ ಕಡೆ ಹೋಗಬೇಕಾಗಿದೆ. ಸೊಸೈಟಿಗಳು ಚೆನ್ನಾಗಿದ್ದರೆ ರೈತರು ದಳ್ಳಾಳಿಗಳ ಕಡೆ ಹೋಗುವ ಪ್ರಸಂಗ ಬರುವುದಿಲ್ಲ. ಇವತ್ತಿನ ದಿವಸ ಸಿ.ಸಿ.ಐ. ನವರು ಖರೀದಿ ಮಾಡಿದರೆ 7 ದಿವಸದಲ್ಲಿ ಹಣ ಕೊಡಬೇಕೆಂದು ಇದೆ. ಆ ಪ್ರಕಾರ ಅವರು ಕೊಡುವುದಿಲ್ಲ. ಅವರೂ ಕೂಡ

ವ್ಯಾಪಾರ ಮಾಡುವ ಸಲುವಾಗಿ 18 ರಿಂದ 30 ಪರ್ಸೆಂಟ್ ಬಡ್ಡಿ ದರದಲ್ಲಿ ಹಣ ತರುತ್ತಾರೆ. ಹೀಗಾಗಿ ಅವರು ರೈತರಿಂದ ಕಮೀಷನ್ ವಸೂಲ್ಮಾಡುವ ಪ್ರಸಂಗ ಬರುತ್ತದೆ. ಇದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಅವರು ಮಾರ್ಕೆಟಿಂಗ್ ರೂಲ್ಸ್ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಸರ್ಕಾರದವರೇ ಕಾನೂನು ಪ್ರಕಾರ ನಡೆಯದೇ ಖಾಸಗೀಯವರು ನಡೆಯಬೇಕೆಂದರೆ ತಪ್ಪಾಗುತ್ತದೆ. ಆದುದರಿಂದ, ತಾವು ತಂದಿರತಕ್ಕ ತಿದ್ದುಪಡಿಯಲ್ಲಿ 2 ಪರ್ಸೆಂಟ್ ಇರುವುದನ್ನು 3 ಪರ್ಸೆಂಟ್ ಮಾಡಬೇಕು ಮತ್ತು ಮಾರ್ಕೆಟಿಂಗ್ ಕಮಿಟಿಯಲ್ಲಿ ರೈತ ಪ್ರತಿನಿಧಿಗಳು ಇರುವಂತೆ ಮಾಡಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ ಒಳ್ಳೆಯ ಅನುಭವದಿಂದ ರೈತರ ತಲೆಯ ಮೇಲಿದ್ದ ದಳ್ಳಾಲಿಗಳನ್ನು ಕೆಳಗಿಳಿಸತಕ್ಕ ಕೆಲಸ ಮಾಡಿದ್ದಾರೆ. ಸಂತೋಷ ಬಹಳ ಅನುಭವದಿಂದ ಈ ಕೆಲಸ ಮಾಡಿದ್ದಾರೆ. ಮಾರುಕಟ್ಟೆಗಳಿಂದ ದಳ್ಳಾಳಿಗಳನ್ನು ಹೊರಗೆ ಹಾಕಬೇಕು. ರೈತರು ತಮ್ಮ ಮಾಲುಗಳನ್ನು ಮಾರಾಟ ಮಾಡಬೇಕಾದರೆ ಸರ್ಕಾರ ಯಾವ ರೀತಿ ಹರಾಜು ಮೂಲಕ ಮಾರಾಟ ಮಾಡುತ್ತಿದೆ, ಅದೇ ರೀತಿ ರೈತರ ಮಾಲನ್ನು ಮಾರಾಟ ಮಾಡುವ ವ್ಯವಸ್ಥೆಯನ್ನು ಏತಕ್ಕೆ ತರಬಾರದು? ಮಿನಿಮಂ ಸೀಲಿಂಗ್ ರೇಟ್ ಫಿಕ್ಸ್ ಮಾಡಿ ಕಾಲು ಅಂಶ ಡಿಪಾಸಿಟ್ ಮಾಡಬೇಕು. ವ್ಯಾಪಾರ ಆದವರು ಹಣ ಕೊಟ್ಟು ಮಾಲನ್ನು ಬಿಡಿಸಿಕೊಂಡು ಹೋಗಬೇಕೆಂದು ಮಾಡಿದ್ದರೆ ದಳ್ಳಾಳಿಗಳ ಅವಶ್ಯಕತೆ ಇರಲಿಲ್ಲ ಅನ್ನಿಸುತ್ತದೆ. ಸರ್ಕಾರ ತನ್ನ ವಸ್ತುಗಳನ್ನು ಮಾರಾಟ ಮಾಡಲು ಏನು ನೀತಿ ಅನುಸರಿಸುತ್ತಿದೆ ಅದೇ ರೀತಿ ರೈತರ ವಸ್ತುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಇದನ್ನು ಒಮ್ಮೆಲೇ ಮಾಡುವುದಕ್ಕೆ ಆಗದಿದ್ದರೆ ಮಾನ್ಯ ಏಕಾಂತಯ್ಯನವರು ಹೇಳಿದ ಹಾಗೆ ಚೆಕ್ಕಿನ ಮೂಲಕ ಹಣ ಕೊಟ್ಟು ಚೆಕ್ಕಿನ ತೀರುವಳಿ ಆಗಬೇಕು. ಮತ್ತು ದಳ್ಳಾಳಿಗಳ ಸಂಬಂಧವನ್ನು ತಪ್ಪಿಸಬೇಕು. ಎಪಿಎಂಸಿಯಿಂದ ದಳ್ಳಾಳಿಗಳನ್ನು ದೂರ ಮಾಡಬೇಕು. ಇಷ್ಟನ್ನಾದರೂ ಮಂತ್ರಿಗಳು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಮಾನ್ಯ ಕಂದಾಯ ಸಚಿವರು ಬಂದಿದ್ದಾರೆ. ನಾನು ಬೆಳಿಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಆಗ ಅವರು ಇರಲಿಲ್ಲ. ಬಂದಾಗ ಕೇಳಿ ಎಂದು ಹೇಳಿದ್ದೀರಿ. ಮತ್ತೆ ಆ ಸದನಕ್ಕೆ ಹೊದರೆ ತೊಂದರೆಯಾಗುತ್ತದೆ.

ಉಪಾಧ್ಯಕ್ಷಿಣಿಯವರು : ಈಗ ಸಿಂಧ್ಯ ಅವರು ಮಾತನಾಡಲಿ. ನೀವು ಆಮೇಲೆ ಮಾತನಾಡಿ. ಮುಂದಿನ ವಿಷಯ ಕಂದಾಯ ಸಚಿವರದೇ ಇದೆ.

+ ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ದಿವಸ ಹಿರಿಯ ಸಚಿವರಾದ ಶ್ರೀಮಾನ್ ಪಾಟೀಲರು ಈ ಸಹಕಾರ ಇಲಾಖೆಯನ್ನು ವಹಿಕಿಕೊಂಡಿರತಕ್ಕದ್ದು ನಮ್ಮ ರಾಜ್ಯದ ಜನತೆಯ ದೃಷ್ಟಿಯಿಂದ ಒಳ್ಳೆಯದೆಂದು ಹೇಳುತ್ತಾ ಈ ಮಸೂದೆಯನ್ನು ನಮ್ಮ ಮುಂದೆ ಏನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಪಾಟೀಲರು ಈ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ ಮಸೂದೆ ತರತಕ್ಕದ್ದು ಬಹಳ ಕಷ್ಟದ ಕೆಲಸ. ಮಾನ್ಯ ಮಿತ್ರರಾದ ಕೌಜಲಗಿಯವರು ಮಾತನಾಡುತ್ತಾ, ಜಾಲಪ್ಪ ಕಮಿಷನ್ ಎಂಬ ಮಾತನ್ನು ಹೇಳಿದರು., ಅವರು ಒಳ್ಳೆಯ ಅರ್ಥದಿಂದಲೇ ಹೇಳಿದ್ದಾರೆಂದು ತಿಳಿದಿದ್ದೀನೆ. ಜಾಲಪ್ಪ ಕಮಿಷನ್ ಏತಕ್ಕೆ ಬಂತು ಎಂದರೆ ಇದೇ ರೀತಿ ಒಂದು ತಿದ್ದುಪಡಿಯನ್ನು ತಂದು ಜಾಲಪ್ಪನವರು ದಳ್ಳಾಳಿಗಳಿಂದ ಮತ್ತು ವರ್ತಕರು ಏನು ರೈತರಿಂದ ಹಣ ಗಳಿಸುತ್ತಿದ್ದರು ಅದನ್ನು

ನಿಲ್ಲಿಸಬೇಕೆಂಬ ಪ್ರಯತ್ನಮಾಡಿದರು. ಆದರೆ ನಮ್ಮ ಸರ್ಕಾರದಲ್ಲಿ ಜಾಲಪ್ಪನವರು ಹೋದ ಮೇಲೆ ಬೇರೆ ಸಹಕಾರ ಮಂತ್ರಿಗಳು ಬಂದರು.

ನಮ್ಮ ಸರ್ಕಾರ ಹೋದಮೇಲೆ ಅಧಿಕಾರಿಗಳು ಕಾನೂನನ್ನು ಅವರ ಕೈಗೆ ತೆಗೆದುಕೊಂಡು ಎರಡೂ ಕಡೆಯಿಂದ ವರ್ತಕರಿಗೆ ಅನೂಕಲವಾಗುವ ರೀತಿಯಲ್ಲಿ ಮಾಡಿರುವುದರಿಂದ ಜಾಲಪ್ಪನವರ ಕಮಿಷನ್ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆಂದು ನಾನು ತಿಳಿದಿದ್ದೇನೆ. ಆದರೆ ಅದು ಕಡತದಲ್ಲಿ ಹೋಗಬಾರದು ಎಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ ಜಾಲಪ್ಪನವರು ಹಿರಿಯ ಸದಸ್ಯರಷ್ಟೇ ಅಲ್ಲ, ಸಹಕಾರಿ ಕ್ಷೇತ್ರದಲ್ಲಿ ಬಹಳ ಉತ್ತಮವಾದ ಕೆಲಸವನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಅವರು ಇಲ್ಲದಿರುವ ಸಮಯದಲ್ಲಿ ಅವರು ಹೇಳಿರತಕ್ಕ ಅರ್ಥ ಏನು ಬಂದಿದೆಯೋ ನನಗೆ ಗೊತ್ತಿಲ್ಲ. ತಾವು ಕಡತವನ್ನು ತರಿಸಿ ಆ ಅರ್ಥ ಇದ್ದರೆ ಅದನ್ನು ತೆಗೆಸಿಹಾಕಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಕೆ.ಎಚ್. ಪಾಟೀಲರು ಇವತ್ತು ಏನು ಈ ಮಸೂದೆ ನಮ್ಮ ಮುಂದೆ ಇಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ನಿಮಗೆ ಅಭಿನಂದಿಸುತ್ತೇನೆ. ನೀವು ಇದರ ಕಾರ್ಯಾಚರಣೆಗೆ ಎಲ್ಲ ಪ್ರಯತ್ನವನ್ನೂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ನೀವು ಒಂದು ಪಕ್ಷದಲ್ಲಿರುವುದರಿಂದ ಒಂದೆರಡು ವಿಷಯಗಳನ್ನು ತಾವು ಮನಸ್ಸಿಲ್ಲದೆ ಮಾಡಿದ್ದೀರಿ. ಮತ್ತು ಅದನ್ನು ಒಪ್ಪಿಕೊಳ್ಳತಕ್ಕ ಪ್ರಾಮೀಣಿಕತೆಯನ್ನು ತೋರಿದ್ದೀರಿ. ಈಗ ಮಂತ್ರಿಗಳಾಗಿರುವವರು ಅತರ ಅಧ್ಯಕ್ಷರಾಗಿರಬಾರದು ಎಂಬುದು ನನ್ನ ಒಂದು ವಿಚಾರ. ಆದರೆ ನಾನು ಅನೇಕ ಒತ್ತಡಗಳಿಗೆ ಮಣಿದು ಆ ಕೆಲಸ ಮಾಡಬೇಕಾಗಿ ಬಂತು ಎಂದು ಹೇಳಿದ್ದೀರಿ. ಆದೇರೀತಿ ಮಾರುಕಟ್ಟೆ ಸಮಿತಿ ರದ್ದು ಮಾಡುವ ವಿಚಾರ ಮತ್ತು ಮಾರುಕಟ್ಟೆ ಉಪಾಧ್ಯಕ್ಷರು ಮತ್ತು ಅಧ್ಯಕ್ಷರನ್ನು ತೆಗೆದುಹಾಗುವ ವಿಚಾರ ಮುಂಚೆ ಇದು ನಿರ್ದೇಶಕರಿಗೆ ಇತ್ತು. ಮತ್ತೆ ಅದನ್ನು ಸರ್ಕಾರ ವಾಪಸ್ ತೆಗೆದುಕೊಳ್ಳುತ್ತಿದೆ. ಇದರ ಬಗ್ಗೆ ನನಗೆ ಅನುಮಾನ ಇದೆ. ನಾನು ಇದನ್ನು ಸ್ವಾಗತ ಮಾಡಿದರೂ ಸಹ ಇದರ ದುರುಪಯೋಗ ಆಗಬಹುದು ಎಂಬ ಅನುಮಾನ ಇದೆ. ಏಕೆಂದರೆ ನೀವು ಇರುವವರೆಗೂ ಪರ್ವಾಗಿಲ್ಲ. ಅಥವಾ ನಿಮ್ಮಂತೆ ವಿಚಾರ ಮಾಡತಕ್ಕ ಈ ಕಡೆ ಇರತಕ್ಕವರು ಯಾರಾದರೂ ಸಹಕಾರ ಇಲಾಖೆ ಮಂತ್ರಿಗಳಾದರೂ ಪರ್ವಾಗಿಲ್ಲ ನೀವು ಅಲ್ಲೇ ಶಾಸ್ವತವಾಗಿ ಇರುತ್ತೀರಾ? ನಾವೂ ಬರಬೇಕಾಗುತ್ತದಲ್ಲ. ಆರು ತಿಂಗಳಾಗಬಹುದು, ಒಂದು ವರ್ಷ ಆಗಬಹುದು, ಎರಡು ವರ್ಷವಾಗಬಹುದು, ಹೇಳವುದಕ್ಕಾಗುವುದಿಲ್ಲ ನೋಡಿ. ಬರುವುದು ಗ್ಯಾರಂಟಿ. ಅನುಮಾನ ಏತಕ್ಕೆ ನಿಮಗೆ? ನಾವು ಬರದೇ ಇದ್ದರೆ ಬಾಬಾಗೌಡರೇ ಬರಬಹುದು.

ಶ್ರೀ ಎಂ.ಎಸ್. ಪಾಟೀಲ್ : ತಾವು ಯಾವ ಉದ್ದೇಶದಿಂದ ಹೇಳುತ್ತಿದ್ದೀರಿ. ತಾವೇ ನಮ್ಮ ಪಕ್ಷಕ್ಕೆ ಬರುತ್ತೀರೋ ಅಥವಾ......

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಲ್ಲಾರಿಗೌಡ ಪಾಟೀಲರ ಅದೃಷ್ಟ ತಪ್ಪಿಹೋಯಿತು ಪಾಪ.

ಶ್ರೀ ಟಿ.ಎಂ. ಮಂಜುನಾಥ್ : ಸಿಂಧ್ಯ ಅವರೆ, ಹೆದರಿಕೊಳ್ಳಬೇಡಿ. ಇಲ್ಲಿರುವವರಿಗೇ ಅವಕಾಶ ಇಲ್ಲ, ನಿಮಗೆ ಎಲ್ಲಿ ಕೊಡುತ್ತಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಂಜುನಾಥ್ ಅವರು ನನಗೆ ಬರಬೇಡಿ ಎಂದು ಹೇಳುತ್ತಿದ್ದಾರೆ. ನಾನು ಅದರ ಯೋಚನೆ ಸಹಿತ ಮಾಡಿಲ್ಲ. ಅದೇನೇ ಇರಲಿ ನಾನು ಮತ್ತೊಮ್ಮೆ ಪಾಟೀಲರನ್ನು ಈ ಸಂದರ್ಭದಲ್ಲಿ ಅಭಿನಂದಿಸಿ ಈ ಮಸೂದೆಯನ್ನು ಸ್ವಾಗತ ಮಾಡಿ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ

ಸಾಧ್ಯವೆ ತಾವು ದಯವಿಟ್ಟು ವಿಚಾರ ಮಾಡಿ. ಸರ್ಕಾರವೇ ಸಂಪೂರ್ಣ ಅಧಿಕಾರ ಎಂದರೆ ಮಂತ್ರಿಗಳೇ ಇಟ್ಟುಕೊಳ್ಳುವುದು ಎಲ್ಲಾ ಸಂದರ್ಭಗಳಲ್ಲಿ ನಾವು ನೋಡಿದ್ದೇವೆ. ಈಗ ಪ್ರೈಮರಿ ಸೊಸೈಟಿಗಳಿಗೆ ನಾಮಿನೇಷನ್ ಮಾಡುವುದು, ತಮಗೆ ಇಷ್ಟ ಇಲ್ಲ ಎಂಬುದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಒತ್ತಡಕ್ಕೆ ಮಣಿದು ತಾವು ಮಾಡುತ್ತಿದ್ದೀರಿ. ಆದರೆ ಅನೇಕ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಸಂಬಂದ ಇಲ್ಲದೇ ಇರುವವರನ್ನು ಮಾಡಬೇಕಾದ ಪ್ರಮೇಯ ಬರುತ್ತದೆ. ಅಂಥದ್ದು ತಮ್ಮ ಕಾಲದಲ್ಲಿ ಆಗಬಾರದು ಎಂದು ನಿಮಗೆ ಮನವಿ ಮಾಡಿಕೊಳ್ಳುತ್ತೇನೆ. ಎರಡೂ ಕಡೆಯ ಸದಸ್ಯರು ಒಮ್ಮತದಿಂದ ಪಾಸ್ ಮಾಡುವ ಸಂದರ್ಭದಲ್ಲಿ ಏತಕ್ಕೆ ತಾವು ಇದನ್ನು ವಿಚಾರ ಮಾಡಬಾರದು? ಧೈರ್ಯಮಾಡಿದರೆ ಅದು ಆಗುತ್ತದೆ. ನಿಮ್ಮ ಸಹಪಾಠಿಗಳಿಗೆ ಹೇಳಿದರೆ ಅವರೆಲ್ಲಾ ಒಪ್ಪಿಕೊಳ್ಳುತ್ತಾರೆ. ಒಂದು ತಿದ್ದುಪಡಿಯನ್ನು ಈಗಲೇ ತಂದು ಅಧಿಕಾರ ನಿರ್ದೇಶಕರಿಗೆ ಇರುವ ರೀತಿಯಲ್ಲಿ ಮತ್ತು ಅಧಿಕಾರಿಗಳೇ ಅಧ್ಯಕ್ಷರಾಗಿರುವುದಕ್ಕೆ ವಿಚಾರ ಮಾಡಬೇಕೆಂದು ನಾನು ವಿನಂತಿ ಮಾಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿವಸ ಮಾನ್ಯ ಸಹಕಾರಿ ಸಚಿವರು ಒಂದು ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಕೈಹಾಕಿದ್ದಾರೆ. ಅದಕ್ಕೆ ನಾನು ಪ್ರಥಮವಾಗಿ ಅವರನ್ನು ಅಭಿನಂದಿಸುತ್ತೇನೆ. ಮತ್ತು ಈ ಮಸೂದೆಗೆ ತಿದ್ದುಪಡಿಯನ್ನು ತರತಕ್ಕ ಒಂದು ಮನಸ್ಸು ಮಾಡಿದಕ್ಕೆ ಕೂಡ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ನಾವು ಸ್ವಾಗತ ಮಾಡಿರತಕ್ಕ ಈ ಮಸೂದೆಯಲ್ಲೂ ಕೂಡ ಮೂಲಭೂತವಾದಂಥ ಸಮಸ್ಯೆಯನ್ನು ಬಗೆಹರಿಸತಕ್ಕ ಪ್ರಯತ್ನ ಇದರಲ್ಲೂ ಕೂಡ ನಡೆದಿಲ್ಲ. ಮಾನ್ಯ ಬಾಬಾಗೌಡ ಪಾಟೀಲರು ಹೇಳಿದರು ಮತ್ತೆ ಮಾನ್ಯ ಏಕಾಂತಯ್ಯನವರು ಸಹ ಹೇಳಿದರು. ನಮ್ಮ ಕಡೆ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಕಡಿಮೆ. ನಮ್ಮ ತಾಲ್ಲೂಕಿನಲ್ಲೂ ಒಂದು ಸಮಿತಿ ಆಯಿತು. ನಾನು ಅಂದುಕೊಂಡೆ ಏನೋ ರೈತರಿಗೆ ಬಹಳ ಉಪಕಾರ ಇದರಿಂದ ಆಗಿಬಿಡುತ್ತದೆ, ರೈತರು ಬೆಳೆದಿದ್ದಕ್ಕೆಲ್ಲಾ ಯೋಗ್ಯವಾದ ಬೆಲೆ ಸಿಗುತ್ತದೆ ಎಂದು ಏನೂ ಇಲ್ಲ ಅಲ್ಲಿ. ಮಣ್ಣು ಕೂಡ ಸಿಕ್ಕುವುದಿಲ್ಲ, ರೈತರಿಗೆ ರೈಗ್ಯುಲೇಟೆಡ್ ಮಾರ್ಕೆಟ್ ಎಂದರೆ ನನ್ನ ಅರ್ಥದಲ್ಲಿ it is a regulated exploitation. ಅಷ್ಟು ಬಿಟ್ಟರೆ ರೈತರಿಗೆ ಯೋಗ್ಯವಾದ ಬೆಲೆ ಕೊಡುವುದಕ್ಕೆ ಈ ವ್ಯವಸ್ಥೆಯಲ್ಲೂ ಕೂಡ ಅವಕಾಶ ಇಲ್ಲ. ಇರತಕ್ಕ ವ್ಯವಸ್ಥೆಯಲ್ಲಿ ಏನು ನಡೆಯುತ್ತಿದೆ ಎಂದು ಒಂದೆರಡು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಹತ್ತಿ ಬರುತ್ತದೆ. ದೇಶದಲ್ಲೇ ಅಲ್ಲ ಏಷ್ಯಾದಲ್ಲೇ ಹತ್ತಿಗೆ ನಮ್ಮಲ್ಲಿ ಹೆಚ್ಚಿನ ಮಾರುಕಟ್ಟೆ ಇದೆ ಎನ್ನುವ ಮಾತನ್ನು ನಾನು ಕೇಳಿದ್ದೇನೆ. ನಾನು ತಿಳಿದುಕೊಂಡಿರುವ ಪ್ರಕಾರ ಹತ್ತಿಯ ಹರಾಜು ಅಲ್ಲಿ ನಡೆಯುತ್ತದೆ. ಅವರವರು ಖುಶಿಯ ಪ್ರಕಾರ ಅಲ್ಲಿ ಹತ್ತಿ ಬೆಲೆ ನಿಗದಿ ಮಾಡುತ್ತಾರೆ. ಆ ಹತ್ತಿ ಮತ್ತೆ ಎಲ್ಲಿಗೆ ಹೋಗುತ್ತದೆ. ಆ ಹತ್ತಿ ಮಿಲ್ಲಿಗೆ ಹೋಗಿ ಅಲ್ಲಿಂದ ಬಟ್ಟೆಯಾಗಿ ಮಾರಾಟಕ್ಕೆ ಮಾರುಕಟ್ಟೆಗೆ ಹೋಗುತ್ತದೆ. ಈ ಬಟ್ಟೆಗೆ ಬೆಲೆ ಮಿಲ್ಲಿನಲ್ಲಿ ಅಥವಾ ಮಾರಾಟವಾಗುವ ಅಂಗಡಿಗಳಲ್ಲಿ ನಿಗದಿಯಾಗುತ್ತದೆ. ನನ್ನ ಅನುಭವಕ್ಕೆ ಬಂದಿರುವ ಪ್ರಕಾರ ಒಂದು ಮೀಟರ್‌ಗೆ ಇಷ್ಟು ಬೆಲೆ ಎಂದು ಮಾರಾಟ ಮಾಡುವವರಿಂದ ಬೆಲೆ ನಿಗದಿಯಾಗುತ್ತದೆ. ಮಿಲ್‌ನಲ್ಲಿ ಬಟ್ಟೆ ತಯಾರು ಮಾಡುವವರು ಅಥವಾ ಅಂಗಡಿ ಮಾಲೀಕ ಬಟ್ಟೆ ಮೇಲೆ ಮೀಟರ್‌ಗೆ ಇಷ್ಟು ಬೆಲೆ ಎಂದು ಬರೆದಿರುತ್ತಾನೆ. ಬಟ್ಟೆಯ ದರ ಇರುತ್ತದೆ. ಆದರೆ ಹತ್ತಿ ಬೆಳೆದ ರೈತ ಇವತ್ತು ಒಂದು ಕ್ವಿಂಟಾಲಿಗೆ ಇಷ್ಟು ಬೆಲೆ, ಒಂದು ಬೇಲ್‌ಗೆ ಇಷ್ಟು ಬೆಲೆ ಎಂದು ಚೀಟಿಯನ್ನು ಅಂಟಿಸತಕ್ಕ ಹಕ್ಕು ನಮ್ಮ ರೈತರಿಗೆ ಇಲ್ಲ. ನಮ್ಮ ದೇಶದಲ್ಲಿ ಎಲ್ಲಿಯೂ ಇದು ಇಲ್ಲ. ರೈತರು ಬೆಳೆದ ಮಾಲನ್ನು

ಹರಾಜು ಹಾಕುತ್ತಾರೆ. ಆದರೆ ಆ ಮಾಲು ರೈತರಿಂದ ಹೋಗಿ ವಾಪಸ್ಸು ಬಟ್ಟೆಯಾಗಿ ಬಂದಾಗ ಅದರ ಬೆಲೆ ನಿಗಧಿ ಮಾಡಿರುತ್ತಾರೆ. ಹತ್ತಿ ಬೆಳೆದ ರೈತನಿಗೆ ಬೆಲೆ ನಿಗಧಿ ಮಾಡುವ ಅಧಿಕಾರ ಇಲ್ಲ. ಆದರೆ ಬಟ್ಟೆಗೆ ಮಿಲ್ ಮಾಲೀಕ ಅಥವಾ ಅಂಗಡಿಯವನಿಗೆ ಬೆಲೆ ನಿಗಧಿ ಮಾಡುವ ಅಧಿಕಾರ ಇದೆ. ಇವತ್ತು ಈ ಮೂಲಭೂತಶೋಷಣೆ ಏನಿದೆ ಉತ್ಪಾದಕರ ಶೋಷಣೆ ಏನಿದೆ ಇದನ್ನು ಸರಿ ಮಾಡುವುದಕ್ಕೆ ವ್ಯವಧಾನ ಇಲ್ಲ ಎಂದು ನಾನು ವಿಷಾದದಿಂದ ಹೇಳುತ್ತಿದ್ದೇನೆ. ನಮ್ಮ ಚಿಂತಾಮಣಿ ಮತ್ತು ಬಂಗಾರಪೇಟೆಯಲ್ಲಿ ಎರಡು ಕಡೆ ಮಾತ್ರ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಇವೆ. ನಮ್ಮಲ್ಲಿ ಏಕೆ ಹೆಚ್ಚು ಇಲ್ಲ ಎಂದರೆ, ನಮ್ಮಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಜಾಸ್ತಿ ಬೆಳೆಯುತ್ತೇವೆ. ಆದಕ್ಕೆ ಸರಿಯಾದ ರೆಗ್ಯುಲೇಟೆಡ್ ಮಾರ್ಕೆಟ್ ವ್ಯವಸ್ಥೆ ಇಲ್ಲ. ಇಡೀ ದೇಶದಲ್ಲಿ ಅತಿ ಹೆಚ್ಚು ಮಾವಿನ ಹಣ್ಣು ಬೆಳವ ಕ್ಷೇತ್ರ ನಮ್ಮದು. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇದರಲ್ಲಿ ನಡೆಯುತ್ತಿದೆ. ಇದಕ್ಕೆ ರೆಗ್ಯುಲೇಟೆಡ್ ಮಾರ್ಕೆಟ್ ಇಲ್ಲ. ಅಲ್ಲಿ ಒಬ್ಬ ಒಂದು ಸಣ್ಣ ಗುಡಿಸಲನ್ನು ಸುಮಾರು 5 ಸಾವಿರ ಖರ್ಚಿನಲ್ಲಿ ಹಾಕಿಕೊಳ್ಳುತ್ತಾನೆ. ಬರೀ 5 ಸಾವಿರ ಇನ್ವೆಸ್ಟ್ ಮಾಡಿ 5ರಿಂದ 10 ಲಕ್ಷ ರೂಪಾಯಿಗಳ ವ್ಯವಹಾರವನ್ನು ಒಂದು ವರ್ಷದಲ್ಲಿ ಆ ದಳ್ಳಾಳಿದಾರ ಮಾಡುತ್ತಾನೆ. ಈ ದಳ್ಳಾಳಿಗಳಿಗೆ ಯಾರೂ ಹೇಳುವವರು, ಕೇಳುವವರು ಇಲ್ಲ. ಹಣ್ಣನ್ನು ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ತಂದರೆ ಅಲ್ಲಿ ದಳ್ಳಾಳಿ ಏನು ಬೆಲೆ ಫಿಕ್ಸ್ ಮಾಡುತ್ತಾನೋ ಅಷ್ಟು ಬೆಲೆಗೆ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಹಣ್ಣು ಬೆಳೆಗಾರರಿಗೆ, ಅದರಲ್ಲೂ ಮಾವು ಬೆಳೆಯುವವರಿಗೆ ಅನ್ಯಾಯವಾಗುತ್ತಾ ಇದೆ, ಅವರಿಗೆ ತೊಂದರೆಯಾಗುತ್ತಾ ಇದೆ. ತರಕಾರಿ ಬೆಳೆಯತಕ್ಕಂತಹ ರೈತರನ್ನು ಹೇಳುವವರು ಕೇಳುವವರು ಇಲ್ಲದ ಹಾಗಾಗಿದೆ. ರಾತ್ರಿ 2-3 ಗಂಟೆ ಸಮಯದಲ್ಲಿ ಬೆಂಗಳೂರು ಸಿಟಿ ಮಾರುಕಟ್ಟೆಗೆ ತರಬೇಕು ಅಲ್ಲಿ ಯಾವ ವ್ಯವಸ್ಥೆ ಇದೆ ಎಂದರೆ ಯಾವ ನರಕದಲ್ಲೂ ಕೂಡ ಇಲ್ಲ. ಅಂತಹ ವ್ಯವಸ್ಥೆ ಇದೆ. ರೈತರು ಏನಾದರೂ ಅಲ್ಲಿ ಬಂದರೆ ಯಮದೂತರು ಕಾದ ಹಾಗೆ ಕಾಯುತ್ತಿರುತ್ತಾರೆ ರಾತ್ರಿ 2-3 ಗಂಟೆಯಲ್ಲಿ ಚಳಿ, ಮಳೆ ಗಾಳಿ ಸೊಳ್ಳೆ ಎಲ್ಲದರಲ್ಲಿಯೂ ರೈತ ಬಿದ್ದು ಸಾಯುತ್ತಾನೆ. ಅಲ್ಲಿ ಯಾವ ವಿಧವಾದಂತಹ ಸೌಕರ್ಯವೂ ಕೂಡ ರೈತರಿಗೆ ಇಲ್ಲ. ಅಲ್ಲಿರತಕ್ಕಂತಹ ಕೂಲಿಯವರಿಗೆ. ರೆಪ್ರೆಸೆಂಟೇಷನ್ ಕೊಡಿ ಎಂದು ಕೆಲವು ಹೇಳುತ್ತಿದ್ದರು. ಅವರಿಗೆ ಎಲ್ಲಾ ರೆಪ್ರಸೆಂಟೇಷನ್ ಏನಾದರೂ ಕೊಟ್ಟರೆ ರೈತ ಮುಗಿದೇ ಹೋದ. ಮುಕ್ತಿಗೆ ಮೂರೇ ಹೆಜ್ಜೆ. ಅಂತಹ ಪರಿಸ್ಥಿತಿ ಇದೆ. ರೈತನು ತಂದ ಮಾಲನ್ನು ಬಸ್‌ನಿಂದ ಇಳಿಸಿಕೊಳ್ಳುದಕ್ಕಾಗಲಿ ಅಥವಾ ಲಾರಿಯಿಂದ ಮೂಟೆಯನ್ನು ಒಳಕ್ಕೆ ತೆಗೆದುಕೊಳ್ಳುವುದಕ್ಕಾಗಲಿ ಅವನು ಕೇಳಿದಷ್ಟು ಹಣವನ್ನು ಕೊಡಬೇಕು ಅಂತಹ ಪರಿಸ್ಥಿತಿ ಇದೆ. ಅಷ್ಟು ಹಣ ಕೊಟ್ಟರೆ ಮೂಟೆ ಅಲ್ಲಿಗೆ ಹೋಗುತ್ತದೆ ಇಲ್ಲದಿದ್ದರೆ ಅಲ್ಲಿಯೇ ಬಿದ್ದಿರುತ್ತದೆ. ಇದನ್ನು ನೋಡಿ ಬಹಳ ನೋವಾಗುತ್ತದೆ. ರೈತ ತಾನು ಬೆಳೆದಂತಹ ಮಾಲನ್ನು ಮಾರುಕಟ್ಟೆಗೆ ತಂದರೆ ಅವನೇ ಹೊತ್ತುಕೊಂಡು ಹೋಗಬೇಕಾದಂತಹ ಸಂದರ್ಭ ಕೂಡ ಇದೆ. ನಾನೇ ಹೊತ್ತು-ಕೊಂಡು ಹೋಗುವುದಕ್ಕೆ ತಯಾರಿದ್ದೇನೆ. ಏಕೆಂದರೆ ಸಂದರ್ಭ ಹಾಗೆ ಬರುತ್ತದೆ. ಬೆಳೆಗಾರರೇ ಆ ಬೆಳೆಗಳನ್ನು ತೆಗೆದುಕೊಂಡು ಹೋಗಿ ಮಾರುಕಟ್ಟೆಗೆ ಹಾಕತಕ್ಕಂತಹ ಶಕ್ತಿ ಅವರಿಗೆ ಇದೆ. ಅದನ್ನು ಹೊತ್ತುಕೊಂಡು ಹೋಗತಕ್ಕಂತಹ ಪ್ರಯತ್ನ ಕೂಡ ಮಾಡಿದ್ದಾರೆ. ಅವರಿಗೆ ಅವಕಾಶ ಕೊಡುವುದೇ ಇಲ್ಲ. ಅದಕ್ಕೇ ನಾನು ಇದನ್ನು ನರಕಕ್ಕಿಂತ ಕಡೆ ಎಂದು ಹೇಳಿದ್ದುದು. ರೈತನು ತನ್ನ ತರಕಾರಿ ಮಾಲನ್ನು ಬೆಂಗಳೂರಿನ ಮಾರುಕಟ್ಟೆಗೆ ತಂದರೆ 1 ಮಕರಿಗೆ 5 ರೂಪಾಯಿ ಮೂಟೆಗೆ 10 ರೂಪಾಯಿ ಕೂಲಿ ಕೊಡಬೇಕು. ಅಷ್ಟನ್ನು ಕೊಟ್ಟು ಒಳಕ್ಕೆ ತಂದರೆ ತಿರುಗಿ ಅದನ್ನು ಹರಾಜು ಹಾಕುತ್ತಾರೆ. ಅ ವ್ಯವಸ್ಥೆ ಬಿಟ್ಟು ಬೇರೆ ವ್ಯವಸ್ಥೆ ಅಲ್ಲಿ ಇಲ್ಲ. ಎಷ್ಟು ಶ್ರದ್ಧೆಯಿಂದ ವಿಶ್ವಾಸದಿಂದ ರೈತರು ತರಕಾರಿಯನ್ನು , ಬೆಳೆಸಿರುತ್ತಾರೆ. ಆದರೆ

ಆ ಬೆಳೆಯನ್ನು ಬೀದಿಯಲ್ಲಿಟ್ಟು ಹರಾಜು ಹಾಕತಕ್ಕಂತಹ ಪದ್ಧತಿ ಏನು ಇದೆ ಇದು ರೈತನ ಮಾನ ಮರ್ಯಾದೆಯನ್ನು ಹರಾಜು ಹಾಕತಕ್ಕಂತಹ ಒಂದು ಪದ್ಧತಿ ಎಂದು ನಾನು ಹೇಳಲೇಬೇಕಾಗುತ್ತದೆ.

ನಮ್ಮ ಕಡೆ ಹೆಚ್ಚು ತರಕಾರಿಯನ್ನು ಬೆಳೆಯುತ್ತೇವೆ. ಅವರಿಗೆ ಏನು ಸಹಾಯವನ್ನು ತಾವು ಮಾಡಿಕೊಟ್ಟಿದ್ದೀರಿ. ಕೋಲಾರದಲ್ಲಿ ಒಂದು ಕೋಲ್ಡ್ ಸ್ಟೋರೇಜ್ ಇತ್ತು ಇಂದು ಮಾನ್ಯ ಕೆ.ಹೆಚ್ ಪಾಟೀಲರನ್ನು ನಾನು ಸ್ಮರಿಸುತ್ತೇನೆ. ಹಿಂದೆ ಒಂದು ಸಾರಿ ಅವರು ವ್ಯವಸಾಯ ಮಂತ್ರಿಗಳಾಗಿದ್ದರು ಅವರ ಕಾಲದಲ್ಲಿ ಅದನ್ನು ಮಂಜೂರು ಮಾಡಿದ್ದರು. ಈಗಿನ ಪುಟ್ಟಸ್ವಾಮಿಗೌಡರು ಒಂದು ವಾರದ ಹಿಂದೆ 74ರಲ್ಲಿ ಮಂಜೂರಾಗಿರತಕ್ಕಂತಹ ಈ ಕೋಲ್ಡ್ ಸ್ಟೋರೇಜನ್ನು ಚಾಲು ಮಾಡತಕ್ಕಂತಹ ಪರಿಸ್ಥಿತಿಗೂ ಬಂದಿದೆ. 91ರಲ್ಲಿ ಪ್ರಾರಂಭವಾಗಿದೆ. ಸುಮಾರು 15-20 ವರ್ಷಗಳಿಂದ ಅದು ಚಾಲು ಇಲ್ಲದೇ ಇತ್ತು. ಮಾರುಕಟ್ಟೆ ಎಂದರೆ ರೈತನು ಏನು ಬೆಳೆಯುತ್ತಾನೆ ಅವೆಲ್ಲವನ್ನೂ ದಾಸ್ತಾನು ಮಾಡತಕ್ಕಂತಹ ಒಂದು ವ್ಯವಸ್ಥೆ ಇರಬೇಕು. ಆ ವ್ಯವಸ್ಥೆ ಯಾವ ಮಾರುಕಟ್ಟೆಯಲ್ಲೂ ಕೂಡ ಇದ್ದಹಾಗಿಲ್ಲ. ಯಾವ ಮಾರುಕಟ್ಟೆಯಲ್ಲೂ ಕೂಡ ತರಕಾರಿ ಹಣ್ಣುಗಳನ್ನು ಇಡತಕ್ಕಂತಹ ವ್ಯವಸ್ಥೆ ಇಲ್ಲ. ಮಾನ್ಯ ಮಂತ್ರಿಗಳು ಹತ್ತಿ ಕಡಲೇಕಾಯಿ ಹೆಚ್ಚು ಬೆಳೆಯತಕ್ಕಂಥಹ ಪ್ರದೇಶದಿಂದ ಬಂದಿರತಕ್ಕಂತಹವರು. ನಮ್ಮ ಪ್ರದೇಶದಲ್ಲಿ ಇವೆರಡೂ ಕಡಿಮೆ, ಇಲ್ಲವೇ ಇಲ್ಲವೆಂದು ಕೂಡ ಹೇಳಬಹುದು. ನಮ್ಮ ಜಿಲ್ಲೆಯಲ್ಲಿ ಬೆಳೆಯತಕ್ಕಂಥಾದ್ದಕ್ಕೆ ಕೋಲ್ಡ್ ಸ್ಟೋರೇಜ್ ಅತಿ ಅವಶ್ಯಕವಾಗಿ ಬೇಕಾಗಿದೆ. ಪ್ರತಿ ಮಾರುಕಟ್ಟೆಯಲ್ಲೂ ಕೂಡ ಸರ್ವೆ ಮಾಡಿ ಎಷ್ಟು ಸಾಮಾನು ಅಲ್ಲಿ ಉತ್ಪತ್ತಿಯಾಗುತ್ತದೆ ಅಂದರೆ ಬರುತ್ತದೆ ಎಷ್ಟು ಉತ್ಪಾದನೆಯನ್ನು ಅಲ್ಲಿಡತಕ್ಕಂತಹ ವ್ಯವಸ್ಥೆ ಸಾಧ್ಯ ಎಂಬುದನ್ನು ವಿಚಾರ ಮಾಡಿ ಅದನ್ನು ಅಲ್ಲಿ ದಾಸ್ತಾನು ಅಂದರೆ ಕೋಲ್ಡ್ ಸ್ಟೋರೇಜ್‌ನಲ್ಲಿ ದಾಸ್ತಾನಿರತಕ್ಕಂತಹ ವ್ಯವಸ್ಥೆ ಆಗಬೇಕು. ಅಂತಹ ಕೋಲ್ಡ್ ಸ್ಟೋರೇಜ್ ಬೇಕು. ಒಂದೂವರೆ ತಿಂಗಳ ಹಿಂದೆ 50 ಕೆ.ಜಿ. ಆಲೂಗಡ್ಡೆ ಒಂದು ಮೂಟೆ 250 ರೂಪಾಯಿ ಇದ್ದರೆ, ಅದೇ ಆಲೂಗಡ್ಡೆಗೆ ಇವತ್ತು 70ರಿಂದ 80ರವರೆಗೆ ಮಾರಾಟವಾಗುತ್ತದೆ. ಇದರಿಂದಾಗಿ ಅನೇಕ ರೈತರು ತಮ್ಮ ಸರ್ವಸ್ವವನ್ನೂ ಕಳೆದುಕೊಳ್ಳತಕ್ಕಂತಹ ಪರಿಸ್ಥಿತಿ ಬಂದಿದೆ. ಮಾರುಕಟ್ಟೆ ಎಂದರೆ ರೈತರನ್ನು ಶೋಷಣೆ ಮಾಡತಕ್ಕಂತಹ ಮಾರುಕಟ್ಟೆ ಆಗಬಾರದು. ರೈತನು ಬೆಳೆದಿರತಕ್ಕಂತಹ ಮಾಲಿಗೆ ಕಡಿಮೆ ಬೆಲೆಯಾದಾಗ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಗೋಡೌನ್‌ನಲ್ಲಿ ಇಟ್ಟು ಬೆಲೆ ಹೆಚ್ಚಾದಾಗ ಅದನ್ನು ಮಾರುಕಟ್ಟೆಗೆ ಬಿಡತಕ್ಕಂಥಾದ್ದು ಅವಶ್ಯಕತೆ ಇದೆ. ಆದ್ದರಿಂದ ಇಂತಹ ವ್ಯವಸ್ಥೆಗೆ ಹೆಚ್ಚಿನ ಆದ್ಯತೆಯನ್ನು ಸಹಕಾರಿ ಸಚಿವರು ನೀಡಬೇಕೆಂದು ಸಲಹೆ ಕೊಡುತ್ತೇನೆ. ಇನ್ನು ತೂಕದ ವಿಚಾರ ಎಷ್ಟು ಹೇಳಿದರೂ ಕೂಡ ಕಡಿಮೆಯೇ. ತೂಕದಲ್ಲಿ ಖುಷಿ ಬಂದ ಹಾಗೆ 50 ಕೆ.ಜಿ.ಯನ್ನು 40 ಕೆ.ಜಿ.ಯೆಂದು ತೂಕ ಹಾಕತಕ್ಕಂಥಾದ್ದು ಕೂಡ ಇದೆ. ಇಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಮಾರುಕಟ್ಟೆಯಲ್ಲೂ ಕೂಡ ಹೊಸ ರೀತಿಯ ಎಲೆಕ್ಟ್ರಾನಿಕ್ಸ್ ಸ್ಕೇಲ್ಸ್‌ನ್ನು ತಕ್ಷಣದಿಂದ ಅಲ್ಲಿಡತಕ್ಕಂತದ್ದನ್ನು ಜಾರಿಗೆ ತರಬೇಕು. ಮಂಡಿಯಲ್ಲೂ ಕೂಡ ಯಾವ ಪರಿಸ್ಥಿತಿಯಲ್ಲೂ ತೂಕದಲ್ಲಿ ಹೆಚ್ಚೂ ಕಡಿಮೆ ಮಾಡುವುದಕ್ಕೆ ಅವಕಾಶ ಕೊಡಬಾರದು.

4.25 ಪಿ.ಎಂ.

ಅಂತಹ ಒಂದು ತೂಕದ ವ್ಯವಸ್ಥೆಯನ್ನು ಕೂಡ ಜಾರಿಗೆ ತರಬೇಕು ಎನ್ನತಕ್ಕ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕೂಲಿ ಕೆಲಸ ಮಾಡತಕ್ಕವರು ಏನಿದ್ದಾರೆ ಅವರಿಂದ ರೈತರನ್ನು ರಕ್ಷಣೆ ಮಾಡುವ ಕೆಲಸವನ್ನು ತಾವು ಮೊದಲು ಮಾಡಬೇಕು. ತನ್ನ ಮಾಲನ್ನು ತಾನು ಹೊತ್ತುಕೊಂಡು ಹೋಗಲಿಕ್ಕೆ ಅವಕಾಶ ಕೊಡಬೇಕು. ಅನೇಕ ಮಾರ್ಕೆಟ್‌ಗಳಲ್ಲಿ ಅಂಥ ಅವಕಾಶವಿಲ್ಲ. ರೈತರು ಏನಾದರೂ ಅವರ ಮಾಲನ್ನು

ಅವರು ಹೊತ್ತುಕೊಂಡು ಹೋದರೆ ಕೈಕಾಲುಗಳನ್ನು ಮುರಿಸಿಕೊಂಡು ಹೋಗುವಂತಹ ಪರಿಸ್ಥಿತಿ ಅನೇಕ ಕಡೆಗಳಲ್ಲಿದೆ. ನಾನು ಕೊಟ್ಟ ಸಲಹೆಗಳನ್ನು ಗಮನಿಸಿ. ನಾನು ಮಾತನಾಡುವುದಕ್ಕೆ ತಾವು ಅವಕಾಶ್ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ): ಮಾನ್ಯ ಅಧ್ಯಕ್ಷರೆ 1987ರಲ್ಲಿ ಈ ಕಾಯಿದೆಗೆ ತಿದ್ದುಪಡಿ ತಂದನಂತರ ಮಾನ್ಯ ಹಿರಿಯ ಸಚಿವರಾದ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಎಪಿಎಂಸಿ ಕಾಯಿದೆಗೆ ತಿದ್ದುಪಡಿ ಮಂಡಿಸಿರುವುದರನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈವೊಂದು ತಿದ್ದುಪಡಿಯಲ್ಲಿ ಮಾರ್ಕೆಟ್ ಪ್ರದೇಶವನ್ನು ಒಂದು ತಾಲ್ಲೂಕಿಗೆ ಕಡಿಮೆ ಇರದಂತೆ ಮತ್ತು ಜಿಲ್ಲೆಗೆ ಹೆಚ್ಚು ಇರದಂತೆ ನಿರ್ದಿಷ್ಟಪಡಿಸಿರುವುದು ಬಹಳ ಒಳ್ಳೆಯದು. ಅದರ ಜೊತೆಗೆ ಮಾರ್ಕೆಟ್ ಸಮಿತಿಯಲ್ಲಿ ಸದಸ್ಯರುಗಳ ಸಂಖ್ಯೆ 9ರಿಂದ 11ಕ್ಕೆ ಏರಿಸಿ ರೈತ ಪ್ರತಿನಿಧಿಗಳು ಪರಿಸಿಷ್ಟ ಜಾತಿಯವರು ಮತ್ತು ಮಹಿಳಾ ಪ್ರತಿನಿಧಿಗಳು ಇರುವಂತೆ ಮೀಸಲಾತಿಯನ್ನು ಮಾಡಿರುವುದು ಬಹಳ ಉತ್ತಮವಾದುದು. ಕಮೀಷನ್ ಏಜೆಂಟರು ಸದಸ್ಯರು ಇಲ್ಲದಹಾಗೆ ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ. ನಾನು ಒಂದೇ ಒಂದು ಸಲಹೆಯನ್ನು ಕೊಡಬೇಕೆಂದು ವಿಚಾರ ಮಾಡಿದ್ದೇನೆ. ರೈತರ ಶೋಷಣೆ ತಪ್ಪಬೇಕು ಜೊತೆಗೆ ಅವರು ಬೆಳೆದಂತಹ ಬೆಳೆಗೆ ಯೋಗ್ಯವಾದ ಧಾರಣೆಗಳು ಸಿಗಬೇಕಾಗಿದೆ. ಮಾನ್ಯ ಹಿರಿಯ ಸದಸ್ಯರಾದ ಜಾಲಪ್ಪನವರು

(ಶ್ರೀ ಬಿ.ಎಂ. ಇದಿನಬ್ಬನವರು ಅಧ್ಯಕ್ಷ ಪೀಠಕ್ಕೆ ಬಂದರು)

ಸಹಕಾರ ಸಚಿವರಾಗಿದ್ದಾಗ ಒಂದು ಕಾನೂನು ಮಾಡಿದ್ದರು. ಅವೊಂದು ಕಾನೂನಿನಲ್ಲಿ ದಳ್ಳಾಳಿಗಳು ಕಮೀಷನ್ ಪಡೆಯುವ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಖರೀದಿದಾರರು ಶೇಕಡ 2ರಷ್ಟು ಕಮೀಷನ್‌ನನ್ನು ರೈತರು ಕೊಟ್ಟಂತಹ ಮಾಲುಗಳ ಮೇಲೆ ತೆಗೆದುಕೊಳ್ಳಬೇಕೆಂದು ಮಾಡಿದರು. ರೈತರಿಗೆ ಒಳ್ಳೆಯದಾಗಬೇಕೆನ್ನುವ ಸದುದ್ದೇಶದಿಂದ ಈವೊಂದು ಕಾನೂನನ್ನು ತಂದರು. ಇವತ್ತು ದುರದೃಷ್ಟವಶಾತ್ ನಮ್ಮ ಗ್ರಾಮೀಣ ಭಾಗದಲ್ಲಿ ಏನಾಗುತ್ತಿದೆ ಎಂದರೆ ಶೇಕಡ 2 ಪರ್ಸೆಂಟ್ ಕಮೀಷನ್ ಪಟ್ಟಿಯನ್ನು ದಳ್ಳಾಳಿಗಳ ಕಡೆಯಿಂದ ಪಡೆಯುವ ವ್ಯವಸ್ಥೆ ಇತ್ತು. ಆದರೆ ಈಗ ಏನಾಗಿದೆ ಅಂದರೆ 2 ಪರ್ಸೆಂಟ್ ಕಮೀಷನ್‌ನನ್ನು ಖರೀದಿದಾರರಿಂದ ತೆಗೆದುಕೊಳ್ಳುವುದರ ಜೊತೆಗೆ ದಳ್ಳಾಳಿಗಳು ಕೂಡ ಇವತ್ತು ಪಟ್ಟಿಯನ್ನು ಕೊಡುವಾಗ ಲೆಕ್ಕವಿಲ್ಲದೆ 6 ಪರ್ಸೆಂಟ್, 7 ಪರ್ಸೆಂಟ್, 8 ಪರ್ಸೆಂಟ್ 9-10 ಪರ್ಸೆಂಟ್‌ವರೆಗೂ ಹಣವನ್ನು ಪಡೆಯತಕ್ಕ ವ್ಯವಸ್ಥೆಯನ್ನು ನೋಡಿದರೆ ರೈತರ ಶೋಷಣೆಯಾಗುತ್ತಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ಭಾಗದಲ್ಲಿ ಬಿಸಿಹೆಚ್ ಹತ್ತಿ ವಿಶೇಷವಾಗಿ ಬಹಳಷ್ಟು ಬೆಳೆದರೂ ಅದನ್ನು ಮಾರ್ಕೆಟಿಗೆ ಹೊಡೆದಾಗ ರೈತರಿಗೆ ಹಣದ ಅವಶ್ಯಕತೆ ಇದ್ದಾಗ ನೂರು ರೂಪಾಯಿಗೆ ಹತ್ತು ರೂಪಾಯಿ ಬಡ್ಡಿಯನ್ನು ಪಡೆದುಕೊಂಡು ದಳ್ಳಾಳಿಗಳನ್ನು ಹಣವನ್ನು ಕೊಟ್ಟಂತಹ ಉದಾಹರಣೆಗಳನ್ನು ನಾವು ನೋಡಿದ್ದೇವೆ. ಇವತ್ತು ರೈತರು ಮುಂಗಾರಿ ಮಳೆಯಾಗುವ ಪೂರ್ವದಲ್ಲಿ ಅಂದರೆ ಮೇ ಜೂನ್ ತಿಂಗಳಿನಲ್ಲಿ ರೈತರು ದಳ್ಳಾಳಿಗಳ ಹತ್ತಿರ ಹೋಗಿ ಬಡ್ಡಿ ವ್ಯವಹಾರ ಮಾಡುತ್ತಿದ್ದಾರೆ. ಅವರು ನೂರು ರೂಪಾಯಿಗೆ ಒಂದು ತಿಂಗಳಿಗೆ ಶೇಕಡ 3 ಮತ್ತು 5ರಷ್ಟು ಬಡ್ಡಿಗೆ ಹಣವನ್ನು ತೆಗೆದುಕೊಂಡು ಬಡ್ಡಿ ಮತ್ತು ಅಸಲಿಗೆ ತಾವು ಬೆಳೆದ ಮಾಲನ್ನು ಕೊಟ್ಟು ಬರೀ ಕೈಯಲ್ಲಿ ಬರುವುದನ್ನು ನೋಡುತ್ತಿದ್ದೇವೆ. ಬೆಳೆದಂತಹ ಫಸಲನ್ನು ಮಾರಿ ಕೆಲವೊಂದು ಸಾರಿ ತಮ್ಮ ಮನೆಗಳಿಗೆ ಹಾಗೆಯೇ ಹೋಗುವಂಥ ಪ್ರಸಂಗಗಳನ್ನು ನಾವು ನೋಡುತ್ತಿದ್ದೇವೆ.

ರೈತರ ಹಣವನ್ನು ದಳ್ಳಾಳಿಗಳು ಪಡೆದುಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗದಿದ್ದರೆ ಮಾನ್ಯ ಹಿರಿಯ ಸದಸ್ಯರು ಸಲಹೆ ಮಾಡಿದಂತೆ ರೈತರು ಮಾರಾಟ ಮಾಡಿದ ಮಾಲಿನ ಬೆಲೆಯನ್ನು ಮಾರ್ಕೆಟ್‌ನಲ್ಲಿ ಬರತಕ್ಕ ಹಣ ಏನಿದೆ ಅದನ್ನು ಚೆಕ್ ಮುಖಾಂತರ ನೀಡಿದರೆ ರೈತರಿಗೆ ಒಳ್ಳೆಯದಾಗುತ್ತದೆ ಎನ್ನುವ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತೇನೆ. ರೈತ ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದ ಬೆಲೆ ಸಿಗಬೇಕೆನ್ನುವ ಕೂಗು ಬಹಳ ದಿವಸಗಳಿಂದ ಇದೆ. ಅನೇಕ ರಾಜಕೀಯ ಪಕ್ಷಗಳು ಇದರ ಬಗ್ಗೆ ಚಿಂತನೆಯನ್ನು ಮಾಡುತ್ತಿವೆ. ಒಂದು ಯೋಗ್ಯ ಬೆಲೆಯನ್ನು ನಿಗದಿಪಡಿಸಿದಾಗ ಅದು ಸರಿಯಾದ ರೀತಿಯಲ್ಲಿರಬೇಕು ಬೆಲೆ ನಿಗದಿಪಡಿಸುವ ಸಮಿತಿ ಕೇಂದ್ರ ಸರ್ಕಾರದ್ದು ಇರುತ್ತದೆ. ಆ ತಜ್ಞರ ಸಮಿತಿಯನ್ನು ರಾಷ್ಟ್ರಮಟ್ಟದಲ್ಲಿ ಮಾಡಬೇಕಾಗುತ್ತದೆ. ರಾಜ್ಯದಲ್ಲಿಯೂ ಕೂಡ ಉತ್ತಮ ಸಲಹೆಗಳನ್ನು ನಾವು ಕೊಡಬೇಕಾಗುತ್ತದೆ. ಆದರೆ ರೈತನ ಬೆಳೆಗಳನ್ನು ಮಾರ್ಕೆಟ್ಟಿನಲ್ಲಿ ಇಡಲಿಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಹೇಳಿದಂತೆ ಮಾರ್ಕೆಟ್‌ಗಳಲ್ಲಿ ದಾಸ್ತಾನು ಇಡಲಿಕ್ಕೆ ಯಾವುದೇ ವ್ಯವಸ್ಥೆ ಕೂಡ ಇಲ್ಲ. ಪ್ರತಿಯೊಂದು ಮಾರ್ಕೆಟ್‌ನಲ್ಲಿಯೂ ರೈತ ಬೆಳೆದಂತಹ ಬೆಳೆಗಳನ್ನು ಇಡಲಿಕ್ಕೆ ವ್ಯವಸ್ಥೆಯಾಗಬೇಕು.

ರೈತರು ಸಾಲಸೋಲಗಳನ್ನು ಮಾಡಿ ಬೆಳೆಗಳನ್ನು ಬೆಳೆದು ಅದನ್ನು ಸೂಕ್ತ ಸಮಯದಲ್ಲಿ ಮಾರಾಟ ಮಾಡಲಿಕ್ಕೆ ಸರಿಯಾದ ವ್ಯವಸ್ಥೆಯಿರಬೇಕು. ರೈತರು ತಮ್ಮ ಮನೆಗಳಲ್ಲಿ ಮಾಲನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಅವರಿಗೆ ಯೋಗ್ಯ ಬೆಲೆ ಸಿಗುವವರೆಗೆ ಮಾರ್ಕೆಟ್ಟಿನಲ್ಲಿಯೇ ಮಾಲನ್ನು ಇಡಲಿಕ್ಕೆ ವ್ಯವಸ್ಥೆ ಮಾಡಬೇಕು ನಮ್ಮ ಮಾರ್ಕೆಟ್ ಕೇಂದ್ರಗಳಲ್ಲಿರತಕ್ಕ ಬ್ಯಾಂಕುಗಳಿಂದ ಬಡ್ಡಿ ರೂಪದಲ್ಲಿ ಅವರ ಮಾಲು ಮಾರಾಟವಾಗುವವರೆಗೆ ಹಣವನ್ನು ಅಡ್ವಾನ್ಸ್ ಕೊಡತಕ್ಕ ವ್ಯವಸ್ಥೆಯಾಗಬೇಕೆಂದು ಹೇಳುತ್ತೇನೆ. ಕೊನೆಯಪಕ್ಷ ಅವರ ಮಾಲು ಒಂದು ರೂಪಾಯಿ ಆದರೆ ಅದಕ್ಕೆ ನಾಲ್ಕಾಣೆಯಾದರೂ ಸಾಲ ಕೊಡತಕ್ಕಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗುತ್ತದೆ ಜೊತೆಗೆ ನಾವು ಮಹಾರಾಷ್ಟ್ರ ಸರ್ಕಾರದಲ್ಲಿ ನೋಡಿದ್ದೇವೆ. ಅಲ್ಲಿ ಕೋ-ಆಪರೇಟಿವ್ ಮಾರ್ಕೆಟಿಂಗ್. ಫೆಡರೇಶನ್ಸ್ ಇರುವುದರಿಂದ ಕಬ್ಬನ್ನು ಬೆಳೆಯತಕ್ಕಂಥ ಅನೇಕ ರೈತರು ಅತ್ಯುತ್ತಮವಾದ ಆರ್ಥಿಕ ಪರಿಸ್ಥಿತಿಯಿಂದ ಮುಂದೆ ಬಂದು ಶ್ರೀಮಂತರಾಗಿದ್ದಾರೆ. ಇದನ್ನು ಕೂಡ ನಾವು ಹೋಲಿಕೆ ಮಾಡಿ ನೋಡಬೇಕಾಗಿದೆ ಟೀ ಬೋರ್ಡ್ ಇದೆ ಕಾಫಿ ರಬ್ಬರ್ ಬೋರ್ಡ್ ಇದೆ. ಹೀಗೆ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬೆಳೆಯತಕ್ಕಂಥ ಮೆಣಸಿನಕಾಯಿ ಇರಲಿ ಅಥವಾ ಹತ್ತಿ ಇರಲಿ ಜೋಳ ಇರಲಿ ಕಾಫಿ ಟೀಗೆ ಬೋರ್ಡ್‌ಗಳು ಇರುವಂತೆ ಇವುಗಳಿಗೂ ಬೋರ್ಡ್‌ಗಳನ್ನು ಮಾಡಿ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್‌ಗಳನ್ನು ರೈತರನ್ನು ಒಳಗೊಂಡಂತೆ ಈ ಸಮಿತಿಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಎಂಬ ಅಭಿಪ್ರಾಯವನ್ನು ಹೇಳಿ ಮಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ): ಮಾನ್ಯ ಅಧ್ಯಕ್ಷರೇ ನನ್ನ ದುರಾದೃಷ್ಟಕ್ಕೆ ಇದನ್ನು ನಾನು ಸರಿಯಾಗಿ ಓದಿಯೇ ಇಲ್ಲ ಊರಲ್ಲಿ ಇರಲಿಲ್ಲ ಈಗ ತಾನೇ ಬಂದು ನೋಡುತ್ತಿದ್ದೇನೆ. ಎರಡು-ಮೂರು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇದರಲ್ಲಿ ಸರ್ಪ್ಲಸ್ ಫಂಡ್ಸ್ ಕೊಡಬೇಕು ಎಂದು ಇಟ್ಟಿದ್ದೀರಿ ಅದನ್ನು ತೆಗೆದೇ ಬಿಡಬೇಕು. ಲಾಸ್ ಆಯಿತೆಂದರೆ ಯಾರು ಕೊಡುವುದು? ಇದೆಲ್ಲ ತೊಂದರೆ ಏಕೆ ಆಯಿತು ಎಂದರೆ ಮಾರ್ಕೆಟಿಂಗ್ ಕಮಿಟಿಗಳಲ್ಲಿ ದುಡ್ಡು ಹೆಚ್ಚಾದದ್ದೇ ಅದರ ಮೇಲೆ ನಿಮ್ಮದೆಲ್ಲಾ ಕಣ್ಣು ಬಿತ್ತು. ನಾನು ಒಂದು ಪ್ರಾರ್ಥನೆ ಮಾಡುತ್ತೇನೆ ಸ್ವಾಮಿ ನಾವು ಮಾರ್ಕೆಟ್ ಫೀಯನ್ನು ಎರಡು ರೂಪಾಯಿಯಿಂದ

ಒಂದು ರೂಪಾಯಿಗೆ ಇಳಿಸಿದ್ದೇವೆ ಇರುವ ಹಣವನ್ನು ರೈತರಿಗಾಗಿ ಉಪಯೋಗಿಸಿ ಯಾರಿಗೋ ಕೊಡುತ್ತೇವೆ ಎಂದರೆ ಹಣ ಉಳಿಯುವುದಿಲ್ಲ I am sure even though you make a legislation, there is already a Supreme Court decision that this shall not be diverted to any other thing however laudable the idea may be. Our legislation should not overhead the decision of the Supreme Court.

ಈಗಾಗಲೆ ಅದು ಆಗಿದೆ. ಪಂಜಾಬಿನವರು ಸುಪ್ರೀಂ ಕೋರ್ಟಿಗೆ ಹೋದಾಗ ಅವರು ಹೇಳಿದ್ದಾರೆ ಈ ಮಾರ್ಕೆಟ್ ಫೀಯನ್ನು ಏನು ವಸೂಲು ಮಾಡುತ್ತಿದ್ದಾರೆ ಅದನ್ನು ರೇತರ ಮಾರ್ಕೆಟ್ ಯಾರ್ಡ್‌ನ್ನು ಡೆವಲಪ್ ಮಾಡುವುದಕ್ಕೆ ಮತ್ತು ಬೇರೆ ಬೇರೆ ಅನುಕೂಲಗಳನ್ನು ಕೊಡುವುದಕ್ಕೆ ಉಪಯೋಗ ಮಾಡಬೇಕೇ ಹೊರತು ಎಲ್ಲೆಲ್ಲೋ ಯಾವುದಕ್ಕೋ ಉಪಯೋಗಿಸುವುದಕ್ಕೆ ಪ್ರಾವಿಶನ್ ಇಲ್ಲ ಎಂದು ದಯಮಾಡಿ ಈ ಒಂದು ಕ್ಲಾಸನ್ನು ತೆಗೆಯಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ ಎರಡನೇಯದಾಗಿ ನಮ್ಮ ಸರ್ಕಾರದಲ್ಲಿ ರೈತರಿಂದ ಯಾವುದೇ ರೀತಿಯ ಕಮೀಷನ್ ವಸೂಲು ಮಾಡಬಾರದು ಮತ್ತು ಮಾರ್ಕೆಟ್ ಯಾರ್ಡ್‌ನಲ್ಲಿ ರೈತರ ಮಾಲು ಬಂದಮೇಲೆ ಮಾಲನ್ನು ವರ್ತಕರ ಅಂಗಡಿಗೆ ಇಳಿಸಿದ ಮೇಲೆ ಯುವುದೇ ಖರ್ಚನ್ನು ಕೂಡ ವಸೂಲು ಮಾಡಬಾರದು ಎಂದು ಆಕ್ಟ್ ಮಾಡಿದ್ದೆವು. ನಮ್ಮ ಸ್ನೇಹಿತರು ಏನೋ ಮಾತನಾಡುವಾಗ ಹೇಳಿದರಂತೆ ಜಾಲಪ್ಪನವರ ಕಮೀಷನ್ ಎಂದು. ನಾನು ರೈತರಿಗೂ ಸಹಾಯ ಆಗಲಿ ಎಂದು ಮಾಡಿದೆ. ಆದರೆ ದುರಾದೃಷ್ಟಕ್ಕೆ ನಮ್ಮ ಅಧಿಕಾರಿಗಳು ಸಬ್‌ಸಿಕ್ವೆಂಟ್ ಆಗಿ ಬಂದ ಸರ್ಕಾರ ಅದನ್ನು ಪ್ರೊಟೆಕ್ಟ್ ಮಾಡಲಿಲ್ಲ. ಅವರು ಏನಾದರೂ ಹೇಳಿಕೊಳ್ಳಲಿ. ನಾನು ಮಾಡಿದ್ದುದು ಒಳ್ಳೆಯ ಉದ್ದೇಶದಿಂದ ರೈತರ ಹಿತರಕ್ಷಣೆಯಾಗಬೇಕು ಎನ್ನುವ ದೃಷ್ಟಿಯಿಂದ ಅದನ್ನು ಜಾರಿಕೊಡದಿದ್ದರೆ ಅದು ಆ ಸರ್ಕಾರದ ದೌರ್ಬಲ್ಯ. ನೀವು ಅಷ್ಟೇನೆ ಮತ್ತು ನಾನು ಬಿಟ್ಟುಹೋದಮೇಲೆ ಬಂದ ಸರ್ಕಾರಗಳೂ ಅಷ್ಟೇನೆ. ನಾನು ಬೇರೆ ಪೋರ್ಟ್‌ಫೋಲಿಯೋಗೆ ಹೋದಮೇಲೆ ಬಂದವರು ಯಾರೂ ಕೂಡ ಇದನ್ನು ಎನ್‌ಫೋರ್ಸ್ ಮಾಡಲಿಲ್ಲ.

ಒಬ್ಬರು ಮಾನ್ಯ ಸದಸ್ಯರು: ಅದನ್ನು ರೆಕಾರ್ಡಿನಿಂದ ತೆಗೆಸಲಿಕ್ಕೆ ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ: ತೆಗೆಸಿದ್ದಾರೆ. ಎಂದರೆ ಸಂತೋಷ ರೆಕಾರ್ಡಿನಲ್ಲಿ ಇದ್ದರೂ ನನಗೇನೂ ಅವಮಾನ ಇಲ್ಲ. ಅದು ಸರ್ಕಾರದ ದೌರ್ಬಲ್ಯ It is a weekness of this Government..

SRI K.H.PATIL: If it is on record of Jalappa Commission, I welcome it. What is wrong? It is a great reward for him, Jalappa has done in the interest of the farmers.

SRI R.L.JALAPPA: I have done to save the farmers from the exploitation. 10 ಪರ್ಸೆಂಟ್ ವಸೂಲು ಮಾಡುತ್ತಾರೆ. ಯಾರಾದರೂ ಕೇಳುತ್ತಾರೆಯೇ ನಿಮ್ಮ ಅಧಿಕಾರಿಗಳು ಕೇಳುತ್ತಾರೆಯೇ? ಚುನಾವಣೆ ಮಾಡಿ ಎಂದು ಹೇಳಿದರೆ ಏನೇನೊ ನೆಪ ಹೇಳಿಕೊಂಡು ಬರುತ್ತೀರಿ. ಆಡಳಿತ ಮಂಡಲಿ ಇಲ್ಲವೆಂದು ತಾವು ಹೇಳಿದಿರಿ. ಅಧಿಕಾರಿಗಳಿಗಿಂತ ಆಡಳಿತ ಮಂಡಲಿ ಎಷ್ಟೇ ಹೋಪ್‌ಲೆಸ್ ಆಗಿದ್ದರೂ ಬೆಟರ್. ಅಧಿಕಾರಿಗಳು ಹೋಗಿ ಗೇಟಿನಲ್ಲಿ ನಿಂತು ಅವರು ಮಾಡುವುದಕ್ಕಾಗುವುದಿಲ್ಲ. ಅವರು ಬೆಳೆದು ಬಂದ ದಾರಿಯೇ ಒಂದು ತರಹ. ದಯಮಾಡಿ ಕೂಡಲೇ ಚುನಾವಣೆಗೆ ವ್ಯವಸ್ಥೆ ಮಾಡಿ. ಇನ್ನು ಮೇಲಾದರೂ ಸ್ವಲ್ಪ ಪೋರ್ಸ್ ಮಾಡಿ ರೈತರನ್ನು ಶೋಷಣೆಯಿಂದ ತಪ್ಪಿಸಿ. ಬರೀ ಅಮೆಂಡ್‌ಮೆಂಟ್ ಮಾಡಿದರೆ ಇದಕ್ಕೆ ಬೆಲೆ ಇಲ್ಲ. ನಾನೂ ಕೂಡ ಹಿಂದೆ ಅನೇಕ ಅಮೆಂಡ್‌ಮೆಂಟ್ ಮಾಡಿ ಸುಮ್ಮನಾಗಿದ್ದೇನೆ. ತಮಗೂ

ಗೊತ್ತಿದೆ ನಾನು ಎಷ್ಟು ಕಷ್ಟಪಟ್ಟಿದ್ದೇನೆ ಎಂಬುದು. ನಾನು ಅಮೆಂಡ್‌ಮೆಂಟ್ ತಂದಾಗ ತಾವೇ ಇಲ್ಲಿ ಕುಳಿತುಕೊಂಡು ಹೇಳಿದಿರಿ ಅವಿರೋಧವಾಗಿ ಒಪ್ಪಿಕೊಂಡಿದ್ದೇವೆ. ಇದರ ಮೇಲೆ ಚರ್ಚೆಬೇಡ ಒಪ್ಪಿಕೊಳ್ಳೋಣ ಎಂದು ಅದೇ ರೀತಿ ನಾವು ಮಾಡಿದೆವು. ದುರಾದೃಷ್ಟವಶಾತ್ ನಮ್ಮ ರೈತರಿಗೆ ಪ್ರಯೋಜನವಾಗಲಿಲ್ಲ. ದಯಮಾಡಿ ಇದರ ಕಡೆ ಗಮನ ಕೊಡಬೇಕು.

+ ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಸಭಾಧ್ಯಕ್ಷರೇ ಶ್ರೀಮಾನ್ ಮಂಜುನಾಥ್‌ರವರಿಂದ ಪ್ರಾರಂಭವಾದ ಚರ್ಚೆ ಮಾನ್ಯ ಜಾಲಪ್ಪರವರೆಗೆ ಸುಮಾರು 12 ಜನ ಸದಸ್ಯರು ಮಾತನಾಡಿದ್ದಾರೆ. 12 ಜನ ಮಾತನಾಡಿದುದರಲ್ಲಿ ಒಬ್ಬರೂ ಸಹ ಈ ತತ್ವವನ್ನಾಗಲೀ ಕಾನೂನನ್ನಾಗಲೀ ಅಥವಾ ಈ ತಿದ್ದುಪಡಿಯನ್ನಾಗಲೀ ವಿರೋಧಿಸಲಿಲ್ಲ. ಇದು ನಿಜವಾಗಿಯೂ ಹೆಮ್ಮೆಯ ವಿಷಯ. ಅವರೆಲ್ಲರಿಗೂ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ರೈತರ ಹಿತವನ್ನು ಗಮನಿಸಿ ಅನೇಕ ನ್ಯೂನತೆಗಳು ನಮ್ಮಲ್ಲಿ ಕಂಡುಬಂದರೂ ಸಹ ಈ ನ್ಯೂನತೆಗಳನ್ನು ನುಂಗಿಕೊಂಡು ಈ ಕಾನೂನನ್ನು ಹೆಚ್ಚು ಬೆಂಬಲಿಸಿದ್ದಾರೆಂದು ನಾನು ಭಾವನೆ ಮಾಡುತ್ತೇನೆ. ನಾನು ಸಮಯದ ಅಭಾವದಿಂದ ಪೂರ್ತಿಯಾಗಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಕೆಲವು ಮಾತುಗಳನ್ನು ನಿರ್ಧಾಕ್ಷಿಣ್ಯವಾಗಿ ಹೇಳಲೇಬೇಕಾಗುತ್ತೆ. ಇವತ್ತು ನಮ್ಮ ಕಾನೂನಿನಲ್ಲಿ ಬೈಲಾ ಫ್ರೇಮ್ ಮಾಡುವುದಕ್ಕೆ ಅಧಿಕಾರ ಉಂಟು. ಸೆಕ್ಷನ್ 65ರ ಕೆಳಗೆ ಬೈಲಾ ಫ್ರೇಮ್ ಮಾಡುತ್ತೇವೆ. ಬೈಲಾದಲ್ಲಿ ಮೊಡ್ ಆಫ್ ಪೇಮೆಂಟ್ ಹೇಗೆ ಎನ್ನುವುದನ್ನು ಪ್ರಿಸ್ಕ್ರೈಬ್ ಮಾಡುತ್ತಾರೆ. ಈ ಮೋಡ್ ಆಫ್ ಪೇಮೆಂಟ್ ಪ್ರಿಸ್ಕ್ರೈಬ್ ಮಾಡುವಾಗ ಅನೇಕ ಸದಸ್ಯರು ಹೇಳಿದಂಥ ಸೂಚನೆಗಳನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಮಾನ್ಯ ಬನ್ನಿಕೋಡ್‌ರವರು, ಮಾನ್ಯ ಕುನ್ನೂರ್‌ರವರು, ಮಾನ್ಯ ಮಲ್ಲಾರಿಗೌಡ ಪಾಟೀಲರು, ಮಾನ್ಯ ಮಂಜುನಾಥ್‌ರವರೂ ಹೇಳಿದ್ದಾರೆ. ಇವೆಲ್ಲಾ ಮಾತುಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಯಾವ ರೀತಿಯಾಗಿ ಮಾಡುವುದರಿಂದ ವ್ಯಾವಹಾರಿಕವಾಗಿ ಕಾರ್ಯಚರಣೆ ನಡೆಯುತ್ತದೆ ಎನ್ನುವುದನ್ನು ನಾವು ನೋಡಬೇಕು, ನಿಜ. ಮಾರ್ಕೆಟ್ ಕಮಿಟಿಯಲ್ಲಿ ಅನೇಕ ದೋಷಗಳು ಇವೆ. ಒಂದು ಬಹಳ ಮೂಲಭೂತವಾದ ವಿಷಯವನ್ನು ಶ್ರೀಮಾನ್ ಏಕಾಂತಯ್ಯನವರು ಎತ್ತಿದರು. ರೈತನ ಮಾಲು ಪೇಟೆಗೆ ಬಂದಾಗ ಸರಿಯಾಗಿ ನಿಯಂತ್ರಣ ಆಗುತ್ತದೆಯೇ ರೈತನ ಮಾಲಿಗೆ ತೂಕ ಸರಿಯಾಗಿ ಆಗುತ್ತದೆಯೇ ಬಿಡ್ಡಿಂಗ್ ಆಗುತ್ತಿದೆಯೇ ಎಂದು ರೈತ ಮಾರ್ಕೆಟಿಗೆ ಬರುವುದಕ್ಕೆ ಬದಲಾಗಿ ಬೇರೆ ಕಡೆಗೆ ಏತಕ್ಕಾಗಿ ಹೋಗುತ್ತಾನೆ ಎನ್ನುವ ಪ್ರಶ್ನೆ ಕೇಳಿದ್ದಾರೆ. ಅದರ ಜೊತೆಗೆ ಮಾರ್ಕೆಟಿನಲ್ಲಿ ದುರ್ವ್ಯವಹಾರ ಬಹಳಷ್ಟು ನಡೆಯುತ್ತಿದೆ. ಅಧಿಕಾರಸ್ಥರು ಮುಲಾಜಿಯಾಗುತ್ತಿದಾರೆ ರೈತರ ಶೋಷಣೆಯನ್ನು ಮಾಡುತ್ತಿದ್ದಾರೆ. ರೈತರ ಶೋಷಣೆ ಸ್ವಲ್ಪ ಹೆಚ್ಚಾಯಿತು ಸ್ವಲ್ಪ ಕಡಿಮೆಯಾಯಿತು. ಯಾವ ಸರ್ಕಾರ ಬಂದರೂ ಇದು ನಿರಾತಂಕವಾಗಿ ನಡೆದಿದೆ. ಎನ್ನುವ ಮಾತನ್ನು ಹೇಳಿದ್ದಾರೆ. ಇದು ವಿಷಾದನೀಯ. ನಾನು ಗಮನಿಸಿದೆ ಇದಕ್ಕೆ ಯಾವುದೇ ಕಾನೂನು ಮಾಡಿದರೂ ಮುಗಿಯುವುದಿಲ್ಲ. ಈ ಕಾರ್ಯಕ್ರಮ ಬಗೆಹರಿಯಬೇಕಾದರೆ ಕಾರ್ಯಾಚರಣೆ ಅತ್ಯಂತ ದಕ್ಷತೆಯಿಂದ ಇರಬೇಕು. ಈ ಕಾರ್ಯಾಚರಣೆಗೆ ಸಮಸ್ತ ಜನತೆಯ ಸಹಕಾರ ಬೇಕು. ಇನ್ನು ಕೆಲವು ಮಾತುಗಳನ್ನು ನಾನು ಉದಾಹರಣೆಯ ರೂಪದಿಂದ ಹೇಳುತ್ತೇನೆ. ಮಾನ್ಯ ಏಕಾಂತಯ್ಯನವರು ಇಲ್ಲ ಅವರು ಏನು ಹೇಳಿದರು ಎಂದರೆ ತಮಗೆ ಫೀ ಕಡಿಮೆಯಾಗುತ್ತಿದೆ ಎಂಬ ಮಾತನ್ನು ಹೇಳಿದರು ಕಡಿಮೆಯಾಗುತ್ತಿದೆ ಇಲ್ಲ ಎಂದು ಹೇಳುವುದಿಲ್ಲ. ಇವತ್ತು ಎಷ್ಟು ಮಾರ್ಕೆಟ್ ಫೀ ಬರಬೇಕಾಗುತ್ತೋ ಅಷ್ಟು ಬರುತ್ತಿಲ್ಲ. ಹತ್ತನೆ ಒಂದು ಅಂಶ ಬರಬಹುದು ಎಂದು ಹೇಳಿದೆ. ಅಷ್ಟೂ ಸಹಿತ ಬರುವುದಿಲ್ಲ ಎಂದು ಅವರು ಹೇಳುತ್ತಾರೆ. ಕೆಲವು ಮಾರ್ಕೆಟ್‌ನಲ್ಲಿ ಬರುವುದಿಲ್ಲ. ಕೆಲವು ಮಾರ್ಕೆಟ್‌ನಲ್ಲಿ ಪೂರ್ತಿಯಾಗಿ ಬರುತ್ತಿದೆ. ಆದರೆ ಅಂಕಿ ಸಂಖ್ಯೆ ಮೇಲೆ ನೋಡಿದರೆ

1986-87ರಲ್ಲಿ 13 ಕೋಟಿ, 87-88 ರಲ್ಲಿ 17 ಕೋಟಿ 72 ಲಕ್ಷ, 88-89 ರಲ್ಲಿ 19 ಕೋಟಿ 3 ಲಕ್ಷ, 90-91 ರಲ್ಲಿ 21 ಕೋಟಿ 30 ಲಕ್ಷ, ಮಾರ್ಕೆಟ್ ಸೆಸ್ ವಸೂಲಾಗಿದೆ. ಈ ವರ್ಷ ಆಗಸ್ಟ್‌ತನಕ 10 ಕೋಟಿ 56 ಲಕ್ಷ ವಸೂಲಾಗಿದೆ. ಇದು ವಾಸ್ತವಿಕವಾದ ರಿಕವರಿ ಆಫ್ ಸೆಸ್. ಹಾಗಾದರೆ ರಿಕವರಿ ಆಫ್ ಸೆಸ್ ಆದಕೂಡಲೇ ನಮ್ಮದ್ದೇನೂ ದಕ್ಷತೆ ಹೆಚ್ಚಾಗಿದೆ ಎಂದು ನಾನು ಒಪ್ಪುವುದಿಲ್ಲ. ನಿಜವಾಗಿ ದಕ್ಷತೆ ಯಾವಾಗ ಆಗುತ್ತದೆ ಎಂದರೆ ಮಾರುಕಟ್ಟೆಯಲ್ಲಿ ಬರತಕ್ಕಂಥ ರೈತನ ಮಾಲಿಗೆ ಉತ್ತಮವಾದ ಧಾರಣೆ ಯಾವಾಗ ಸಿಗುತ್ತದೆ ಆಗ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ಸಂಪೂರ್ಣವಾದ ಹೊಣೆಗಾರಿಕೆ ಪೂರ್ಣವಾಗುತ್ತದೆ. ಅದು ಆಗದ ವಿನಹ ಸೆಸ್ ಕಲೆಕ್ಟ್ ಮಾಡುತ್ತೇವೆ. ಇತರೆ ಆಕ್ಟಿವಿಟೀಸ್ ಮಾಡುತ್ತೇವೆ. ಲೈಸೆನ್ಸ್ ರದ್ದು ಮಾಡುತ್ತೇವೆ. ನಂಬರ್ ಆಫ್ ಲೈಸೆನ್ಸ್ ಜಾಸ್ತಿಯಾಗಿದೆ ಎಂದರೆ ದಕ್ಷತೆ ಹೆಚ್ಚಾಯಿತು ಎಂದು ನಾನು ಒಪ್ಪುವುದಿಲ್ಲ. ವೈಜ್ಞಾನಿಕವಾಗಿ ರೈತನ ಮಾಲಿನ ಬಗ್ಗೆ ವಿಚಾರ ಮಾಡುವಾಗ ಅನೇಕಸಲ ಪ್ರೊಫೆಸರ್ ನಂಜುಂಡಸ್ವಾಮಿಯವರಿಗೆ, ಬಾಬಾಗೌಡ ಪಾಟೀಲರಿಗೆ ನಾನು ಹೇಳಿದ್ದೇನೆ. ರೈತನ ನಿಜವಾದ ಹಿತ ಯಾವಾಗ ಆಗುತ್ತದೆ ಎಂದರೆ ರೈತನ ಮಾಲನ್ನು ಎರಡನೆಯವರು ಖರೀದಿ ಮಾಡುವುದಕ್ಕೆ ಅವಕಾಶ ಇರಬಾರದು ಆಗ ಆಗುತ್ತದೆ. ಖರೀದಿ ಮಾಡುವುದಕ್ಕೆ ಗೌರ್ನಮೆಂಟ್ ಧಾರಣೆ ನಿಗದಿ ಮಾಡಿ ಎಂದು ಹೇಳುತ್ತಾರೆ. ನನಗೆ ತಿಳುವಳಿಕೆ ಇಲ್ಲ. ಇದರ ಬಗ್ಗೆ ಏನಾದರೂ ತಪ್ಪಿದ್ದರೆ ತಿದ್ದಿಕೊಳ್ಳೋಣ. ನನ್ನ ತಿಳುವಳಿಕೆ ಮಟ್ಟಿಗೆ ಹೇಳುವುದಾದರೆ, ಒಂದು ಚೀಲ ಜೋಳಕ್ಕೆ ಒಂದು ಸಾವಿರ ರೂಪಾಯಿ ಎಂದು ನಿಗದಿ ಮಾಡುತ್ತೇವೆ ಎಂದು ಇಟ್ಟುಕೊಳ್ಳಿರಿ ಆದರೆ ತೆಗೆದುಕೊಳ್ಳುವವರು ಯಾರು? ಈ ಪ್ರಶ್ನೆ ನಮ್ಮದುರಿಗೆ ಉಳಿದುಕೊಳ್ಳುತ್ತದೆ. ಅದಕ್ಕೆ ಏನಾಗಬೇಕೆಂದರೆ ನಡುಮಧ್ಯೆ ವ್ಯಾಪಾರಸ್ಥರಿಗೆ ಸಿಗತಕ್ಕಂಥ ಹಣ ಸಂಪೂರ್ಣವಾಗಿ ನಿಂತು, ರೈತನ ಮಾಲಿಗೆ ಬಂದಂಥ ಬೆಲೆ ಕನ್‌ಸ್ಯೂಮರ್‌ಗೆ ಹೋಗತಕ್ಕಂಥ ಬೆಲೆ ಇವೆರಡರ ನಡುವೆ ಇರತಕ್ಕಂಥ ಲಾಭ ಏನಿದೆ ಇದು ಸಂಪೂರ್ಣವಾಗಿ ರೈತನಿಗೆ ಮುಟ್ಟುವಂತೆ ಆಗಬೇಕು. ಜಗತ್ತಿನಲ್ಲಿ ಯಾವುದೇ ಒಂದು ವಸ್ತು ತೆಗೆದುಕೊಂಡರೂ ಸಹಿತ ಆ ವಸ್ತುವನ್ನು ತಯಾರು ಮಾಡುವ ಮಾರಾಟಗಾರ ತನ್ನ ಮಾಲಿಗೆ ಬೇಕಾಗುವ ಕಚ್ಚಾಮಾಲಿನ ಬೆಲೆ ಅದನ್ನು ತಯಾರು ಮಾಡಲು ಬೇಕಾಗುವ ಪ್ರೋಸೆಸಿಂಗ್ ಕಾಸ್ಟ್, ತನ್ನ ಲಾಭ, ಇವೆಲ್ಲವನ್ನೂ ಕೂಡಿಸಿ ಧಾರಣೆಯನ್ನು ಫಿಕ್ಸ್ ಮಾಡುತ್ತಾನೆ. ಆದರೆ ದುರ್ದೈವ ರೈತ ಮಾತ್ರ ಇದಕ್ಕೆ ಹೊರತಾಗಿದ್ದಾನೆ. ರೈತ ತಾನು ಬೆಳೆದ ಮಾಲನ್ನು ಮಾರ್ಕೆಟ್‌ಗೆ ತಂದಾಗ ಇದರ ಧಾರಣೆ ಏನು ಎಂದು ಅವನು ಹೇಳುವ ಹಾಗೆ ಇಲ್ಲ ಖರೀದಿ ಮಾಡುವವನು ಹೇಳಬೇಕು. ಅವನು 50 ಎಂದರೆ 50 ರೂ. ಎಂದು ಹೇಳಬೇಕು. ಅವನು 20ರೂ ಎಂದರೆ 20 ಎಂದು ಅನ್ನಬೇಕು. ಸ್ಮಶಾನಕ್ಕೆ ತಂದ ಹೆಣವನ್ನು ಮನೆಗೆ ಒಯ್ಯುವ ಹಾಗೆ ಇಲ್ಲ. ಆ ರೀತಿ ರೈತ ಮಾರಾಟಕ್ಕೆ ತಂದ ಮಾಲನ್ನು ವಾಪಸ್ ತೆಗೆದುಕೊಂಡು ಹೋಗುವಹಾಗೆ ಇಲ್ಲ. ಅನೇಕ ಸಂದರ್ಭದಲ್ಲಿ ರೈತನ ಮನೆಯಲ್ಲಿ ಮಕ್ಕಳು ಮಲಗುವುದಕ್ಕೇ ಜಾಗ ಇಲ್ಲ. ಶೇಂಗಾವನ್ನು ಮಾರುಕಟ್ಟೆಗೆ ತಂದರೆ, ಅದನ್ನು ತಿರುಗಿ ಮನೆಗೆ ತೆಗೆದುಕೊಂಡು ಹೋಗಿ ಎಲ್ಲಿ ಹಚ್ಚುತ್ತಾನೆ? ಹೋಗುವಷ್ಟಕ್ಕೆ ಹೋಗಲಿ ಎಂದು ದಳ್ಳಾಳಿ ಅಂಗಡಿಗೆ ಹಾಗಿ ರೊಕ್ಕ ತೆಗೆದುಕೊಂಡು ಹೋಗುತ್ತಾನೆ.

ಈ ದುರ್ದೈವದ ಪ್ರಸಂಗ ತಪ್ಪಿಸಲಿಕ್ಕೆ ಈ ಆಕ್ಟ್ ಒಳಗೆ ಅವಕಾಶ ಮಾಡಿದ್ದೇವೆ. ಜಾಲಪ್ಪನವರು ಒಂದು ಮಾತನ್ನು ಹೇಳಿದರು, ಪಾಟೀಲರೆ ಈ ಹಣ ಅದಕ್ಕೆ ಇದಕ್ಕೆ ಖರ್ಚಾಗುತ್ತದೆ ಎಂದು. ಯಾವುದಕ್ಕೆ ಖರ್ಚಾಗುವುದಿಲ್ಲ. ಗೌರ್ನಮೆಂಟ್‌ನಲ್ಲಿದ್ದರೆ ಖರ್ಚಾಗುವುದಿಲ್ಲವೆ ಸ್ವಾಮಿ. ರೈತನ ಹಿತವನ್ನು ಕಾಪಾಡದೇ ಇದ್ದರೆ ಆ ಹಣ ಏತಕ್ಕೆ? ಎಲ್ಲರೂ ದುಷ್ಟರೇ ಇದ್ದಾರೆ ಎಂದು ಏತಕ್ಕೆ ವಿಚಾರ ಮಾಡುತ್ತೀರಿ. ಜಾಲಪ್ಪನವರಂತಹವರು ರೈತರ ಕಲ್ಯಾಣ ಮಾಡುವವರು ಬರಬಹುದು. ಆಗ ರೈತರ

ಕಲ್ಯಾಣಕ್ಕೆ ಬೇಕಾಗುವ ಕಾರ್ಯಕ್ರಮಗಳಿಗೆ ಖರ್ಚು ಮಾಡುತ್ತಾರೆ. ಮಹಾರಾಷ್ಟ್ರದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಜಾಲಪ್ಪನವರು ಹೋಗಿ ನೋಡಿ ಬರಬೇಕು. ಕಬ್ಬಿಗೆ ಕೊಡುವ 360 ರೂಪಾಯಿ ಧಾರಣೆಗಿಂತ ಹೆಚ್ಚಿನ ಧಾರಣೆ ಏನಿದೆ, ಅದನ್ನೆಲ್ಲಾ ಅಲ್ಲೇ ಅಡ್‌ಜೆಸ್ಟ್ ಮಾಡುತ್ತಾರೆ. ನಾನು ಎನ್.ಸಿ.ಡಿ.ಸಿ.ದವರಿಗೆ ಮೊನ್ನೆ ಹೋಗಿ ಏತಕ್ಕೆ ಇವರಿಗೆ 22 ಮಿಲ್ ಕೊಟ್ಟಿದ್ದೀರಿ 'ಎಂದು ಕೇಳಿದೆ ಅದಕ್ಕೆ ಅವರು 360 ರೂಪಾಯಿಗಿಂತ ಹೆಚ್ಚಿನ ಹಣ ಏನಿದೆ ಅದನ್ನು ರೈತರೆಲ್ಲರೂ ಕೂಡ ನಮ್ಮ ಹಣವನ್ನು ಠೇವಣಿಯಾಗಿ ಇಟ್ಟುಕೊಳ್ಳಿ ಮತ್ತೊಂದು ಮಿಲ್‌ಗೆ ಉಪಯೋಗ ಮಾಡಿಕೊಳ್ಳಿ ಎಂದು ಹೇಳುತ್ತಾರೆ ಎಂದು ಹೇಳಿದರು. ಅದನ್ನು ಉಳಿದುದಕ್ಕೆ ಉಪಯೋಗ ಮಾಡುವಹಾಗೆ ಇಲ್ಲ. that money should be utilised for the next Sugar Factory. ಈ ರೀತಿಯಿಂದ ಮಾಡುವುದರಿಂದ ಮಹಾರಾಷ್ಟ್ರದಲ್ಲಿ ಸಹಕಾರ ಚಳುವಳಿ ಬೆಳೆಯುತ್ತಿದೆ. ಎ.ಪಿ.ಎಂ.ಸಿ. ಬೆಳೆಯುತ್ತಿದೆ. ಮತ್ತು ರೈತರು ಕಲ್ಯಾಣ ಸ್ವಲ್ಪಮಟ್ಟಿಗೆ ಆಗುತ್ತಿದೆ. ಪೂರಾ ಆಗುತ್ತದೆ ಎಂದು ಹೇಳುವುದಿಲ್ಲ. ಅವರು ಎಷ್ಟು ಸಂತೋಷದಿಂದ ಇದ್ದಾರೆ. ಅಲ್ಲಿ ಸಹಕಾರ ಭವನ ಎಂದು ಕಟ್ಟಿದ್ದಾರೆ ನೋಡಿದರೆ ಸಂತೋಷ ಆಯಿತು ಏನಾದರೂ ಆಗಲಿ ಮನೆಯಲ್ಲಿ ತಿರಿದುಕೊಂಡು ತಿನ್ನಲಿ. ಅಲ್ಲಿನ ಸಹಕಾರ ಭವನ ನೋಡಿ ಅದು ರೈತರ ಭವನ ಎಂದಾಗ ಸಂತೋಷ ಆಯಿತು. ನಮ್ಮ ರಾಜ್ಯದಲ್ಲಿ ಒಂದೇ ಒಂದು ಭವನವೂ ಇಲ್ಲ ನೋಡುವುದಕ್ಕೆ ಹನುಮಂತಯ್ಯನವರು ದುರ್ದೈವದಿಂದ ಇದೊಂದು ಕಟ್ಟಿ ಹೋದರು ನಮ್ಮನ್ನು ಕೂಡಿಸಿ ಹೋದ ನಾವು ಎಂಜಾಯ್ ಮಾಡುತ್ತಿದ್ದೇವೆ.

ಇದೊಂದು ಹೊರತು ಮತ್ತೆ ಏನೂ ಇಲ್ಲ ಈ ಹಣವನ್ನು ಕೂಡ ಬಿಟ್ಟು ಬಿಡುತ್ತೇವೆ ಎಂದು ಇಟ್ಟುಕೊಳ್ಳಿ ಇದು ಎ.ಪಿ.ಎಂ.ಸಿ. ಒಳಗೆ ದುರುಪಯೋಗ ಆಗುವುದಿಲ್ಲವೇ? ಯಾವಾಗಲೂ ಸಾರ್ವಜನಿಕ ಜೀವನದೊಳಗೆ ವ್ಯಕ್ತಿ ಯಾರಿದ್ದಾನೆ. ಸಾರ್ವಜನಿಕ ಜೀವನದಲ್ಲಿ ಯಾವ ಸಂಸ್ಥೆಯ ಮ್ಯಾನೇಜ್‌ಮೆಂಟ್ ಯಾರ ಕೈಯಲ್ಲಿರುತ್ತದೆ ಎಂಬುದನ್ನು ನೋಡಿ ಹಣವನ್ನು ಸದ್ವಿನಿಯೋಗ ಮಾಡಬೇಕು. ಹಣವನ್ನು ಕೊಡದೇ ಅಯೋಗ್ಯವಾದುದನ್ನು ಮಾಡಬಾರದು. ಹಣವನ್ನು ಕೂಡಿಡಬಾರದು ಸಾಲ ಮಾಡಬೇಕೇ ಹೊರತು ಹಣವನ್ನು ಕೂಡಿಡಬಾರದು ಹಣವನ್ನು ಏತಕ್ಕೆ ಖರ್ಚು ಮಾಡಬೇಕು ಎಂದರೆ ಅದನ್ನು ಸದ್ವಿನಿಯೋಗ ಮಾಡಬೇಕು ಮಾನ್ಯ ಬೈರೇಗೌಡರು ನಾನು ಕೋಲ್ಡ್ ಸ್ಟೋರೇಜ್‌ನ್ನು ಮಂಜೂರು ಮಾಡಿದ್ದೇನೆಂದು ಹೇಳಿದರು ಅಧಿಕಾರ ಒಂದು ದಿವಸ ಇರುತ್ತದೆ, ಇವತ್ತು ನಾನು ಮಂತ್ರಿಯಾಗಿರಬಹುದು ನಾಳೆ ದಿವಸ ಮುಂಜಾನೆ ಮನೆಗೆ ಹೋಗಬಹುದು. ಆದರೆ ನಾನು ಮಾಡಿರುವ ಕಾರ್ಯ ಮಾತ್ರ ನಿರಂತರವಾಗಿ ಉಳಿಯುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಇವತ್ತು ನೀವು ಹೇಳಿದಿರಿ ನಾನು ಮಾಡಿದೆ ಎಂದು ಮಾನ್ಯ ಜಾಲಪ್ಪನವರು ರೈತರ ಹಿತ ಸಲುವಾಗಿ ರೈತರ ಹಿತ ಕಾಪಾಡುವ ಸಲುವಾಗಿ ಕಮೀಷನ್ ತೆಗೆದುಕೊಳ್ಳುವುದನ್ನು ಮಟ್ಟ ಹಾಕಿದರು. ಅದಕ್ಕೆ ನಾನು ಅದನ್ನು ಸಂತೋಷದಿಂದ ಸ್ವಾಗತ ಮಾಡಿದೆ. 10 ಪರ್ಸೆಂಟ್ ತೆಗೆದುಕೊಳ್ಳಬಹುದು ಕಳವು ಮಾಡಬಾರದೆಂದು ಕಾಯಿದೆ ಇದೆ. ಕಳವು ಮಾಡುವವರನ್ನು ನೀವು ಏನು ಮಾಡುವುದಕ್ಕಾಗುತ್ತದೆ. ಮಟ್ಟ ಹಾಕತಕ್ಕಂಥ ಅಧಿಕಾರಿಗಳು ಬೇಕು ಮಟ್ಟ ಹಾಕತಕ್ಕಂಥ ಅಧಿಕಾರಿಗಳ ಮೇಲೆ ನಾವು ಚೆಕ್ ಇಡಬೇಕು ಆದರೆ ನೀವು ಮಾಡಿರುವ ಕೆಲಸ ನೀವು ತಪ್ಪು ಎಂದು ಹೇಳಿದರೂ ನಾನು ಹೇಳುವುದಿಲ್ಲ I defend your case ಎ.ಪಿ.ಎಂ.ಸಿ.ಗಳಲ್ಲಿ ಬಿಲ್ ಮಾಡುವಾಗ ನಾವು ಪಂಜಾಬಿಗೆ ಹೋಗಿದ್ದೆವು. ಯು.ಪಿ.ಗೆ ಹೋಗಿದ್ದೆವು ಎಂದು ಹೇಳುತ್ತಾರೆ. ನಾನು ಸಹ ಆ ಕಮಿಟಿಯಲ್ಲಿದ್ದೆ ಅಜ್ಜಿಬಾಳ ಹೆಗಡೆಯವರು ಇದ್ದರು ಬಹುಸಂಖ್ಯೆಯಲ್ಲಿ ನಿಮ್ಮ ಪಕ್ಷದವರು ಇದ್ದರು ಇದಕ್ಕಿಂತ ನನ್ನದು ಹೆಚ್ಚು ಪ್ರಗತಿಪರವಾಗಿದೆ

ಎಂದು ನಾನು ಬಹಳ ವಾದಿಸಿದೆ. ಅದು ಏನೂ ಆಗಲಿಲ್ಲ. ಎಲ್ಲಾ ನಮ್ಮ ಮನಸ್ಸಿನಂತೆ ಆಗುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಗೀವ್ ಅಂಡ್ ಟೇಕ್ ಪಾಲಿಸಿ ಪ್ರಕಾರ ನಾನು ಕೆಲವನ್ನು ಕಾಂಪ್ರಮೈಸ್ ಮಾಡಿಕೊಳ್ಳಬೇಕಾಯಿತು. ಅದಕ್ಕೆ ಮಾಡಿದ್ದೇವೆ. ಈಗ ನಿಮ್ಮಲ್ಲಿ ಒಂದು ಶಂಕೆ ಇದೆ. ಈ ಹಣವನ್ನು ಕೋಆಪರೇಟಿವ್ ಸೊಸೈಟಿಗಳಿಗೆ ಕೊಡಬೇಕೆಂದರೆ, ಏತಕ್ಕೆ ಕೊಡಬೇಕು ಹಾಗಾದರೆ ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಏತಕ್ಕೆ ಇಡಬೇಕು? ಇವತ್ತು ಅಪೆಕ್ಸ್ ಬ್ಯಾಂಕುಗಳು ಚೆನ್ನಾಗಿವೆ ನಾಳೆ ಅಪೆಕ್ಸ್ ಬ್ಯಾಂಕ್‌ಗಳು ದಿವಾಳಿ ಆದರೆ ನಮ್ಮ ಹಣ ಹೋಗುವುದಿಲ್ಲವೇನು? ಸ್ಟೇಟ್ ಬ್ಯಾಂಕ್‌ನಲ್ಲಿಟ್ಟರೆ ಹೋಗುವುದಿಲ್ಲವೇನು? ನಮ್ಮ ಸಹಕಾರ ಚಳುವಳಿ ಮೇಲೆ ನಿಮಗೆ ಏತಕ್ಕೆ ಒಮ್ಮಿಂದಲೇ ಅಪನಂಬಿಕೆ ಬಂತು? ನನಗೆ ಆತ್ಮ ವಿಶ್ವಾಸ ಇದೆ. ಸಹಕಾರ ಚಳುವಳಿಯಲ್ಲಿ ಇವತ್ತಲ್ಲಾ' ನಾಳೆ ಅಭಿವೃದ್ಧಿಯನ್ನು ಕಾಣಬಹುದು.

ಶ್ರೀ ಆರ್.ಎಲ್. ಜಾಲಪ್ಪ : ನಾನು ಸಹಕಾರ ಸಂಘಗಳನ್ನು ಅನುಮಾನದಿಂದ ನೋಡುತ್ತಿಲ್ಲ ನಮ್ಮವು ಕೆಲವು ಕರ್ತವ್ಯಗಳು ಇವೆ ಎ.ಪಿ.ಎಂ.ಸಿ.ಗಳು ಏತಕ್ಕೆ ಇವೆ? ನಾವು ಸಹಕಾರ ಸಂಘಗಳಿಗೆ ವ್ಯಾಪಾರ ಮಾಡುವುದಕ್ಕೆ ಕೊಡುವುದಕ್ಕೆ ಇದ್ದೇವೆಯೇ? ನೀವು ಸೆಸ್ ವಸೂಲಿ ಮಾಡಿ ಆ ಸೆಸ್‌ನಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮಾಡಿ ಸಬ್ ಮಾರ್ಕೆಟ್ಸ್ ಮಾಡಿ ಡೆವಲಪ್ ಮಾಡಬೇಕು ಮತ್ತು ಮಾರ್ಕೆಟ್ ಯಾರ್ಡ್ಸ್‌ನಲ್ಲಿ ಜನಗಳು ಬರುತ್ತಾರೆ, ರೈತರು ಬರುತ್ತಾರೆ ಅವರಿಗೆ ಫೆಸಿಲಿಟಿ ಜಾಸ್ತಿ ಮಾಡಿ ಕೊಡಬೇಕು ಇವೆಲ್ಲಾ ಮಾಡದಿದ್ದರೆ ಅವರಿಗೆ ಫ್ರೀ ಗೋಡೌನ್ ಪೆಸಿಲಿಟೀಸ್ ಕೊಡಬೇಕು ಮತ್ತು ವೆಹಿಕಲ್ಸ್ ಪ್ರೋವೈಡ್ ಮಾಡಿ ಸ್ಮಾಲ್ ಫಾರ್ಮರ್ಸ್‌ಗೆ ಮತ್ತು ಬಿಗ್ ಫಾರ್ಮರ್ಸ್‌ಗೆ ಅವರ ಮಾಲನ್ನು ಮಾರ್ಕೆಟ್ಟಿಗೆ ತರತಕ್ಕಂಥಾದಕ್ಕೆ ಚೀಪ್‌ರೇಟಿನಲ್ಲಿ ಮಾಡಿಕೊಡಬೇಕು. ಇವೆಲ್ಲಾ ಮಾಡಿ ಎಂದರೆ ಯಾರೋ ವ್ಯಾಪಾರ ಮಾಡುವುದಕ್ಕೆ ಸೊಸೈಟಿಗಳಿಗೆ ದುಡ್ಡು ಕೊಡುತ್ತೇವೆಂದು ಹೇಳಿದರೆ ಹೇಗೆ? ಅಪೆಕ್ಸ್ ಬ್ಯಾಂಕ್‌ಗೆ ಕೊಡುವುದಿಲ್ಲವೇ ಡಿಸ್ಟ್ರಿಕ್ಟ್ ಬ್ಯಾಂಕ್‌ನಲ್ಲಿಡುವುದಿಲ್ಲವೇ ಎಂದು ಕೇಳಿದರೆ ಹೇಗೆ? ತಾವು ಮಾರ್ಕೆಟಿಂಗ್ ಸೊಸೈಟಿಗಳಿಗೆ ತೆಗೆದುಕೊಂಡು ಹೋಗಿ ದುಡ್ಡು ಕೊಡುವುದಕ್ಕೂ ಟಿ.ಎ.ಪಿ.ಎಂ.ಸಿ.ಗಳಿಗೆ ದುಡ್ಡು ಕೊಡುವುದಕ್ಕೂ ವ್ಯತ್ಯಾಸ ಇಲ್ಲವೇ Please don't misunderstand me. ನಮ್ಮ ಕರ್ತವ್ಯಗಳು ಏನು. ನಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡೋಣ. ಇರುವ ದುಡ್ಡನ್ನು ತೆಗೆದುಕೊಂಡು ಹೋಗಿ ದಾನ ಮಾಡುತ್ತೇನೆಂದರೆ ಹೇಗೆ? ಹಾಗೆ ಮಾಡುವುದಕ್ಕೆ ಬರುವುದಿಲ್ಲ ಹಾಗೆ ಮಾಡಬಾರದು. ತಾವು ಬೇಕಾದರೆ ಸೆಸ್ ಕಡಿಮೆ ಕಲೆಕ್ಟ್ ಮಾಡಿ ಎರಡು ರೂಪಾಯಿ ಇದ್ದದ್ದು ಒಂದು ರೂಪಾಯಿ ಆಗಿದೆ ಒಂದು ರೂಪಾಯಿಗಳಿಂದ ನಾಲ್ಕು ಆಣೆ ಮಾಡಿ ಅದರಿಂದ ಬಂದಂತಹ ಹಣದಿಂದ ಇನ್‌ಪ್ರಾಸ್ಟ್ರಕ್ಚರ್ ಡೆವಲಪ್ ಮಾಡಿ ಎಂದು ಹೇಳಿದರೆ ಯಾವುದೋ ಸೊಸೈಟಿಗೆ ದುಡ್ಡು ಕೊಟ್ಟು ವ್ಯಾಪಾರ ಮಾಡಿಸುತ್ತೇನೆಂದು ಹೋದರೆ ಹೇಗೆ ಆಗುತ್ತದೆ?

ಶ್ರೀ ಕೆ.ಹೆಚ್. ಪಾಟೀಲ್: ಮಾರ್ಕೆಟ್‌ಗೆ ಬಂದಂತಹ ಮಾಲನ್ನು ಇಟ್ಟುಕೊಂಡು ಹಣ ಕೊಡಬೇಕೆನ್ನುವ ಕಾಯಿದೆಯನ್ನು ನೀವೆ ಮಾಡಿದ್ದೀರಿ. ಮಾರ್ಕೆಟ್ ಕಮಿಟಿಯವರು ಈ ಲೆಕ್ಕಾಚಾರ ಮಾಡುವ ಬದಲಿಗೆ ಮಾರ್ಕೆಟಿಂಗ್‌ಗೆ ಸೊಸೈಟಿಗಳಿಗೆ ಹಣ ಕೊಡಬೇಕೆಂದು ನಾನು ಹೇಳಿದೆ ಮಾರ್ಕೆಟ್ ಕಮಿಟಿಗಳ ಕೆಲಸ ನಿಯಂತ್ರಣ ಮಾಡುವುದು ನಿಯಂತ್ರಣ ಮಾಡುವವರಿಗೆ ಅವ್ಯವಹಾರ ಮಾಡುವುದಕ್ಕೆ ಹತ್ತಿದರೆ ಅವರು ಏನಾದರೂ ತಪ್ಪು ಮಾಡಿದರೆ ಅವರನ್ನು ನಿಯಂತ್ರಣ ಮಾಡುವವರು ಯಾರು?

ಶ್ರೀ ಆರ್.ಎಲ್. ಜಾಲಪ್ಪ: ಅವರಿಗೆ 70-80 ಭಾಗ ಅಡ್ವಾನ್ಸ್ ಕೊಡುವುದು ಅಷ್ಟೇ

ಶ್ರೀ ಕೆ.ಹೆಚ್. ಪಾಟೀಲ್: ರೈತರ ಮಾಲು ಮಾರ್ಕೆಟ್‌ಗೆ ಬಂದ ಮೇಲೆ ಮಾರಾಟ ಮಾಡುವವನು ಒಬ್ಬ ಅದನ್ನು ನಿಯಂತ್ರಣ ಮಾಡುವವನು ಇನ್ನೊಬ್ಬ ಮಾರ್ಕೆಟ್ ಕಮಿಟಿ ಕೆಲಸ ನಿಯಂತ್ರಣ ಮಾಡುವುದು ನಿಯಂತ್ರಣ ಮಾಡುವವನೆ ಮಾರಾಟ ಮಾಡುವುದಕ್ಕೆ ಹತ್ತಿದರೆ ಅವನನ್ನು ಹಿಡಿಯುವವರು ಯಾರು?

ಶ್ರೀ ಆರ್.ಎಲ್. ಜಾಲಪ್ಪ: ಮಾರಾಟ ಮಾಡುವುದು ಎಲ್ಲಿ ಬಂತು ಅಲ್ಲಿ?

ಶ್ರೀ ಕೆ.ಹೆಚ್. ಪಾಟೀಲ್: ಇನ್ಯಾರು ಮಾಡುತ್ತಾರೆ?

ಶ್ರೀ ಆರ್.ಎಲ್. ಜಾಲಪ್ಪ: ರೈತರು ತಂದ ಮಾಲನ್ನು ಅವರು ಡಿಸ್ಟ್ರೆಸ್ ಸೇಲ್ ಮಾಡಿಕೊಡುವುದು ಬೇಡ. ಇವತ್ತು ರೈತರ ಮಾಲಿಗೆ ಡಿಮ್ಯಾಂಡ್ ಇಲ್ಲದಿದ್ದರೆ ಅದನ್ನು ಗೋಡೌನ್‌ನಲ್ಲಿ ಇಟ್ಟುಕೊಂಡು ಅವರಿಗೆ 50-60 ಪರ್ಸೆಂಟ್ ಹಣ ಕೊಡಿ. ಆಮೇಲೆ ಅವರು ನೆಟ್ ಕ್ರಾಪ್ ಮಾರಾಟ ಮಾಡಿಕೊಳ್ಳುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್: pledge of goods ಗೆ ಹಣ ಕೊಡಬೇಕು. ಪ್ರೋಸೆಸಿಂಗ್ ಸೊಸೈಟಿಗಳಿಗೆ ಸಹಾಯ ಮಾಡಬೇಕು. ಪ್ರೋಸೆಸಿಂಗ್ ಸೊಸೈಟಿಯವರು ಷುಗರ್ ಫ್ಯಾಕ್ಟರಿಗಳಿಗೆ ಕೊಡುತ್ತಾರೆ. ಮಂಗಳೂರಿನಲ್ಲಿ ಷುಗರ್ ಫ್ಯಾಕ್ಟರಿ ಇದೆ. ಆ ಷುಗರ್ ಫ್ಯಾಕ್ಟರಿ ನಡೆಯುವುದಕ್ಕೆ ಸಾಧ್ಯವಿಲ್ಲ, ಅವರಿಗೆ ಹಣ ಕೊಡಿ ಅಂದರೆ ಕೊಡುವುದಿಲ್ಲವೆಂದರೆ ಹೇಗೆ ಡೆವಲಪ್ ಮಾಡಬೇಕು ಹೇಳಿ. ಮಾರ್ಕೆಟಿಂಗ್ ಕಮಿಟಿಯಲ್ಲಿ 8 ಕೋಟಿ ರೂಪಾಯಿಗಳ ರೊಕ್ಕ ಇದೆ. ಅದು ಯಾರ ರೊಕ್ಕ, ರೈತರ ರೊಕ್ಕ.

ಶ್ರೀ ಆರ್.ಎಲ್. ಜಾಲಪ್ಪ: ಅದು ಕಬ್ಬು ಬೆಳೆಯುವ ರೈತರ ರೊಕ್ಕ ಅಲ್ಲ ಅದು ಅಡಿಕೆ ಬೆಳೆಗಾರರ ರೊಕ್ಕ ಅವರು ಕಬ್ಬು ಬೆಳೆಗಾರರಿಗೆ ಏತಕ್ಕೆ ಕೊಡುತ್ತಾರೆ? ಕಡೆಗೆ ಆ ಹಣಕ್ಕೆ ತಾವು ಏನೋ ಗ್ರಹಚಾರ ತಂದಿದ್ದೀರಿ. ದಯಮಾಡಿ ತಾವು ಯೋಚನೆ ಮಾಡಿ ನಾವು ನೀವು ಪರ್ಮನೆಂಟ್ ಆಗಿ ಅಲ್ಲಿರುವುದಿಲ್ಲ, ಹಣ ಇರುವಾಗ ನೋಡಿ ಕೊಡಿ.

ಶ್ರೀ ಕೆ.ಹೆಚ್. ಪಾಟೀಲ್: ಮಾನ್ಯ ಜಾಲಪ್ಪನವರ ಕಣ್ಣು ಮಂಜಾದಂತೆ ಕಾಣುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ: ರೈತರು ಏನೇ ಮಾಲು ತಂದರೂ ಅವರಿಗೆ ಒಳ್ಳೆ ಬೆಲೆ ಸಿಕ್ಕಿಸಬೇಕು ಅಷ್ಟೇ ನಮ್ಮ ಕರ್ತವ್ಯ ಮಿಕ್ಕಿದ್ದೆಲ್ಲಾ ನಮ್ಮ ಕರ್ತವ್ಯ ಅಲ್ಲ.

ಶ್ರೀ ಕೆ.ಹೆಚ್. ಪಾಟೀಲ್: ಇದಲ್ಲದೆ ಮಾನ್ಯ ಸದಸ್ಯರು ಮನವಿ ಕೊಟ್ಟಂಥ ಎಲ್ಲಾ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಇನ್ನು ಸರ್ಕಾರದವರು ಮಂಜೂರಾತಿ ಕೊಡುವ ಪೂರ್ವದಲ್ಲಿ ಯಾವುದಕ್ಕೆ ಕೊಡಬೇಕು. ಎಷ್ಟರಮಟ್ಟಿಗೆ ಕೊಡಬೇಕು ಎನ್ನುವ ನಿಯಂತ್ರಣ ಸರ್ಕಾರದ ಕೈಯಲ್ಲೇ ಇದೆ. ಸರ್ಕಾರದವರು ಒಂದು ಮಾರ್ಕೆಟ್ ಕಮಿಟಿಯಿಂದ . ಇನ್ನೊಂದು ಮಾರ್ಕೆಟ್ ಕಮಿಟಿಗೆ ಕೊಡುವುದಕ್ಕೆ ಅಡ್ಡಿ ಇಲ್ಲ ಅಂತೀನಿ.

ಶ್ರೀ ಆರ್.ಎಲ್. ಜಾಲಪ್ಪ: ಡೆವಲ್ ಆಗಬೇಕಾಗಿರುವ ಮಾರ್ಕೆಟ್ ಕಮಿಟಿಗೆ ಡೆವಲಪ್ ಆಗಿರುವ ಮಾರ್ಕೆಟ್ ಕಮಿಟಿಯಿಂದ ಇವತ್ತಿನಿಂದಲ್ಲ ಮೊದಲಿನಿಂದಲೂ ಕೊಟ್ಟುಕೊಂಡು ಬಂದಿದ್ದಾರೆ There are surplus funds in almost all the market committees.

ಶ್ರೀ ಕೆ.ಹೆಚ್. ಪಾಟೀಲ್: ಒಂದಾದರೂ ಮಾರ್ಕೆಟ್ ಕಮಿಟಿಯಲ್ಲಿ ಸರ್‌ಪ್ಲಸ್ ಇರುವುದನ್ನು ತೋರಿಸುತ್ತೀರೇನೂ? Show me a single market committee where there is surplus funds? ಇವತ್ತು ಮಂಗಳೂರಿನಲ್ಲಿ ಸರ್‌ಪ್ಲಸ್ ಫಂಡ್ 9 ಕೋಟಿ ರೂಪಾಯಿ ಇದೆಯೆಂದು ಹೇಳುತ್ತಿರಿ Do you know, what is the requirement of the Mangalore Market Committee? It requires 100 crores.

ಶ್ರೀ ಆರ್.ಎಲ್. ಜಾಲಪ್ಪ: ಮಾಡಿ

ಶ್ರೀ ಕೆ.ಹೆಚ್. ಪಾಟೀಲ್: ಮಾಡುತ್ತೇವೆ ರೊಕ್ಕ ತಂದು ಮಾಡುವುದಕ್ಕಾವುದಿಲ್ಲವೇನು? Can we not borrow form the World Bank?

ಶ್ರೀ ಆರ್.ಎಲ್. ಜಾಲಪ್ಪ: ಮಂಗಳೂರಿನಲ್ಲಿರುವ 9 ಕೋಟಿ ರೂಪಾಯಿಯನ್ನು ಅಲ್ಲೇ ಉಪಯೋಗಿಸಿ. ಸಕ್ಕರೆ ಕಂಪನಿಗೆ ಕೊಡುತ್ತೇವೆಂದು ಹೋಗಬೇಡಿ.

ಶ್ರೀ ಕೆ.ಹೆಚ್. ಪಾಟೀಲ್: ಒಂದು ಮಾರ್ಕೆಟ್ ಯಾರ್ಡ್‌ನಿಂದ ಇನ್ನೊಂದು ಮಾರ್ಕೆಟ್‌ಗೆ ಕೊಡಬೇಕೆಂದು ನಾವು ಹೇಳಿಲ್ಲ. This money shall be utilised for the processing institutions only in that area.

ಆ ಏರಿಯಾ ಬಿಟ್ಟು ಹೊರಗೆ ಹೋಗಕೂಡದು. ಆ ತಾಲ್ಲೂಕಿನವರಿಗೆ ಮತ್ತೆ ಉಪಯೋಗ ಮಾಡಬೇಕು. ಆದರೂ ತಮ್ಮ ಸಲಹೆಯನ್ನು ಪುನರ್ ಪರಿಶೀಲನೆ ಮಾಡೋಣ ಅನಂತರ ನಮ್ಮ ಕಮಿಷನ್ ರೇಟ್‌ನಲ್ಲಿಯೂ ಸಹಾ ಉಳಿದ ಮಾರ್ಕೆಟ್ ರೇಟ್‌ನೊಂದಿಗೆ ನೀವು ತುಲನೆ ಮಾಡಿ ನೋಡಿದಾಗ ಕರ್ನಾಟಕದಲ್ಲಿ ಫುಡ್‌ಗ್ರೈನ್ಸ್‌ಗೆ 2 ಪರ್‌ಸೆಂಟ್‌ನ್ನು ತಾವು ಇದ್ದಾಗಲೇ ಮಾಡಿದ್ದೀರಿ. ಅದನ್ನೇ ನಾವು ರೀಟೇನ್ ಮಾಡಿದ್ದೇವೆ. ಆದರೆ ಫ್ರೂಟ್ ಅಂಡ್ ವೆಜಿಟೇಬಲ್‌ಗೆ 5 ಪರ್‌ಸೆಂಟ್ ಮಾಡಿದ್ದೇವೆ ಮಹಾರಾಷ್ಟ್ರದೊಳಗೆ ಫುಡ್‌ಗ್ರೈನ್ಸ್‌ಗೆ 5 ಪರ್ಸೆಂಟ್ ಇದೆ. ಫ್ರೂಟ್ ಅಂಡ್ ವೆಜಿಟೇಬಲ್‌ಗೆ 7 ಪರ್‌ಸೆಂಟ್ ಇದೆ. ಏಕೆಂದರೆ ಅವರೂ ಈ ಅಮೌಂಟನ್ನು ಉಳಿದ್ದಕ್ಕೆ ಉಪಯೋಗ ಮಾಡುತ್ತಾರೆ. ultimately it will have to be taxed to the agriculturist ಕಮೀಷನರ್ ಲೆಕ್ಕ ಹಾಕುತ್ತಾನೆ. ನಮ್ಮ ಅಗ್ರಿಕಲ್ಚರಿಸ್ಟ್‌ಗೆ ಲೆಕ್ಕ ಇಲ್ಲ ನೀವು ಗೊತ್ತಿದ್ದವರು ಯೋಗ್ಯ ಮಾಡಿದ್ದೀರಿ.

ಶ್ರೀ ಆರ್.ಎಲ್. ಜಾಲಪ್ಪ: ಈ ಕಮೀಷನ್ ಜಾಸ್ತಿ ವಸೂಲಿ ಮಾಡುವುದು ಕಮೀಷನ್ ಏಜೆಂಟ್. 5 ಪರ್‌ಸೆಂಟ್ 7 ಪರ್‌ಸೆಂಟ್ ಮಾಡಿರುವುದು ಅವರು. ಅದು ಮಾರ್ಕೆಟ್ ಕಮಿಟಿಗೆ ಬರುವ ಹಣ ಅಲ್ಲ ಅದು.

ಶ್ರೀ ಕೆ.ಹೆಚ್. ಪಾಟೀಲ್: ಇದೆಲ್ಲಾ ಮಾರ್ಕೆಟ್‌ಗೆ ಸೇರಿಸುತ್ತೇನೆ The commission payable in different states ಆಮೇಲೆ ಪಂಜಾಬ್‌ದೊಳಗೆ 2 ಪರ್‌ಸೆಂಟ್ ಇದೆ. ಫ್ರೂಟ್ ಅಂಡ್ ವೆಜಿಟೇಬಲ್‌ಗೆ 4 ಪರ್‌ಸೆಂಟ್ ಇದೆ. ಆಮೇಲೆ ರಾಜಾಸ್ಥಾನದೊಳಗೆ ಒಂದೂವರೆ ಪರ್‌ಸೆಂಟ್ ಇದೆ, 4 ಪರ್‌ಸೆಂಟ್ ವೆಜಿಟೇಬಲ್ಸ್‌ಗೆ ಇದೆ. ಇದನ್ನು ಏಕೆ ಹೇಳಿದೆ ಎಂದರೆ, 2 ಪರ್‌ಸೆಂಟ್‌ನ್ನು ನೀವು ಇಟ್ಟಿದ್ದನ್ನೇ ಇಟ್ಟಿದ್ದೇವೆ. 5 ಪರ್‌ಸೆಂಟ್ ವೆಜಿಟೆಬಲ್ಸ್‌ಗೆ ಮಾಡಿದ್ದೇವೆ. 7 ಪರ್‌ಸೆಂಟ್ ಇದ್ದದನ್ನು. ಇದನ್ನು ನಾನು ಏತಕ್ಕೆ ಹೇಳಿದೆ ಎಂದರೆ, ನಮ್ಮ ಕರ್ನಾಟಕದಲ್ಲಿ ರೈತರ ಹಿತವನ್ನು ಗಮನಿಸಿ, ಉಳಿದ ರಾಜ್ಯಗಳೊಡನೆ ತುಲನೆ ಮಾಡಿ ರೇಟ್ ಫಿಕ್ಸ್ ಮಾಡಿದ್ದೇವೆ. ಇನ್ನು ಎರಡನೆಯ ಮಾತು ಬಹಳ ಮಹತ್ವದ್ದು, ಶ್ರೀಮಾನ್ ಮಂಜುನಾಥ್‌ರವರೂ ಏನಂತ ಹೇಳಿದರು? ಇವತ್ತಿನ ದಿವಸ ಕೆ.ಹೆಚ್. ಪಾಟೀಲರು ಕಮಿಟಿ ಕಾನ್ಸ್ಟಿಟ್ಯೂಟ್ ಮಾಡುವಾಗ ಖರೀದಿದಾರರಿಗೆ ಅವಕಾಶ ಕೊಟ್ಟಿದ್ದಾರೆ, ದಲ್ಲಾಳಿಗಳಿಗೆ ಕೊಟ್ಟಿಲ್ಲವೆಂದು ನನ್ನ ವ್ಯಾಖ್ಯಾನದೊಳಗೆ ಅದನ್ನು ಮಂಜುನಾಥ್‌ರ್‌ರವರು ಒಪ್ಪುತ್ತಾರೆಂದು ತಿಳಿದುಕೊಳ್ಳುತ್ತೇನೆ. Dallal is an agent of ryot. ಈಗಿರುವುದು, ಎಲ್ಲಿಯ ತನಕ ತೆಗೆಯುವುದಿಲ್ಲವೋ, ಅಲ್ಲಿಯ ತನಕ. Dalal is nothing but explaining the agriculturist. So long as we do not remove him, he is an agent of ryot.

ನಮ್ಮ ಅಗ್ರಿಕಲ್ಚರಿಸ್ಟ್‌ಗೆ ಬುದ್ಧಿ ಇಲ್ಲವೆಂದು ತಿಳಿದುಕೊಂಡು ಖರೀದಿದಾರರ ಮುಖಾಂತರ ಮಾರಾಟ ಮಾಡಿಸಿ ರೊಕ್ಕ ತೆಗೆದುಕೊಳ್ಳುವ ರೀತಿ ಇತ್ತು. ಅದಕ್ಕೇ

ಅವನ ಹಿತ ಬ್ಯಾಡಪ್ಪ, ನಮ್ಮ ರೈತರೇ ಬಂದಿರುತ್ತಾರೆ. ರೈತರ ಹಿತ ಕಾಪಾಡುತ್ತಾರೆ. ನೀವು ಖರೀದಿಗಾರ ಒಬ್ಬ, ಖರೀದಿವತಿಯಿಂದ ಹೇಳು ಎಂದು ಅವನನ್ನು ಇಟ್ಟುಕೊಂಡಿದ್ದೇವೆ. ಈ ದಲ್ಲಾಳರನ್ನು ಬಿಟ್ಟಿದ್ದೇವೆ. ಶ್ರೀಮಾನ್ ಬನ್ನಿಕೋಡ್‌ರವರಿಗೆ ಅಭಿನಂದಿಸುತ್ತೇನೆ. ಅವರು ಇದನ್ನು ಸ್ವಾಗತ ಮಾಡಿದ್ದಾರೆ ಮತ್ತು ಉಳಿದವರು ಸಹಿತ ಸ್ವಾಗತ ಮಾಡಿದ್ದಾರೆ. ಅವರೆಲ್ಲರಿಗೂ ನನ್ನ ವಂದನೆಗಳು.

(4.55 ಪಿ.ಎಂ.)

ಎಲ್ಲರೂ ಸ್ವಾಗತ ಮಾಡಿದ್ದಾರೆ. ಪರ್ಟಿಕ್ಯುಲರ್ ಆಗಿ ಈ ಕ್ಲಾಸ್‌ಗೆ ಶ್ರೀ ಮಂಜುನಾಥ್‌ರವರು ಸಂತೃಪ್ತರಾಗಿರಬೇಕು. ಯಾತರ ಸಲುವಾಗಿ ನಾವು ಬಿಟ್ಟಿದ್ದೇವೆ ಎಂದರೆ Dalal is nothing best an absent as long as we don't remove him, the problem will be there 11 ಮಂದಿ ರೈತರಿಗೆ ಕೊಡುತ್ತೇವೆ ಎಂದ ಮೇಲೆ ನಾವು ಕೊಟ್ಟಿ ಬಿಟ್ಟಿದ್ದೇವೆ.

ಶ್ರೀ ಟಿ.ಎಂ. ಮಂಜುನಾಥ್ : ಒಟ್ಟಿಗೆ ಎರಡು ಕೊಡಿ ಒಂದು ಟ್ರೇಡರ್‌ಗೆ ಕೊಡಿ.

ಶ್ರೀ ಕೆ.ಹೆಚ್. ಪಾಟೀಲ್ : ಒಂದು ಕೊಟ್ಟಿದ್ದೇವಲ್ಲ.....

ಶ್ರೀ ಟಿ.ಎಂ. ಮಂಜುನಾಥ್ : ಇನ್ನೂ ಒಂದು ಕೊಡಿ, ಟ್ರೇಡರ್‌ಗೆ.....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಸಹಕಾರ ಸಚಿವರೇ, ಟ್ರೇಡರ್ಸ್‌ಗೆ ಕೊಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ಟ್ರೇಡರ್ಸ್‌ನವರು ಇವತ್ತು ನಮ್ಮನ್ನು ಉಲ್ಟಾ ಪಲ್ಟಾ ಮಾಡಿದರು. ಇಷ್ಟು ದಿವಸದ ತನಕ ಹಾಗೆ ಬಿಡಬಾರದು ಆಗುವುದಿಲ್ಲ ಎಂದಲ್ಲ. ಒಬ್ಬ ಶಾಣೆ ಇದ್ದರೂ ಸಾಕು. ಒಬ್ಬ ಶಾಣೆ ಇದ್ದಾನೆ ಎಂದರೂ ಸಾಕು. ನಮ್ಮ ಮಂಜುನಾಥ್‌ನಂತವರು ಒಬ್ಬ ಶಾಣೆ ಟ್ರೇಡರ್ ಇದ್ದರೂ ಸಹ ನಮ್ಮಂತಹ 10 ಮಂದಿ ಇದ್ದರೂ ಸಹ ಏನು ಮಾಡುವ ಹಾಗೆ ಇದ್ದೇವೆ?

ಶ್ರೀ ಬಸವರಾಜ ರಾಯರೆಡ್ಡಿ : ಅವರು ಟ್ರೇಡರ್ಸ್ ಅಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ಆಮೇಲೆ ಆಕ್ಟ್‌ನೊಳಗೆ, ನಾವು ಮಾಡಿದ್ದೇವೆ, ದೊಡ್ಡಸ್ತಿಕೆ ಮಾಡುವುದಕ್ಕೆ ಹೇಳುವುದಿಲ್ಲ, ಇದರ ಬಗ್ಗೆ ಮಾಡಲು ಎಲ್ಲಾ ಕಾಲದಲ್ಲೂ ಪ್ರಯತ್ನ ನಡೆದಿವೆ. ಮಾನ್ಯ ಜಾಲಪ್ಪನವರ ಕಾಲದಿಂದ ಪ್ರಯತ್ನ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಎಲ್ಲರೂ ಸ್ವಲ್ಪ ಹೆಚ್ಚು ಕಡಿಮೆ ರೈತರ ಹಿತವನ್ನು ಕಾಪಾಡುವವರೇ ಇದ್ದಾರೆ. ರೈತರ ಹಿತವನ್ನು ಕಾಪಾಡುವ ಕಾಲದಲ್ಲಿ ಒಬ್ಬರು ಹೆಚ್ಚು ಆಗಿರಬಹುದು. ಒಬ್ಬರು ಕಡಿಮೆ ಆಗಿರಬಹುದು. ಒಬ್ಬರು ಕ್ರೆಡಿಟ್ ತೆಗೆದುಕೊಳ್ಳದೇ ಇರಬಹುದು. ಒಬ್ಬರು ಇರಲಿಕ್ಕಿಲ್ಲ. ಇದನ್ನೆಲ್ಲಾ ಮಾಡಿಕೊಳ್ಳುತ್ತಾ ಬಂದಿದ್ದೇವೆ. ರೈತರಿಗೆ ತೂಕ, ಧಾರಣೆ, ಗ್ರೇಡಿಗೆ ಸಿಗುವುದಿಲ್ಲ ಎಂದು ಶ್ರೀಮಾನ್ ಏಕಾಂತಯ್ಯನವರು ಹೇಳಿದರು. ಅವರು ಅದಕ್ಕೂ ಮುಂದೆ ಹೋಗಿ ಮಾನಗೇಡಿ ಕೆಲಸ ಸತತವಾಗಿ ನಡೆದಿದೆ ಮಾರ್ಕೆಂಟಿಗ್‌ನ ಕಮಿಟಿಯೊಳಗಡೆ ಎಂದು ಹೇಳಿದ್ದಾರೆ. ಅದನ್ನು ನಿಜವಾಗಿ ಕೂಲಂಕುಷವಾಗಿ ಪರಿಶೀಲಿಸುತ್ತೇವೆ. ನನಗೆ ಗೊತ್ತಿಲ್ಲವೆಂದಲ್ಲ ನನಗೆ ಗೊತ್ತಿದೆ ಎಂದು ಒಮ್ಮೆಲೆ ನಾನು ಮಂತ್ರಿಯಾಗಿ ಹೇಳಿದರೆ ನಾನು ಅದನ್ನು ಮುಚ್ಚಿಕೊಂಡು ಹಾಗೆ ಆಗುತ್ತದೆ. ಅದನ್ನು ಹೇಳುವುದಿಲ್ಲ, ಆದರೆ ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ.

ನನ್ನ ಅಧಿಕಾರಸ್ಥರು ಇಲ್ಲಿಯೇ ಕುಳಿತಿದ್ದಾರೆ. ಸೆಕ್ರೆಟರಿಯವರು ಇದ್ದಾರೆ. ಡೈರೆಕ್ಟರ್ ಆಫ್ ಮಾರ್ಕೆಂಟಿಗ್ ಇದ್ದಾರೆ ಅವರೆಲ್ಲಾ ನನ್ನ ಭಾಷೆಯ ಅರ್ಥವನ್ನು ಮಾಡಿಕೊಳ್ಳುತ್ತಾರೆಂದು ನಾನು ಆಸೆ ಮಾಡುತ್ತೇನೆ. ನಾನು ಜನರ ಭಾವನೆಗಳನ್ನು ಅರಿತಿದ್ದೇನೆ. ಮತ್ತು ಅವರ ಭಾವನೆಗಳನ್ನು ಕೃತಿಯಲ್ಲಿ ಇಳಿಸುವುದಕ್ಕೆ ತತ್ವಶಃ ನಮ್ಮಿಂದ ಸಾಧ್ಯವಾದ ಎಲ್ಲಾ ಪ್ರಯತ್ನವನ್ನು ಮಾಡುತ್ತೇನೆ ಎನ್ನುವಂತಹ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದರೊಳಗೆ ತಾಲ್ಲೂಕಿಗೆ ಒಂದು ಮಾರ್ಕೆಟ್ ಕಮಿಟಿ ಮಾಡಬೇಕು ಎನ್ನುವಂತಹ ಹೊಸ ಯೋಜನೆಯನ್ನು ಹಾಕಿದ್ದೇವೆ. ಇದರಿಂದ ಎಲ್ಲಾ ತಾಲ್ಲೂಕುಗಳು ಡೆವಲಪ್ ಆಗುವುದಕ್ಕೆ ಅನುಕೂಲವಾಗುತ್ತದೆ.

ಈಗ ಏನು ಆಗಿದೆ ಎಂದರೆ ಒಂದೊಂದು ಕಡೆ ಜಿಲ್ಲೆಗಳು ಆಗಿದ್ದಾವೆ. ಒಂದೊಂದು ಕಡೆ 3-3 ತಾಲ್ಲೂಕುಗಳು ಆಗಿದ್ದಾವೆ. ಒಂದೊಂದು ಕಡೆ ಒಂದೊಂದು ತಾಲ್ಲೂಕು ಇಲ್ಲ. ಹೀಗೆ ಪರಿಸ್ಥಿತಿ ಇದೆ. ಇದು ಬದಲಾವಣೆ ಆಗಿ ಒಂದೊಂದು ತಾಲ್ಲೂಕಿಗೆ ಒಂದೊಂದು ಮಾರ್ಕೆಟ್ ಕಮಿಟಿಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ. ಶ್ರೀಮಾನ್ ಕುನ್ನೂರ್ ಅವರು ಈ ಬಗ್ಗೆ ಹೇಳಿದ್ದಾರೆ. ಅವರು ಯಾವ ದಿಸೆಯಲ್ಲಿ ಹೇಳಿದ್ದಾರೆ. ಇದನ್ನು ನಾವು ತತ್ವಶಃ ನಡೆಸುತ್ತೇವೆ. ಶ್ರೀಮಾನ್ ಮಲ್ಲಾರ್ಗಿಗೌಡ ಪಾಟೀಲರು ಬಹಳ ಸ್ವಾರಸ್ಯವಾಗಿ ಮಾತನಾಡಿದ್ದಾರೆ, ಶ್ರೀಮಾನ್ ಆಚಾರ್‌ರವರು ಮಾತನಾಡಿದ್ದಾರೆ. ಶ್ರೀಮಾನ್ ಬೈರೇಗೌಡರು ಕೋಲ್ಡ್ ಸ್ಟೋರೇಜ್ ಬಗ್ಗೆ ಹೇಳಿದ್ದಾರೆ. ಕೋಲ್ಡ್ ಸ್ಟೋರೇಜ್ ಈಗ ಹೆಚ್ಚು ತೀವ್ರಗತಿಯಲ್ಲಿ ಕೆಲಸ ನಡೆಯಬೇಕು. ಎಂದು ಮಾನ್ಯ ಪುಟ್ಟಸ್ವಾಮಿ ಗೌಡರಿಗೆ ಹೇಳಿದ್ದೇನೆ. ಅದಕ್ಕೆ ಬೇಕಾಗುವಂತಹ ಸರ್ವವಿಧವಾದ ಸಹಾಯವನ್ನು ಸಹಕಾರ ಸಂಘದಿಂದ ಕೊಡುತ್ತೇವೆ. ಹಾಸನದಲ್ಲಿ ಮತ್ತು ಕೋಲಾರದಲ್ಲಿ ಹಿಂದೆ ಮಾಡಿದಂಥದು ಕೋಲ್ಡ್ ಸ್ಟೋರೇಜ್ ರೈತರ ಹಿತಕ್ಕಾಗಿಯೇ ನಡೆಯಬೇಕು.

ಶ್ರೀ ಸಿ. ಬೈರೇಗೌಡ : ರೈತರ ಉತ್ಪತ್ತಿ ಮಾಡತಕ್ಕಂಥ ಬೆಳೆಗಳಿಗೆ ಈಗ ಇರತಕ್ಕಂಥ ಸ್ಟೋರೇಜ್‌ಗಳು ಐದು ಪರ್ಸೆಂಟ್‌ನಲ್ಲಿ ಸಾಕಾಗುತ್ತಿಲ್ಲ. ಇಂತಹವನ್ನು ಇನ್ನೂ 2-3 ಆದರೂ ಕೂಡ ಕಟ್ಟಿಸಿದರೆ ಒಳ್ಳೆಯದು. 20 ಸಾವಿರ ಟನ್ನಿನ ಒಂದು ಕೋಲ್ಡ್ ಸ್ಟೋರೇಜ್ ಮಾಡುವುದಕ್ಕೆ ತಾವು ಪ್ರಯತ್ನಮಾಡಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ನೀವು ಒಂದು ಕೋ-ಅಪರೇಟೀವ್ ಸೊಸೈಟಿ ಮಾಡಿಕೊಂಡು ಹಣ ಕೇಳಿದರೆ, ಆ ಹಣ ಕೊಡಿಸುವುದಕ್ಕೆ ಏರ್ಪಾಡು ಮಾಡಿಕೊಡುತ್ತೇನೆ. ಅದಕ್ಕಾಗಿ ನೀವು ಕಾಳಜಿ ಮಾಡಬೇಡಿ ನಿಮಗೆ ಕೋಲ್ಡ್ ಸ್ಟೋರೈಜ್ ಮತ್ತು ಗೋಡೌಫ್ ಸಲುವಾಗಿ ರೂರಲ್ ಬ್ಯಾಂಕಿನಿಂದ ಹಣ ತೆಗೆದುಕೊಳ್ಳಬಹುದು. ಮಾನ್ಯ ಜಾಲಪ್ಪನವರು ಬಯ್ದುರೂ ಸಹ ಅಡ್ಡಿ ಇಲ್ಲ. ಸಾಲ ಕೊಡಿಸೋಣ. ಋಣಂ ಕೃತ್ವಾ ಘೃತಂ ಪಿಬೇತ್ ಎಂಬ ಗಾದೆಯಂತೆ. ಅಂದರೆ ಸಾಲವನ್ನು ಮಾಡಿಯಾದರೂ ತುಪ್ಪವನ್ನು ತಿನ್ನಿ ಎಂದು. ಮಾನ್ಯ ನಂಜುಂಡಸ್ವಾಮಿಯವರು ಒಪ್ಪುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ಸಾಲ ಮಾಡಿದರೆ ಪ್ರೊಡಕ್ಷನ್ ಸಲುವಾಗಿ ಆಗುತ್ತದೆ. ಇವತ್ತು ನಿಜವಾಗಿ ಕಲ್ಯಾಣ ಆಗುತ್ತದೆ. ಸಾಲ ಮಾಡಿ ನಾವು ಕೆಲಸ ಮಾಡಬೇಕು. ಕೆಲಸ ಮಾಡಿದ ಮೇಲೆ ಸಾಲವನ್ನು ಮುಟ್ಟಿಸುವುದಕ್ಕೆ ಪ್ರಯತ್ನ ಮಾಡಬೇಕೆಂಬುದೇ ನನ್ನ ವಾದ, ಈ ದೃಷ್ಟಿಯಿಂದ ನಿಮಗೆ ಕೋಲ್ಡ್ ಸ್ಟೋರೇಜ್‌ಗೆ ಹೆಚ್ಚಿಗೆ ಹಣ ಬೇಕಾದರೆ ಕೊಡೋಣ. ಏಕೆಂದರೆ ನಿಮ್ಮಲ್ಲಿ ಮತ್ತು ಹಾಸನದಲ್ಲಿ ಪೊಟಾಟೋ ಹೆಚ್ಚು ಬೆಳೆಯುತ್ತಾರೆ. ಆದ್ದರಿಂದ ಅಲ್ಲಿ ಕೋಲ್ಡ್ ಸ್ಟೋರೇಜ್ ಅವಶ್ಯಕತೆ ಇದೆ. ಅದಕ್ಕೆ ನೀವು ಕೇಳಿದರೆ ನಿಜವಾಗಿಯೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಕಡೆ ತರಕಾರಿ ಬೆಳೆಸುತ್ತೇವೆ. ಅದಕ್ಕೂ ಒಂದು ಕೋಲ್ಡ್ ಸ್ಟೋರೇಜ್ ಬೇಕು. ಅದರ ಬಗ್ಗೆ ತಾವು ಹೇಳಿ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ತೂಕ ಮತ್ತು ಅಳತೆ ಬಗ್ಗೆ ತಾವು ಹೇಳಲಿಲ್ಲ?

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ಈಗ ತೂಕದ ಬಗ್ಗೆ ನಮ್ಮಲ್ಲಿ ಜಿಜ್ಞಾಸೆ ಇದೆ. ನಾನು ಕೆಲವೇ ದಿವಸದಲ್ಲಿ ಆಫೀಸರ್ಸ್‌ನ್ನು ಮತ್ತು ತಜ್ಞರನ್ನು ಕರೆಯಿಸಿ ವಿಚಾರ ಮಾಡುತ್ತೇನೆ. ನನ್ನ ಅಭಿಪ್ರಾಯದಲ್ಲಿ ಎಲೆಕ್ಟ್ರಾನಿಕ್ ಪದ್ಧತಿ ಮೇರೆಗೆ ಪ್ರತಿ ಒಂದು ಮಾರ್ಕೆಟ್ ಕಮಿಟಿಯಲ್ಲಿ ತೂಕದ ಬಗ್ಗೆ ಕಂಪ್ಯೂಟರೈಸೇಷನ್ ತೂಕ ಆಗಬೇಕು. ಆ ತೂಕ ಆಗದೇ ಇದ್ದರೆ ನಮ್ಮ ಭಾರ ಎತ್ತುವ ಕೆಲಸ ಮುಗಿಯುವುದಕ್ಕೆ ಸಾಧ್ಯ ಇಲ್ಲ. ಅದಕ್ಕಾಗಿ ಕಂಪ್ಯುಟರೈಜೇಷನ್‌ಗೆ ಏನೇನು ಕಾರ್ಯಕ್ರಮಗಳು ಬೇಕೋ ಅದನ್ನು ಹಾಕಿಕೊಳ್ಳಲು ನಾನು ಪ್ರಯತ್ನಿಸುತ್ತೇನೆ.

ಶ್ರೀ ಸಿ. ಭೈರೈಗೌಡ : ನಮ್ಮಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಮಾವಿನಹಣ್ಣು ಬೆಳೆಯುತ್ತೇವೆ. ಮುಖ್ಯವಾಗಿ ಶ್ರೀನಿವಾಸಪುರ ತಾಲೂಕಿನಲ್ಲಿ ಹೆಚ್ಚು ಬೆಳೆಯುತ್ತೀರಿ 5 ಸಾವಿರ ಖರ್ಚು ಮಾಡಿದರೆ ಒಂದೇ ವರ್ಷದಲ್ಲಿ 5 ಲಕ್ಷದವರೆಗೂ ಅವನು ಲಾಭ ಮಾಡಿರುವ ನಿದರ್ಶನಗಳಿವೆ. ಅದನ್ನು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಅಳವಡಿಸುವ ಪ್ರಯತ್ನ ಪಡಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಒಂದು ಮುಖ್ಯ ವಿಷಯದ ಕಡೆ ಸದಸ್ಯರು ನನ್ನ ಗಮನ ಸೆಳಿದಿದ್ದಾರೆ. ಅದೆಂದರೆ ರೈತಾಪಿಯ ಮಾಲಿಗೆ ಹಣ ಕೊಡುವಾಗ ದಲ್ಲಾಲರು ಕೆಲವು ದಿವಸ ಮುಂದೆ ಹಾಕಿ ಅವರಿಗೆ ಮೋಸ ಮಾಡಿ ಪೂರ್ತಿ ಹಣ ಸಹಿತ ಕೊಡದ ಹಾಗೆ ವ್ಯವಸ್ಥೆ ಮಾಡುತ್ತಿದ್ದಾರೆ. ಕಮಿಷನನ್ನೂ ಹೆಚ್ಚು ಕಡಿಮೆ ತೆಗೆದುಕೊಳ್ಳುತ್ತಾರೆ. 2 ಪರ್ಸೆಂಟ್ ಅಂತ ಹೇಳಿ 10 ಪರ್ಸೆಂಟ್ ತೆಗೆದುಕೊಳ್ಳುತ್ತಾರೆಂಬುದು ನಿಜ. ಆದರೆ ಅದನ್ನು ಪೂರ್ತಿ ಎಲ್ಲಾ ಕಡೆ ಬಂದ್ ಮಾಡಲು ಆಗುವುದಲ್ಲ. ಕ್ಯಾಪಿಟೇಷನ್ ಬಂದ್ ಮಾಡುವುದು ಹೇಗೆ ದುರ್ದೈವದ ಪ್ರಸಂಗ ಆಗಿದೆಯೋ ಇದೂ ಹಂಗೇ. ಎಲ್ಲಿಯ ತನಕ ಸಾಮಾನ್ಯ ಜನತೆ ತಯಾರಾಗುವುದಿಲ್ಲ. ಈ ಕಾನೂನನ್ನು ನಡೆಸಿಕೊಂಡು ಹೋಗಲಿಕ್ಕೆ ......

ಒಬ್ಬ ಮಾನ್ಯ ಸದಸ್ಯರು : ಆಲ್ಟರ್ನೇಟಿವ್ ವ್ಯವಸ್ಥೆ ಮಾಡಿ.

ಶ್ರೀ ಕೆ.ಹೆಚ್. ಪಾಟೀಲ್: ಮಾಡೋಣ ಅದಕ್ಕೆ ನಾನು ಜಾಲಪ್ಪನವರ ಕೂಡ ಚರ್ಚೆ ಮಾಡಿದ್ದು ಮಾಲು ಮಾರಾಟಮಾಡಬೇಕು, ಹಣ ಕೊಡಬೇಕು. ಲೀಲಾವು ಮಾಡಿಸಬೇಕು ಇವೆಲ್ಲಾ ಆಗಬೇಕಾದರೆ ಹಣ ಬೇಕು. ಬೇಕಾದರೆ ಅವರಿಗೆ ಮಾರ್ಜಿನ್ ಮನಿ ಕೊಡೋಣ ಆಮೇಲೆ ಬ್ಯಾಂಕಿನಿಂದ ಸಾಲ ತೆಗೆಯೋಣ ರೈತರ ಮಾಲನ್ನು ಮಾರಾಟಕ್ಕೆ ಹಚ್ಚೋಣ ಯಾರೂ ಫಿಕ್ಸ್ ಮಾಡುವುದು ಬೇಡ ಹೆಚ್ಚು ರೇಟಿಗೆ ನಾವು ಮಾರಾಟ ಮಾಡುತ್ತೇವೆ. ಎಂದರೆ ತಾನೇ ತಾನಾಗಿ ಧಾರಣೆ ಬರುತ್ತದೆ. ಅದು ಮಾಡುವುದೇ ನನ್ನ ಉದ್ದೇಶ. ಜಾಲಪ್ಪನವರು ಅದನ್ನು ಕ್ಷಮಾ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ: ಮಂತ್ರಿಗಳೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ವ್ಯಾಪಾರದಲ್ಲಿ ಸೇಠ್‌ಗಳು ಕೊಂಡುಹೋಗಿ 15 ದಿವಸ ಇಟ್ಟುಕೊಂಡು ಮತ್ತೆ not ಸೇಲಾಗಿ ಕಡಿಮೆ ಮಾಡುತ್ತಾರೆ.

ಶ್ರೀ ಕೆ.ಹೆಚ್. ಪಾಟೀಲ್ : ನೀವೇ ಹೇಳಿ ಕ್ಯಾಂಪ್ಕೊ ಪ್ರಾರಂಭವಾಗುವ ಮೊದಲು ಹೇಗಿತ್ತು ಎಂದು. ಅದನ್ನು ಪ್ರಾರಂಭಿಸುವಾಗ ನನ್ನನ್ನು ಮಿನಿಸ್ಟ್ರಿಯಿಂದ ಡಿಸ್ಮಿಸ್ ಮಾಡ್ತೀವಿ ಅಂದರು ಜಾಲಪ್ಪನವರೇ. ದೇವರಾಜ ಅರಸು ದೊಡ್ಡ ಮನುಷ್ಯ.

ನನ್ನ ಅವರ ವೈಷಮ್ಯ ಇದ್ದರೂ ಬಹಳ ದೊಡ್ಡ ಮನುಷ್ಯ ಆತ. ನಾನು ಸಾಗರಕ್ಕೆ ಹೋಗಿ ಅಡಿಕೆ ಖರೀದಿ ಮಾಡ್ತೀವಿ ಅಂತಬಂದು ಹೇಳಿದಾಗ ಎಲ್ಲ ವ್ಯಾಪಾರಸ್ಥರು ಬಂದು ಅವರ ಹತ್ತಿರ ಗಂಟುಬಿದ್ದರು. ಆಗ ಅವರು "No Patil, you cannot save your Ministry"ಎಂದು ಹೇಳಿದರು" Sir, I am prepared to leave the Ministry, But I cannot leave my principle "ಎಂದು ಹೇಳಿದೆ. ಆಮೇಲೆ Dr. Fakrudin Ali Ahmed ಅವರು ನನಗೆ ಟೆಲಿಫೋನ್ ಮಾಡಿ "What you have done is a good thing. I convey my approval". ಎಂದು ಹೇಳಿದರು. ಶಿಂಧೆಯವರು ಹಣ ಕೊಟ್ಟರು. ಕ್ಯಾಂಡ್ಕೊ ಬಂತು, ಇವತ್ತು ಅವರು ನನ್ನೂ ನಿಮ್ಮನ್ನೂ ಕೂಡಾ ನೆನೆಸ್ತಾರೆ ಆದರೆ ಕ್ಯಾಂಪ್ಕೊದವರು ಅದನ್ನು ಬಿಟ್ಟು ಮತ್ತೊಂದು ಮಾಡೋಕೆ ಹೊರಟಿದ್ದಾರೆ. ನಿಜವಾದ ಉದ್ದೇಶ ಅದಕ್ಕೆ ಏನಿತ್ತು ಅವರು ಅದನ್ನು ಸಾಫಲ್ಯ ಮಾಡವೊಲ್ಲರು. ಕ್ಯಾಂಪ್ಕೋದಂಥ ಕಾರ್ಖಾನೆಗಳು ಒಬ್ಬರೇ ಟೆಂಡರ್ ಹಾಕ್ತೀವಿ, ಇನ್ನೊಬ್ಬರು ಹಾಕಬಾರದು ಅಂತ ಹೋಗಿದ್ದರು. ನನಗೆ ಆಶ್ಚರ್ಯವಾಯಿತು. ರೂಲ್ ಬಿಟ್ಟು ಒಬ್ಬರೇ ಟೆಂಡರ್ ಹಾಕ್ತಿವಿ ಎಂದರೆ ಹೇಗಪ್ಪ? ಮನಾಪಲಿ ಆಗುತ್ತದೆ. ಅದಕ್ಕೆ ನಾನು ಅವತ್ತು ಡಿ.ಸಿ.ಯವರಿಗೆ ಹೇಳಿದೆ " it cannot be allowed even if it is own institution"

ಈ ದೃಷ್ಟಿಯಿಂದ ನಾವು ಮಾಡಬೇಕು. ಇವತ್ತು ಏನಾಗಿದೆ ಎಂದರೆ ರೈತರ ಮಾಲಿಗೆ ಸರಿಯಾಗಿ ಧಾರಣೆ ಬರಬೇಕಾದರೆ ನಿಮ್ಮ ದಿಸೆಯಲ್ಲಿ ಯಾವುದಾದರೂ ವೈಜ್ಞಾನಿಕ ಚಿಂತನೆ ಇದ್ದರೆ ನಾನು ತಿದ್ದುಕೊಳ್ಳಲು ತಯಾರಿದ್ದೇನೆ ಆದರೆ ನನ್ನ ದೃಷ್ಟಿಯಲ್ಲಿ there must be a purchasing agency ನಮ್ಮಲ್ಲಿ ಏನಾಗಿದೆ ಅಗ್ರಿಕಲ್ಚರ್ ಗೂಡ್ಸ್‌ಗೆ ಕ್ರೆಡಿಟ್ ಸೊಸೈಟಿಗಳು ಸಾಲ ಕೊಡ್ತವೆ. ಅವರು ಮಾಲನ್ನು ಪರ್ಚೇಸ್ ಮಾಡಿ ಅದನ್ನು ಮಾರ್ಕೆಟಿಂಗ್ ಸೊಸೈಟಿಗಳಿಗೆ ತರುತ್ತಾರೆ. ಆದರೆ ಖರೀದಿ ಮಾಡಬೇಕು. ಅಂದರೆ ಮತ್ತೆ ನಾವು ಖಾಸಗಿಯವರಂತೆ ಹೋಗಬೇಕು. ಆದಾದ ಹೊರತು ತಮಗೆ ವ್ಯವಹಾರ ಇಲ್ಲ. ಅದಕ್ಕೆ ಎಲ್ಲಿಯವರೆಗೆ ಖರೀದಿ ಸಂಘಗಳು ಸಹಕಾರ ಸಂಘಗಳ ಮೂಲಕ ನಡೆಯುವುದಿಲ್ಲವೋ ಎಲ್ಲಿಯವರೆಗೆ ಅಂಥ ಸಂಘಗಳಿಗೆ ಸಾಕಷ್ಟು ಹಣದ ಸೌಕರ್ಯ ಆಗುವುದಿಲ್ಲವೋ ಅಲ್ಲಿಯತನಕ ರೈತರಿಗೆ ಸರಿಯಾದ ಧಾರಣೆ ಬರುವುದಿಲ್ಲ, ಅದಕ್ಕಾಗಿ ಪ್ರೊಸೆಸಿಂಗ್ ಸೊಸೈಟಿಗಳು ತಾಲ್ಲೂಕಿಗೆ ಒಂದಾಗಬೇಕೆಂಬುದು ನನ್ನ ಅಭಿಪ್ರಾಯ 179 ತಾಲೂಕುಗಳಲ್ಲಿ 179 ಪ್ರೊಸೆಸಿಂಗ್ ಸೊಸೈಟಿ ಆಗಬೇಕು. ನೆಹರೂ ಒಂದು ಮಾತು ಹೇಳಿದರು. ನಮ್ಮಂಥವರು ಅವರ ಹತ್ತಿರ ಹೋಗಿ ಇದನ್ನು ಸಹಕಾರಿಗಳ ಕೈಗೆ ಕೊಟ್ಟರೆ

"ಮಂಗನ ಕೈಗೆ ಮಾಣಿಕ್ಯ . ಕೊಟ್ಟ ಹಾಗೆ" ಎಲ್ಲಾ ತಿಂದುಹಾಕಿ ಹತ್ತಿಬಿತ್ತಿ ಹೋಗುತ್ತಾರೆ ಎಂದಿದ್ದಕ್ಕೆ ಅವರು ಹೇಳಿದರು. Let them discuss, decide and come to decision. Let them commit -100 mistakes. We shall correct it later on. ಎಂದು ಹೇಳಿದರು. ಇದು ಒಂದು ವೈಕುಂಠಬಾಳಿಗ ಅವರು ಒಂದು ಮಾತು ಹೇಳಿದ್ದಾರೆ. ನಾನು ಸಣ್ಣವನಿದ್ದಾಗ ಅವರ ಹತ್ತಿರ ಹೋಗಿದ್ದೆ ನಾನು ಒಬ್ಬ ದೊಡ್ಡ ಮನುಷ್ಯನ ವಿರುದ್ಧ ಒಂದು ತಕರಾರು ತೆಗೆದುಕೊಂಡುಹೋಗಿದ್ದೆ, ಅವರು ಒಂದು ಸೊಸೈಟಿ ಚೇರ್ಮನ್ ಆಗಿದ್ದರು ಅವರ ಬಗ್ಗೆ ಹೇಳಿದೆ. He was Known as the Karnataka King ಅಂಥವರ ಬಗ್ಗೆ ಹೇಳಿದಾಗ ಅವರು ಕೇಳಿದರು. What is that ಹಿಂಗೆ ಎಲ್ಲ ಲಕ್ಷಗಟ್ಟಲೆ ಹೊಡೆದಿದ್ದಾರೆ ಎಂದು " Alright, Even if it is done, What worng is there? Let him do it, He is a Co-operator, He served the Movement for 25 years.We shall recover it by slow methods" ಎಂದರು. ಅದನ್ನು ಬಿಟ್ಟು ಬಿಟ್ಟರು ಅಂತ ಅಲ್ಲ, ಮರುದಿವವೇ ಆಫೀಸರನ್ನು ಕಳಿಸಿ

ತಪಾಸುಮಾಡಿ ವಸೂಲಿ ಮಾಡಿದರು. ಆದರೆ ಹೇಳುವುದು ಮಾತ್ರ ನನ್ನ ಎದುರಿಗೆ ಹೇಳಿದರು ಇವತ್ತು ಆ ದೊಡ್ಡ ಮನುಷ್ಯರ ಮಾತನ್ನು ನಾವು ನೆನೆಯಬೇಕಾಗಿದೆ. ಆದ್ದರಿಂದ ಸಹಕಾರಿ ಸಂಘಗಳ ಮೇಲೆ ಅನೇಕ ಜನ ಆರೋಪ ಮಾಡುತ್ತಿದ್ದಾರೆ. ಎಲ್ಲಾ ಸಹಕಾರಿ ಸಂಘಗಳ ಕೂಡಿ ಅದಂಥ ಮಿಸ್ ಅಪ್ರೊಪ್ರಿಯೇಷನ್ ಎಷ್ಟಿದೆ ಲೆಕ್ಕಾಹಾಕಿ ಜಾಲಪ್ಪನವರೇ? ನಮ್ಮದು ಒಂದು ಸೋಪ್ ಫ್ಯಾಕ್ಟರಿ ಆಗುವುದಿಲ್ಲ, ಅಲ್ಲಿಗೆ ಮಾತ್ರ ಕೊಡ್ತೀವಿ, ಆಫೀಸರ್ ಬೇಕಾದ್ದು ಮಾಡಲಿ ಎಂದು ಸಹಕಾರಿ ಸಂಘಕ್ಕೆ ಎಂದರೆ ಮಡಿ ಮೈಲಿಗೆ ಎನ್ನುತ್ತೇವೆ. ಇದ್ಯಾಕೆ? ನಮ್ಮಲ್ಲಿ 4 ಸಾವಿರ ಸಹಕಾರಿ ಸಂಘಗಳು ಕೈಬಿಟ್ಟಿರುವುದು. 28 ಸಾವಿರ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಅದರಲ್ಲಿ 1 ಸಾವಿರ ಎರಡು ಸಾವಿರ ಸಂಘ ಬಾನಗಡಿ ಮಾಡಬಹುದು. ಮಾಡಲಿ, ತಿದ್ದೋಣ ಅವರನ್ನು ಅವರು ಕೊಡಲಿಲ್ಲ ಎಂದರೆ ನಾವು ಕೊಡೋಣ We shall contribute and give it. It is a training course ತಮಗೆಲ್ಲಿದೆ ಟ್ರೈನಿಂಗ್ ಕೋರ್ಸ್, ನಾನು ಮಂತ್ರಿಯಾಗಿ ಬರಬೇಕಾದರೆ ಯಾವ ಟ್ರೈನಿಂಗ್ ಕೋರ್ಸ್ ಇದೆ? ಏನೂ ಇಲ್ಲಾ, ಹಂಗೇ ಬರುತ್ತೇವೆ, ಮಾತಾಡೋಕೆ ಬರೋಲ್ಲ, ಮೀಟಿಂಗ್ ಹೇಗೆ ಮಾಡಬೇಕು ಅನ್ನೋದು ಬರೋದಿಲ್ಲ. ಸಹಕಾರಿ ಸಂಘಗಳಿಗೆ ಹೋಗುವವರಿಗೆ ಟ್ರೈನಿಂಗ್ ಆಗಬೇಕು.

ಆ ಟ್ರೈನಿಂಗ್ ಕೋರ್ಸ್ ಈ ಸಹಕಾರಿ ಸಂಘ, ಈ ದೃಷ್ಟಿಯಿಂದ ಇವನ್ನು ಸಾಂಘಿಕ ದೃಷ್ಟಿಯಿಂದ ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಕೊಟ್ಟ ಎಲ್ಲಾ ಸಲಹೆಗಳನ್ನೂ ಬರೆದುಕೊಂಡಿದ್ದೇನೆ, ಅವನ್ನು ಪರಿಶೀಲನೆ ಮಾಡಿ, ಯಾವುದು ನನ್ನಿಂದ ಮಾಡಲಿಕ್ಕೆ ಸಾಧ್ಯ ಇದೆಯೋ ಅವೆಲ್ಲವನ್ನೂ ಚಾಚೂ ತಪ್ಪದೆ ಜಾರಿ ಮಾಡಲಿಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್: ಮಾನ್ಯ ಸಚಿವರು, ಕನಿಷ್ಟ ಚೆಕ್ ಮೂಲಕ ರೈತರಿಗೆ....

ಶ್ರೀ ಕೆ.ಹೆಚ್. ಪಾಟೀಲ್: ಆಗಲೇ ಹೇಳಿದೆ ಅದನ್ನು, ಮೋಡ್ ಆಫ್ ಪೇಮೆಂಟ್ ಹೇಗೆ ಎಂಬ ಬಗ್ಗೆ ಆಲೋಚನೆ ಮಾಡಿ, ಏಕಾಂತಯ್ಯನವರು, ನೀವು ಇತರರು ಹೇಳಿರುವುದರ ಬಗ್ಗೆ ನನಗೂ ಸರಿ ಇದೆ. ಚೆಕ್ ಮೂಲಕ ಕೊಡಬೇಕು ಎಂಬ ಬಗ್ಗೆ. ಜಾಲಪ್ಪನವರನ್ನೂ ಕನ್‌ಸಲ್ಟ್ ಮಾಡಿ ಒಂದು ನಿರ್ದಿಷ್ಟ ನೀತಿ ನಿರೂಪಣೆ ಮಾಡೋಣ, ಅದಾಗದಿದ್ದರೆ ಚೆಕ್ ಮೂಲಕ ಕೊಡಲಿಕ್ಕೆ ಬಂದೇ ಬರುತ್ತದೆ. ಆದರೆ ಚೆಕ್‌ನ್ನು ಮಾರ್ಕೆಟ್ ಕಮಿಟಿ ಮೂಲಕ ಕೊಡುವುದಕ್ಕೆ ಬರುತ್ತದೆಯೋ ಇಲ್ಲವೋ ಎಂದು ವಿಚಾರ ಮಾಡ್ತೀನಿ, ಅದಕ್ಕೆ ಬೈಲಾದಲ್ಲಿ ಪ್ರಾವಿಷನ್ ಇದೆ.

ಶ್ರೀ ಆರ್.ಎಲ್ ಜಾಲಪ್ಪ: ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಪೇಜ್ 27ರಲ್ಲಿ ಐಟಂ 17ರಲ್ಲಿ "to levy market fee at the rate of 80% in case of co-operative societies. ಎಂದು ಇದೆ, I cannot understand? ಅದು ಪ್ರಿಂಟಿಂಗ್ ಮಿಸ್ಟೇಕೇ ಏನು ನೋಡಿ. Even if it is 8%, how can you levy it?

Sri K.H. Patil: At the rate of 80% of the produce that they are selling. ಅದರ ಮೇಲೆ ರೇಟನ್ನು ಕ್ಯಾಲ್‌ಕುಲೇಟ್ ಮಾಡಬೇಕು. ಉಳಿದವರಿಗೆ ನೂರು ಪರ್‌ಸೆಂಟ್ ಎಂದು ಮಾಡುತ್ತೇವೆ. ನೂರು ರೂಪಾಯಿ ಇದ್ದರೆ ಲೆವಿಯನ್ನು ವಸೂಲು ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ: ನೂರು ರೂಪಾಯಿ ಇದ್ದಾಗ...

ಶ್ರೀ ಕೆ.ಹೆಚ್. ಪಾಟೀಲ್: ನೂರು ರೂಪಾಯಿ ಇದ್ದಾಗ ಲೆವಿಯನ್ನು ವಸೂಲು ಮಾಡುತ್ತೇವೆ. ಅವರಿಗೆ 70 ರೂಪಾಯಿ ಇದ್ದಾಗ ಮಾಡುತ್ತೇವೆ. ಇಲ್ಲಿ ಯಾರಿಗೆ

ಕಮೀಷನ್ನು ಕೊಡುತ್ತೇವೆ ಎಂದರೆ ಕೋ-ಆಪರೇಟಿವ್ ಸೊಸೈಟಿಗಳಿಗೆ ಕೊಡುತ್ತೇವೆ. 20 ಪರ್‌ಸೆಂಟ್ ಕಮೀಷನ್ನು ಕೊಡುತ್ತೇವೆ. 80 ಪರ್‌ಸೆಂಟ್ ಮೇಲೆ ರಿಕವರಿ ಮಾಡುತ್ತೇವೆ. That is the principle.

Sri.R.L. Jalappa: So you are collecting 80 paise per hundred.

ಶ್ರೀ ಕೆ.ಹೆಚ್. ಪಾಟೀಲ್: ಇನ್ನೊಂದು ಕರೆಕ್ಷನ್ ಮಾಡಿಕೊಳ್ಳಬೇಕು. 16ನೇ ಪೇಜ್‌ನಲ್ಲಿ 1 ಪರ್ ಹೆಡ್ ಎಂದು ಇದೆ. ಅದರೆ ಎರಡು ಪರ್ ಹೆಡ್. ಎರಡು ರೂಪಾಯಿಗಳು ಇದ್ದದ್ದು 5 ರೂಪಾಯಿಯಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ: ಅದೂ ಜಾಸ್ತಿ ಆಯಿತು.

"for the words "two rupees per head" and 'twenty-five paise per head' the words 'five rupees per head' and one rupee per head' shall respectively be substituted. ಏತಕ್ಕೆ ಸ್ವಾಮಿ? The market of the cattle has gone up and proportionally the commission will be more.

ಶ್ರೀ ಕೆ.ಹೆಚ್. ಪಾಟೀಲ್: ಏತಕ್ಕೆ ಎಂದರೆ ಸರ್ಕಾರದಲ್ಲಿ ರೇಟ್ ಜಾಸ್ತಿ ಆಯಿತು.

ಶ್ರೀ ಆರ್.ಎಲ್. ಜಾಲಪ್ಪ: ಯಾವುದು ರೇಟು?

ಶ್ರೀ ಕೆ.ಹೆಚ್. ಪಾಟೀಲ್: ಏತಕ್ಕೆ ಎಂದು ಹೇಳುತ್ತೇವೆ, ಮಾರುಕಟ್ಟೆ ಯಾರ್ಡ್‌ನಲ್ಲಿ ಕ್ಯಾಟ್ಲ್ ಸಲುವಾಗಿ ಪತ್ರಿಕೆಯಲ್ಲಿ ಹೆಚ್ಚು ಫೆಸಿಲಿಟೀಸ್ ಕೊಡಿ ಎಂದು ಹೇಳಿದ್ದೇವೆ, ಕ್ಯಾಟ್ಲ್ ಸೆಡ್ ಕಟ್ಟಿ ಎಂದು ಹೇಳಿದ್ದೇವೆ. ಅದಲ್ಲದೇ ವೆಟರ್‌ನರಿ ಡಿಸ್ಪೆನ್ಸರಿ ಮಾಡಿ ಎಂದು ಹೇಳಿದ್ದಾರೆ. ವೆಟರ್‌ನರಿ ಡಿಸ್ಪೆನ್ಸರಿಯನ್ನು ಮಾಡದೇ ಅನೇಕ ಕಡೆ ಮಾರುಕಟ್ಟೆ ಕಮಿಟಿಯಲ್ಲಿ ತೊಂದರೆಯಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ: ಕೆಲವು ಕಡೆ ಎಕ್ಸೆಸ್ ಮನಿ ಇದೆ. ಏತಕ್ಕೆ ಇದನ್ನು ಬಡವರ ತಲೆ ಮೇಲೆ ಹಾಕುತ್ತೀರಿ. ಇದನ್ನು ಕಡಿಮೆ ಮಾಡಿ.

SRI.K.H.PATIL : I have no quarrel. If it is necessary, we can later on amend it.

ಶ್ರೀ ಆರ್.ಎಲ್. ಜಾಲಪ್ಪ: ಇನ್ನೊಂದು ವಿಷಯ. ತಾವು ನಮ್ಮನ್ನು ಕರೆದು ಚರ್ಚೆ ಮಾಡಿದಾಗ ನಾನು ಓದಿದ್ದೆ. ನನಗೆ ಜ್ಞಾಪಕ ಇದೆ. ಯಾವ ಮಾರುಕಟ್ಟೆ ಕಮಿಟಿಗಳಲ್ಲಿ, ಕಮಿಷನ್ ಏಜೆಂಟ್ಸ್‌ನ್ನು ತೆಗೆಯಬೇಕು ಎಂದು ಹೇಳುತ್ತಾರೆ, ಅವರನ್ನು ಆಗ ತೆಗೆಯಬಹುದು ಎಂದು ಹೇಳಿ ಒಂದು ಪ್ರಾವಿಷನ್ ಇಟ್ಟಿದ್ದೆ. ಇದರಲ್ಲಿ ಅದು ಕಾಣಿಸುತ್ತಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್: ಇದರಲ್ಲಿ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ನನಗೆ ಗೊತ್ತು, ಅದಕ್ಕೆ ನಿಮ್ಮ ಪಾರ್ಟಿಯವರು ಒಪ್ಪುವುದಿಲ್ಲ ಎಂದು ನನಗೆ ಗೊತ್ತು.

ಶ್ರೀ ಕೆ.ಹೆಚ್. ಪಾಟೀಲ್: ರೈತರು ಯಾವ ಕಮಿಟಿಯವರು ಬೇಡ ಎಂದು ಹೇಳುತ್ತಾರೋ ಅಂಥ ದಳ್ಳಾಳಿಗಳನ್ನು ತೆಗೆದುಬಿಡಬೇಕು ಎಂದು ಮಾಡಿದ್ದೇವೆ. ಅದು ಇಲ್ಲಾ. ಅದನ್ನು ಒಪ್ಪಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ: ಎಲ್ಲೆಲ್ಲಿ ವೆಸ್ಟೆಡ್ ಇಂಟರೆಸ್ಟ್ ಇದೆ, ನಿಮ್ಮ ಪಾರ್ಟಿಯೂ ಅಷ್ಟೆ, ನಮ್ಮ ಪಾರ್ಟಿಯೂ ಅಷ್ಟೆ. ಯಾರ್ಯಾರು ಯಾವ ಯಾವ

ಪಾರ್ಟಿಯೊಳಗೆ ಕಮೀಷನ್ ಏಜೆಂಟ್ಸ್ ಇದ್ದಾರೆ, ಆ ಪಾರ್ಟಿಗಳು ಯಾವುದನ್ನೂ ಒಪ್ಪುವುದಿಲ್ಲ. ರೈತ ಎಚ್ಚೆತ್ತುಕೊಳ್ಳುವವರೆಗೂ ಯಾವ ಪಾರ್ಟಿಗಳೂ ಇದನ್ನು ಒಪ್ಪುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್: ಇದು ವೆಸ್ಟೆಡ್ ಇಂಟರೆಸ್ಟ್ ಆಗಿದ್ದರೆ ಇಷ್ಟೊಂದು ಪ್ರಗತಿಗೆ ಇದು ಬರುತ್ತಿರಲಿಲ್ಲಾ?

ಶ್ರೀ ಆರ್.ಎಲ್. ಜಾಲಪ್ಪ: ಏನು ಪ್ರಗತಿ ಇದೆ ಸ್ವಾಮಿ? ನಾನ್ ಲೆವಿ ಒಂದನ್ನು ತೆಗೆದುಹಾಕಿದ್ದೀರಿ. That we thank you very much. There is no other progress in this.

ಶ್ರೀ ಕೆ.ಹೆಚ್. ಪಾಟೀಲ್; ಯಾವುದಾದರೂ ಬದಲಾವಣೆ ಮಾಡುವುದು ಇದ್ದರೆ ಮತ್ತು ಇನ್ನು ಅಮೆಂಡ್‌ಮೆಂಟ್ ಮಾಡಿ ತರೋಣ. ಆ ದೃಷ್ಟಿಯಿಂದ ಎಲ್ಲಾ ಸಲಹೆಗಳನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಸದಸ್ಯರುಗಳಿಗೆ ನಾನು ವಂದಿಸಿ ಮತ್ತು ಈ ಬಿಲ್ಲನ್ನು ಸರ್ವಾನುಮತದಿಂದ ಪಾಸು ಮಾಡಬೇಕು ಎಂದು ಅವರನ್ನು ನಾನು ಕೇಳಿಕೊಳ್ಳುತ್ತೇನೆ. ಇದಾದಮೇಲೆ ಕ್ಲಾಸ್ ಬೈ ಕ್ಲಾಪ್ ಮಾಡುವಾಗ ನಾನು ಈ ಅಮೆಂಡ್‌ಮೆಂಟನ್ನು ಮೂವ್ ಮಾಡುತ್ತೇನೆ.

+ ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಉಪಾಧ್ಯಕ್ಷರೇ, ಒಂದೇ ಒಂದು ವಿಷಯದ ಬಗ್ಗೆ ನಮ್ಮ ಸಚಿವರು ಅವರ ತೀರ್ಮಾನವನ್ನು ಹೇಳಲಿಲ್ಲ. ಸರ್ಕಾರಿ ವಸ್ತುಗಳನ್ನು ಹರಾಜು ಮಾಡುವಾಗ ಯಾವುದೇ ಒಂದು ಬೆಲೆಯನ್ನು ನಿಗದಿ ಮಾಡಿ ಅದಕ್ಕಿಂತ ಕಡಿಮೆ ಬೆಲೆಗೆ ಹರಾಜನ್ನು ಕೂಗಬಾರದು ಎನ್ನತಕ್ಕಂಥ ಒಂದು ಪದ್ಧತಿ ಇದೆ. ಅದೇ ಪದ್ಧತಿಯನ್ನು ರೈತನ ಬೆಳೆಗಳಿಗೂ ಎಲ್ಲಾ ಮಾರುಕಟ್ಟೆಗಳಲ್ಲಿ ಅಳವಡಿಸುವಂಥ ಒಂದು ಪ್ರಯತ್ನವನ್ನು ಮಾಡುತ್ತೀರಾ, ಎಂದು ನಮ್ಮ ಮಾನ್ಯ ಸದಸ್ಯ ಬಾಬಾಗೌಡ ಪಾಟೀಲರು ಕೇಳಿದ್ದಕ್ಕೆ ಯಾವ ಸ್ಪಷ್ಟವಾದ ಅಭಿಪ್ರಾಯವನ್ನೂ ಏನೂ ಹೇಳಲಿಲ್ಲ. ನಾನು ಹೇಳುವುದು state recomended price ಅಂತ ಎಂದು ಏನೋ ಹೇಳುತ್ತೀರಲ್ಲಾ, ಅದರಿಂದ ಕೆಳಗೆ ಹರಾಜನ್ನು ಕೂಗದೇ ಇರತಕ್ಕಂಥ ಒಂದು ನಿಯಮವನ್ನು ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್: ವೈಜ್ಞಾನಿಕವಾಗಿ ನನ್ನ ನಿಮ್ಮ ಡಿಫರೆನ್ಸ್ ಆಗುತ್ತದೆಯೋ ಗೊತ್ತಿಲ್ಲ. ಜಗತ್ತಿನ ಎಲ್ಲಾ ವಸ್ತುಗಳ ಬೆಲೆಗಳನ್ನು ನಿರ್ಧಾರ ಮಾಡುತ್ತಾರೆ. ರೈತರ ಮಾಲಿಗೆ ಬೆಲೆಗಳು ನಿರ್ಧಾರ ಮಾಡುವುದಕ್ಕೆ ಯಾವುದು ಅಧಾರಗಳೇ ಇಲ್ಲ. ಯಾವ ಆಧಾರಬೇಕು ಅಂದರೆ ನಾನೂ ನಿಶ್ಚಿತವಾಗಿ ಕವರ್ ಮಾಡುತ್ತೇನೆ. ಮಿನಿಮಂ ಪ್ರೈಸ್ ಫಿಕ್ಸ್ ಮಾಡುತ್ತಾರೆ. ಮಿನಿಮಂ ಪ್ರೈಸ್ ಕಾಟನ್ ಸಲುವಾಗಿ 700 ರೂಪಾಯಿ ಎನ್ನುತ್ತಾರೆ. 1100 ರೂಪಾಯಿಗೆ ಮಾರಾಟ ಮಾಡುವುದಕ್ಕಾಗುವುದಿಲ್ಲ 700 ರೂಪಾಯಿಗೆ ಯಾರು ಕೊಡುತ್ತಾರೆ. Therefore it has no use ಎಂದು ನನ್ನ ಅಭಿಪ್ರಾಯ.

Prof. M.D. Nanjunda Swamy: To avoid distress sales, the state should interfere and announce state recommended prices. This is a simple price protection law I want this govt.to make. ಇದನ್ನು ಮಾಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್: ಅದು ಆಗಬೇಕಾದರೆ the state exchequer must be very sound.

ಅವರು ಖರೀದಿ ಮಾಡಬೇಕಾಗುತ್ತದೆ. ಯಾರು ಖರೀದಿ ಮಾಡುವುದಿಲ್ಲ ಎಂದರೆ ನಾವು ಖರೀದಿ ಮಾಡುತ್ತೇವೆಂದು ಹೋಗಬೇಕು.

PROF. M.D. NANJUNDA.SWAMY: No. I know you are incapable of buyuing even one crop. I know you are incapable of doing it. What I am asking you to do is, male a simple price protection legislation, a simple price protection law where in you protect the prices by merely ennouncing the state recommended prices.

ಶ್ರೀ ಕೆ.ಹೆಚ್. ಪಾಟೀಲ್: ನೀವೊಂದು ಹೇಳುತ್ತೀರಿ, ನಾವು ಒಂದು ಹೇಳುತ್ತೇವೆ. ನೀವು ನಾವು ಕುಳಿತು ಮಾತನಾಡೋಣ, ನಿಜವಾಗಿಯೂ ಇಬ್ಬರ ಉದ್ದೇಶ ಒಂದೇ. ನಿಮ್ಮದ್ದು ತಪ್ಪೋ ನಮ್ಮದ್ದು ತಪ್ಪೋ ನನಗೆ ತಿಳಿದಿಲ್ಲ, ಉದ್ದೇಶ ಒಂದೇ ಇರುವುದರಿಂದ ಯಾವ ರೀತಿ ಸಾಧಿಸಬೇಕು ಎನ್ನುವ ಕಡೆ ತೀವ್ರವಾದ ಗಮನವನ್ನು ಹರಿಸುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ: ಒಂದೇ ಒಂದು ವಿವರಣೆಯನ್ನು ಮಾನ್ಯ ಮಂತ್ರಿಯವರಿಂದ ಕೇಳಲಿಕ್ಕೆ ಬಯಸುತ್ತೇನೆ. ತಾವು ಪ್ರತಿ ತಾಲ್ಲೂಕಿನಲ್ಲಿರುವ ಟಿಎಪಿಎಂಎಸ್ ಅವುಗಳನ್ನು ಬಲಪಡಿಸಬೇಕು ಮತ್ತು ರೆಗ್ಯುಲೇಟೆಡ್ ಮಾರುಕಟ್ಟೆ ಕಮಿಟಿ ಅವರಣದಲ್ಲಿ ವ್ಯಾಪಾರ ಮಾಡಲಿಕ್ಕೆ ಸಹಾಯ ಮಾಡಬೇಕು ಎಂಬ ಮಾತನ್ನು ಪದೇಪದೇ ಹೇಳುತ್ತಿದ್ದೀರಿ, ಅದರ ಬಗ್ಗೆ ಸಹಾಯ ಮಾಡಲಿಕ್ಕೆ ಯಾವುದಾದರೂ ನಿಶ್ಚಿತವಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ದಳ್ಳಾಳಿಗಳು ಅಥವಾ ಖರೀದಿದಾರರು, ಅವರ ಜೊತೆಯಲ್ಲಿ ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ನಿಂದಾಗಲಿ, ಅಥವಾ ಬೇರೆ ಸಹಕಾರಿ ಸಂಸ್ಥೆಗಳಿಂದ ವ್ಯಾಪಾರ ಮಾಡಲಿಕ್ಕೆ ಏನಾದರೂ ಆಲೋಚನೆ ಇಟ್ಟುಕೊಂಡಿದ್ದೀರಾ? ಬೇರೆ ಸಹಕಾರ ಸಂಸ್ಥೆಗಳಿಂದ ಏನಾದರೂ ಖರೀದಿ ಮಾಡಲಿಕ್ಕೆ ತಯಾರಿದ್ದೀರಾ?

**(MADAM DEPUTY SPEAKER IN THE CHAIR)**

ಶ್ರೀ ಕೆ.ಹೆಚ್. ಪಾಟೀಲ್: ಯೋಗ್ಯವಾದ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವಿಚಾರಮಾಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಅಮೇಲೆ ತೆಗೆದುಕೊಳ್ಳೋಣವೆಂದು ಹೇಳಿದ್ದೀರಿ, ಯಾವಾಗ ತೆಗೆದುಕೊಳ್ಳುತ್ತೀರಿ.

ಉಪಸಭಾಧ್ಯಕ್ಷಣಿಯವರು: ಮಧ್ಯೆ ತೆಗೆದುಕೊಳ್ಳುವುದು ಬೇಡ, ಓಟಿಗೆ ಹಾಕಿದ ಮೇಲೆ ತೆಗೆದುಕೊಳ್ಳೋಣ. ಅವರದೇ ಬಿಲ್ ಇದೆ ಅವರು ಇಲ್ಲೆ ಇರುತ್ತಾರೆ.

ಉಪಸಭಾಧ್ಯಕ್ಷಣಿಯವರು ಪ್ರಸ್ತಾವ ಏನೆಂದರೆ " ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ(ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳು(ತಿದ್ದುಪಡಿ) ವಿಧೇಯಕ್ಕೆ 1991 ಅನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 14ರವರೆಗೆ

ಉಪಸಭಾಧ್ಯಕ್ಷಣಿಯವರು: "ಖಂಡ2 ರಿಂದ ಖಂಡ 14ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 14ರವೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

CLAUSE 15

MADAM DEPUTY SPEAKER: There is an amendment to clause 15. The Hon.Minister may move the amendment.

SRI K.H.PATIL (HON.MINISTER FOR COOPERATION):

I move:

"That in clause 15, in sub-clause (ii) the figure, brackets and word "(2) and " shall be omitted."

Madam Deputy Speaker: The question is, "That in clause 15 in sub-clause (ii)the figure,brackets and word "(2)and" shall be omitted ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿಯಾದ ಖಂಡ 15 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 16 ರಿಂದ 45 ಎರಡೂ ಸೇರಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "ಖಂಡ 16ರಿಂದ 45 ಎರಡೂಸೇರಿ, ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಖಂಡ 16ರಿಂದ 45ರವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 46ಕ್ಕೆ ತಿದ್ದುಪಡಿ

Sri K.H.Patil: I beg to move: "That clause 46 shall be omitted."

ಉಪಾಧ್ಯಕ್ಷರು: ಖಂಡ 46ಕ್ಕೆ ಮಾನ್ಯ ಮಂತ್ರಿಗಳು ಸೂಚಿಸಿರತಕ್ಕ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ. "that clause 46 shall be omitted"

ತಿದ್ದುಪಡಿ ಅಂಗೀಕರಿಸಲ್ಪಟ್ಟಿತು. ಮತ್ತು ಖಂಡ 46ನ್ನು ತಿರಸ್ಕರಿಸಲಾಯಿತು.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ:

ಖಂಡ 47 ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಖಂಡ 47 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 48ಕ್ಕೆ ತಿದ್ದುಪಡಿ

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿ): ಮಾನ್ಯ ಅಧ್ಯಕ್ಷರೆ, ಖಂಡ 48ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That for clause 48 of the said bill, the following shall be substituted, namely:-

"48. Insertion of new section 106A: After section 106 of the principal act, as so substituted, the following shall be inserted, namely:-

106A. Sitting fees and allowances to chairman, Vice chairman and other members: The chairman, Vice-Chairman and other members shall receive such sitting fee and other allowances as may be specified by regulations."

ಉಪಾಧ್ಯಕ್ಷರು: ಖಂಡ 48ಕ್ಕೆ ಮಾನ್ಯ ಮಂತ್ರಿಗಳು ಸೂಚಿಸಿರತಕ್ಕ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ "That for clause 48 of the said bill, the following shall be constituted, namely:-

"48.Insertion of new section 106A: After section 106 of the principal act, as so substituted, the following shall be inserted, namely:

106A.Sitting fees and allowances to chairman, Vice chairman and other members: The chairman, Vice-Chairman and other members shall receive such sitting fee and other allowances as may be specified by regulations."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ತಿದ್ದುಪಡಿಯಾದ ಖಂಡ 48ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ 49 ಕ್ಕೆ ತಿದ್ದುಪಡಿ.

ಶ್ರೀ ಕೆ.ಹೆಚ್.ಪಾಟೀಲ್: (ಸಹಕಾರ ಮಂತ್ರಿ) ಮಾನ್ಯ ಅಧ್ಯಕ್ಷರೆ, ಖಂಡ 49 ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"That 49 of the said bill shall be omitted."

ಉಪಾಧ್ಯಕ್ಷರು: ಖಂಡ 49ಕ್ಕೆ ಮಾನ್ಯ ಮಂತ್ರಿಗಳು ಸೂಚಿಸಿರತಕ್ಕ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ:

"That 49 of the said bill shall be omitted "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಖಂಡ 49 ತಿರಸ್ಕರಿಸಲ್ಪಟ್ಟಿತು.

SRI K.H.PATIL: I beg to move:

"That clauses 47,48,49,50,51,52,53,54,55,56,57,58,59,60 and 61 shall be remembered as clauses 46,47,48,49,50,51,52,53,54,55,56,57,58 and 59 respectively."

ಉಪಾಧ್ಯಕ್ಷಿಣಿಯವರು: ಖಂಡ 50ರಿಂದ 59 ರವರೆಗೆ ಎರಡೂ ಸೇರಿದಂತೆ ಮಾನ್ಯ ಮಂತ್ರಿಗಳು ಸೂಚಿಸಿರತಕ್ಕ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ,

"That clauses 47,48,49,50,51,52,53,54,55,56,57,58,59,60 and 61 shall be remembered as clauses 46,47,48,49,50,51,52,53,54,55,56,57,58 and 59 respectively. as amemded stands part of the bill - ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ತಿದ್ದುಪಡಿಯಾದ ಖಂಡ 50 ರಿಂದ 59ರವರೆಗೆ ಖಂಡ 1 ಇತ್ಯಾದಿ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಉಪಾಧ್ಯಕ್ಷಿಣಿಯವರು: ಪ್ರಸ್ತಾಪ ಏನೆಂದರೆ ಮೊದಲನೇ ಖಂಡೆ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

**ಪ್ರಸ್ತಾವವನ್ನು ಅಂಗೀಕರಿಸಲಾಯಿತು.**

ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

### ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಹೆಚ್. ಪಾಟೀಲ್ (ಮಾನ್ಯ ಸಹಕಾರ ಖಾತೆ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, "1991ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೇ ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾವ ಏನೆಂದರೆ:

"1991ನೇ ಇಸವಿಯ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ನಿಯಂತ್ರಣ) ಮತ್ತು ಕೆಲವು ಇತರೇ ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

### ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 1991

### ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಿಣಿಯವರೆ, 1991ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷಿಣಿಯವರೇ ಈ ಕರ್ನಾಟಕ ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಬಿಲ್ 1991, ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇದರಲ್ಲಿ ವಿಶೇಷವಾಗಿ ಎಕ್ಸ್‌ಪ್ಲೈನ್ ಮಾಡತಕ್ಕಂಥದ್ದು ಏನೂ ಇಲ್ಲ. ಈ ಸಮಿತಿಯಲ್ಲಿ ಮೊದಲು ಮೂರು ಜನ ಸದಸ್ಯರು ಇದ್ದರು. ತಹಸಿಲ್ದಾರರಿಗೆ ಸೆಕ್ರೆಟರಿ ಎಂದು ಮಾಡಿದ್ದೆವು. ಕಾನೂನು ಸಲಹೆ ಕೊಡಬೇಕು ಅದೆಲ್ಲವನ್ನು ಕೊಡಬೇಕೆಂದರೆ ಲಾ ಡಿಪಾರ್ಟ್‌ಮೆಂಟ್‌ನವರು ನಮಗೆ ಸಲಹೆ ಮಾಡಿದರು ಅವರು ಮೆಂಬರ್ ಸೆಕ್ರೆಟರಿಯಾಗಿ ಇದ್ದರೆ ಸಲಹೆಯನ್ನು ಕೊಡುವುದಕ್ಕಾಗುತ್ತದೆ, ನಾಳೆ ಕಾನೂನಿಗೆ ವಿರುದ್ಧವಾಗಿ ಯಾವುದೇ ಮೆಂಬರ್ ಮಾಡಿದರೂ ಕೂಡ ಕನಿಷ್ಟ ಪಕ್ಷ ಅವರಾದರೂ ಪಾಯಿಂಟ್‌ಔಟ್ ಮಾಡುವುದಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಅವರು ನಮಗೆ ಸಲಹೆ ಕೊಟ್ಟಮೇಲೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಅದಕ್ಕೆ ಎಲ್ಲ ಮಾನ್ಯ ಸದಸ್ಯರು, ಎಂ.ಎಲ್.ಎ.ರವರು ಬರಿ ಸೆಕ್ರೆಟರಿ ಆಗಿದ್ದರೆ ತಾಲ್ಲೂಕು ಪಂಚಾಯತಿ ಛೇರ್‌ಮನ್ ಯಾರು ಇದ್ದಾರೆ, ಯಾರಿಗೆ ಬಹುಭಾಗ ಬರುತ್ತದೆ ಆ ತಾಲ್ಲೂಕಿನಲ್ಲಿ ಅವರೇ ಇದಕ್ಕೆ ಛೇರ್‌ಮನ್ ಆಗುತ್ತಾರೆ. ಎಲ್ಲಿ ಮಿನಿಸ್ಟರ್ ಇರುತ್ತಾರೆ, ಅಥವಾ ಸದಸ್ಯರು ಬೇಡವೆಂದು ಹೇಳುತ್ತಾರೆ. ಅಂಥ ಕಡೆ ನಾಮಿನೇಟ್ ಮಾಡಿದಂಥವರೇ ಛೇರ್‌ಮನ್ ಮಾಡುತ್ತಾರೆ. ಅದಕ್ಕೆ ತಾವು ಎಲ್ಲರೂ ಕೂಡ ಒಪ್ಪುತ್ತೀರೆಂದು ಭಾವಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಉಪಾಧ್ಯಕ್ಷಣಿಯವರೇ ಇದನ್ನು ಜಾಸ್ತಿ ಮಾಡತಕ್ಕಂಥ ಔಚಿತ್ಯವೇನೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ತಹಶೀಲ್ದಾರರು ಅಲ್ಲಿ ಇದ್ದುಕೊಂಡು ಏನು ಮೆಂಬರ್ ಸೆಕ್ರೆಟರಿಯಾಗಿ ಮಾಡಬಹುದಿತ್ತೋ ಅದೇ ಕೆಲಸವನ್ನು ಇವರು ಮಾಡಬಹುದಾಗಿತ್ತು. ಅಡ್ವೈಸ್. ಮಾಡಬಹುದಾಗಿತ್ತು, ಇದೇನು ಹೊಸದಾಗಿ ಬಂದಿಲ್ಲ. ಲ್ಯಾಂಡ್‌ಗ್ರಾಂಟ್ ಕಮೀಷನ್ ಎಂದು ಹಿಂದಿನಿಂದಲೂ ಕೆಲಸ ಮಾಡಿಕೊಂಡು